[illegible]

# ഹരാവലീ ടഗാന

ಏಳನೆಯ ಎಸಳು

# ವಂದನಾರ್ಪಣೆ

::

ಪು. ಘ. ಆಚಾರ್ಯ, ಶಿರೋಮಣಿ, ವಿದ್ವಾನ್.

೧೯೫೮

ಯುಗಪುರುಷ ಪ್ರಕಟನಾಲಯ,
ಕಿನ್ನಿಗೋಳಿ, ದ. ಕ.

ಸಂಪಾದಕರು:

ಕೊ. ಅ. ಉಡುಪ.    ಅ. ಗೌ. ಕಿನ್ನಿಗೋಳಿ.





ಬೆಲೆ: ಒಂದು ರೂಪಾಯಿ.



ಪ್ರಕಾಶಕರು:

**ಕೊಡತ್ತೂರು ಅನಂತಪದ್ಮನಾಭ ಉಡುಪ,**

ಯುಗಪುರುಷ ಪ್ರಕಟನಾಲಯ,

ಕಿನ್ನಿಗೋಳಿ, ದ. ಕ.

ಮುದ್ರಕರು:

ಆನಂದ ಪ್ರಿಂಟಿಂಗ್ ವರ್ಕ್ಸ್,

ಕಿನ್ನಿಗೋಳಿ, ದ. ಕ.

# —ಕುರಿತು

ಸಹೃದಯ ವಾಚಕ ವೃಂದ!

ನನ್ನ ಕೆಲವು ಬರಹಗಳ ಸಂಗ್ರಹವನ್ನು ನಿಮ್ಮ ಮುಂದಿಟ್ಟಿದ್ದೇನೆ. ಓದಿ ನಗಬಹುದು. ಆದರೆ ಕೇವಲ ನಿಮ್ಮನ್ನು ನಗಿಸುವುದು ಮಾತ್ರ ನನ್ನ ಗುರಿಯಲ್ಲ. ಜೊತೆಗೆ ನಮ್ಮಲ್ಲಿಯ ಹಲವು ಲೋಪದೋಷಗಳು ನಿಮ್ಮ ಕಣ್ಣಿಗೆ ಬಿದ್ದು ಮುಂದೆಯಾದರೂ ಅವುಗಳ ಶುದ್ಧಿಯಾಗಬಹುದೆಂಬುದೇ ನನ್ನ ಹೆಬ್ಬಯಕೆ.

ಜೀವನದಲ್ಲಿ "ಬರೆಯಬೇಕು, ಬರೆಯಬೇಕು" ಎಂಬ ಆಸೆಯಿತ್ತು. ಅದರಂತೆ ನಾಲ್ಕೈದು ವರ್ಷಗಳ ಹಿಂದೆ "ಜೀವನ ಲತೆ" ಎಂಬ ಕವನ ಸಂಗ್ರಹವು ಶ್ರೀ ಗುರುವಿನ ಅನುಗ್ರಹದಿಂದ ಬೆಳಕಿಗೆ ಬಂತು. ಆ ಲತೆಯು ಒಂದನೆ ಕುಸುಮು ಈಗ "ವಂದನಾರ್ಪಣೆ"ಯಾಗಿ ಅರಳಿದೆ. ಇದರ ಪರಿಮಳ ನಿಮಗೆ ಸೇರಿದರೆ ಧನ್ಯ.

ಸಾಹಿತ್ಯ ರಂಗದಲ್ಲೂ ಹೆಸರಿಗೆ ಬೆಲೆಯಿರುವಾಗ ಈ ಕಾಲದಲ್ಲಿ ನನ್ನೀ ಕೃತಿಯನ್ನು ಬೆಳಕಿಗೆ ತಂದ ಶ್ರೀ ಉಡುಪರಿಗೆ ನನ್ನ ವಂದನೆ. ನನ್ನ ಬರಹಗಳನ್ನು ಓದಿ, ಕೇಳಿ, ಪ್ರೋತ್ಸಾಹಿಸಿದ ಪ್ರಸಿದ್ಧ ಸಾಹಿತಿ ಶ್ರೀ "ನಿರಂಜನ"ರಿಗೂ, ದಲಿತವರ್ಗದ ಮುಂದಾಳುಗಳಾದ ಶ್ರೀ ಗೋಪಾಲ ಗೌಡರಿಗೂ, ತರುಣ ಸಾಹಿತಿ ಶ್ರೀ "ಪಂಚ"ರಿಗೂ ನಾನು ಋಣಿಯಾಗಿದ್ದೇನೆ.

"ಸಮಾಜದ ದುಷ್ಟ ನಡತೆಗಳನ್ನು ಎದುರು ತೆಗಳಿದರೆ ನಿಮ್ಮ ತಲೆ ಜಜ್ಜಿಹೋಗುತ್ತಿದೆ. ಈ ರೀತಿ ಸೂಚ್ಯವಾಗಿ ಹೇಳುತಿದ್ದುವ ಕೆಲಸ ಬಹಳ ಒಳ್ಳೇದು. ಮುಂದುವರಿಸಿರಿ....."

ಎಂದು ಹುರಿದುಂಬಿಸಿದ ಶ್ರೀ ನಿರಂಜನರ ಮೆಚ್ಚುನುಡಿಗಳು ಇದರಲ್ಲಿ ಎಷ್ಟರ ಮಟ್ಟಿಗೆ ಸಾರ್ಥಕವಾಗಿವೆ ಎಂಬುದು ವಾಚಕರ ಮೇಲಿದೆ. ಸಹೃದಯರ ಸಂತೋಷವೇ ನನಗೆ ಪ್ರತಿಫಲ.

ವಿಲಂಬಿ ನಿಜ ಶ್ರಾವಣ,
ಪೂರ್ಣಿಮಾ ಶುಕ್ರವಾರ,
ಚನ್ನಗಿರಿ.

ಪು. ಹ. ಆಚಾರ್ಯ.

# ಪ್ರಕಾಶಕರ ಮಾತು

ನಮ್ಮ ಯುಗಪುರುಷ ಪ್ರಕಟಣಾಲಯದ ಏಳನೆಯ ಎಸಳೆಂದು ಈ "ವಂದನಾರ್ಪಣೆ"ಯನ್ನು ವಾಚಕರಿಗೆ ಸಮರ್ಪಿಸಲು ಸಂತೋಷವಾಗುತ್ತದೆ.

"ವಂದನಾರ್ಪಣೆ"ಯ ರಚಯಿತರಾದ ಶ್ರೀ ಪು. ಹ. ಆಚಾರ್ಯರು ತಮ್ಮ ಕೃತಿಯನ್ನು ನಮ್ಮ ಪ್ರಕಟಣಾಲಯದ ವತಿಯಿಂದ ಪ್ರಕಟಿಸಲು ಅವಕಾಶ ಕಲ್ಪಿಸಿಕೊಟ್ಟ ಸಲುವಾಗಿ ಅಭಿನಂದನೆಗಳು.

ಅಂತೆಯೆ ಸುಂದರವಾದ ಮುದ್ರಣದಿಂದ ಸಹಕರಿಸಿದ ಆನಂದ ಪ್ರಿಂಟಿಂಗ್ ವರ್ಕ್ಸ್‌ನ ಗೆಳೆಯರಿಗೂ ಕೃತಜ್ಞತೆಗಳು ಸಲ್ಲಬೇಕಾಗಿವೆ.

ಕಿನ್ನಿಗೋಳಿ, ದ. ಕ.

೧೫-೯-೧೯೫೮.

**ಕೊ. ಅ. ಉಡುಪ.**

ನಾ. ಕಸ್ತೂರಿ,

ಗೊ. ರಾಮಸ್ವಾಮಿ ಅಯ್ಯಂಗಾರ್,

ನಾಡಿಗೇರ ಕೃಷ್ಣರಾಯರು,

ಬಳ್ಳಾರಿ ಬೀಚಿ.

ಹಾಸ್ಯಬ್ರಹ್ಮದ ಚತುರ್ಮುಖರು

ಇವರಿಗೆ

**ಅರ್ಪಣೆ.**

# ವಂದನಾರ್ಪಣೆ

ಈ ವಂದನಾರ್ಪಣೆ ವಾಚಕರಿಗಲ್ಲ! ನಿಮಗೆ ಸಂಪ್ರದಾಯದಂತೆ ಲೇಖನದ ಕೊನೆಯಲ್ಲಿ ಅರ್ಪಿಸುವುದಿದೆ. ಇಲ್ಲವಾದರೆ ನಾನು ಸಂಪ್ರದಾಯು ಶರಣರ ಶಾಪಕ್ಕೆ ಪಕ್ಕಾಗಬೇಕಾದೀತು. ಆರಂಭದಲ್ಲಿ ನಿಮಗೆ ವಂದನಾರ್ಪಣೆ ಯಾಕೆ ಮಾಡಿಲ್ಲಾಂದ್ರೆ ಈ ಮೊದಲು "ಬಲವಂತ ಮಾಘಸ್ನಾನ"ದಂತೆ ಅನೇಕ ಸಭೆ ಸಮಾರಂಭಗಳಲ್ಲಿ ಸೌ(ದುರ್?)ಭಾಗ್ಯವಶದಿಂದ ಭಾಗವಹಿಸಿದ್ದೀರಿ. ಆದ್ದರಿಂದ ಅಜೀರ್ಣವಾಗದಿರಲೆಂದು, ಅರ್ಥವಾಯಿತೇ?

ನಮ್ಮ ಎಷ್ಟೋ ಭೂತ (ದೈವವಲ್ಲ) ಸಂಪ್ರದಾಯಗಳಲ್ಲಿ ಈ ವಂದನಾರ್ಪಣೆಯು ಒಂದಾಗಿ ಯಾವ ಸೋಪಿನಿಂದ ತೊಳೆದರೂ ಹೋಗದಷ್ಟು ಅಂಟಿಕೊಂಡಿದೆ. ಸಭೆಗಳಲ್ಲಿ ಅಚ್ಚಾದ ಕಾರ್ಯಕ್ರಮಗಳಾದರೂ ಸಹ ಸಮಯ ಸಂದರ್ಭ ತಾಪತ್ರಯಾದಿಗಳಿಂದ ವ್ಯತ್ಯಾಸವಾಗುವುದಿದೆ. ಆದರೆ ಈ ವಂದನಾರ್ಪಣೆ ಮಾತ್ರ—

**ಶಂಕ ಕರಿದಾದೊಡಂ**
**ಶಂಕರನ ಎದೆ ಬಿಳುಪಾದೊಡಂ**
**ಪಂಕಜ ಮುರಿದೊಡಂ**
**ಸುಂಕದಾನರ ಸುಖದುಃಖ ಕೇಳ್ದೊಡಂ.**

ಸರ್ವಥಾ ಇದ್ದೇ ಇದೆ. ಈ ಮಾತು ಸುಳ್ಳಾದರೆ ಯಾವದಾದರೂ ಸಭೆಗಳಲ್ಲಿ ಸದಸ್ಯರಾಗಿಯಾದರೂ ಕಾಣಬಹುದು. ಈ ವಂದನಾರ್ಪಣೆಯ ಸ್ಥಾನ ಪಾತಾಳಲಿಂಗದಷ್ಟು ಭದ್ರ

ವಾಗಿದೆ. ಮನುಷ್ಯನಿಗೆ ಕೆಲವು ಗ್ರಹಗಳು ಪೀಡಿಸುವುದಿದೆ. ಅವುಗಳಲ್ಲಿ ಭೂತ, ಪಿಶಾಚಿ, ಯಕ್ಷ, ರಾಕ್ಷಸ, ಬ್ರಹ್ಮರಾಕ್ಷಸ, ಮೊದಲಾದವುಗಳು ಪ್ರಮುಖವಾಗಿವೆ. ಇವುಗಳ ಪೀಡೆಯನ್ನೂ ಸಹ ಷಟ್ಪ್ರಯೋಗ ಬಲ್ಲಂಥ ಮಹಾಮಹಾ ಮಂತ್ರವಾದಿಗಳು ಬಿಡಿಸಿಬಿಡುತ್ತಾರೆ. ಆದರೆ ಈ ಎಲ್ಲಾ ಗ್ರಹಗಳಿಗೂ ರಾಜ್ಯಗ್ರಹವೊಂದಿದೆ. ಅದನ್ನು ಬಿಡಿಸುವ ಮಂತ್ರವಾದಿ ಈ ವರೆಗೂ ಹುಟ್ಟಿಲ್ಲ. ಅದೇ ಧನ ಪಿಶಾಚಿ. ಇದು ಮನುಷ್ಯನನ್ನು ಮೃಗವನ್ನಾಗಿಸಿ ಬಿಡುತ್ತದೆ. ಇಷ್ಟು ಭಯಂಕರವಾದ ಧನ ಪಿಶಾಚಿಯನ್ನು ಸಹ ಈ ವಂದನಾರ್ಪಣೆಯು ಕ್ಷಣಮಾತ್ರದಲ್ಲಿ ಉಚ್ಚಾಟನೆ ಮಾಡಿಸಿ ಬಿಡುತ್ತದೆ. ಈ ವಂದನಾರ್ಪಣೆಯ ವ್ಯಾಮೋಹಕ್ಕೊಳಗಾದ ಆ ತಿರುಪತಿ ತಿಮ್ಮಪ್ಪನ ಅಪ್ಪರುಗಳು ಸಂಘ ಸಂಸ್ಥೆಗಳಿಗೆ ಧಾರಾಳವಾಗಿ ಕಾಸುಬಿಚ್ಚುತ್ತಾರೆ. “ತಮ್ಮ ಶುಭನಾಮವನ್ನು ಆ ದಿನದ ವರದಿಯಲ್ಲಿ ಸೇರಿಸಿ ವಂದನಾರ್ಪಣಾ ಪಟ್ಟಿಯಲ್ಲಿ ಹೇಳುತ್ತೇವೆ” ಈವೊಂದು ಮಾತು ಎಲ್ಲ ಪೆಟ್ಟಿಗೆಗಳಿಗೂ ಒಂದೇ ಬೀಗದಕೈ ಇದ್ದಂತೆ. ಸಹಾಯ ಮಾಡಿದವರ ಹೆಸರನ್ನು ಅಚ್ಚು ಹಾಕಿಸುತ್ತಾರೆಂಬ ಗಾಳಿಸುದ್ದಿ ಸಿಕ್ಕಿದರೂ ಸಾಕು, ಕೆಲವರು ಕೂಡಲೇ ಉದಾರ ಬುದ್ಧಿಯಿಂದ ಸ್ವಯಂಸೇವಕರಾಗಿ ಬರುತ್ತಾರೆ.

ನಮ್ಮೂರ ಶಾಲಾ ವರ್ಧಂತಿಯಲ್ಲಿ ಊರ ಮಹನೀಯರೆಲ್ಲರೂ ತಮ್ಮ ತಮ್ಮ ಮನೆಯ ಒಂದೊಂದು ಸಾಮಾನನ್ನು ತಂದು ಸಮಾರಂಭದಲ್ಲಿ ಸಹಕರಿಸಿ ಚಂದಗಾಣಿಸಿದರು. ಕ್ರಮವಾಗಿ ಸಕ್ಕರೆ ಪೊಟ್ಟಣ ಕಟ್ಟಿದವರಿಂದ ಹಿಡಿದು ಅಧ್ಯಕ್ಷರ ವರೆಗಿನವರೆಲ್ಲರಿಗೂ ಯೋಗ್ಯತಾನುಸಾರವಾಗಿ ವಂದನಾರ್ಪಣೆಯಾಯಿತು. ಪಾಪ! ಆ ವಂದನಾರ್ಪಣೆ ಮಾಡುವ ಪ್ರಾಣಿಯೂ

ಮನುಷ್ಯನಲ್ಲವೆ? ಅವನಿಗೂ ಒಂದು ಹಿಡಿ ಗಾತ್ರದ ಮಿದುಳು ತಾನೇ ಇರುವುದು? ತೋರಣಗಂಬಕ್ಕೆ ಮೂರು ಮೂರು ಬಾರಿ ಜನಕಳಿಸಿದ ಮೇಲೆ ನಿರ್ವಾಹವಿಲ್ಲದೆ ಅಟ್ಟದಲ್ಲಿ ಹಾಕಿದ ಎರಡು "ಗಳ" ತೆಗೆದುಕೊಟ್ಟಿರುವ ಶ್ರೀಮಂತ ಮಹಾಶಯರೊಬ್ಬರನ್ನು ಮರೆತೇಬಿಟ್ಟ. ಮಾರನೇ ದಿನವಲ್ಲ– ಸಭೆ ಮುಗಿದ ಮೇಲೂ ಅಲ್ಲ– ತಕ್ಷಣ ಅಲ್ಲಿಯೇ ಎದ್ದು ನಿಂತು ಮಹಾಶಯರು, ಆ ಬಡಪಾಯಿಯನ್ನು ಏಕಕಾಲದಲ್ಲಿ ಪಂಚಮಹಾಪಾತಕಗಳನ್ನು ಮಾಡಿದವನೋ ಎಂಬಂತೆ ಜರೆದೇಬಿಟ್ಟರು. ಆ ವಂದನಾಪ್ರಿಯ ಸಭಿಕರಲ್ಲಿ ಯಾರೂ ಆ ಪ್ರಾಣಿಯ ಪಕ್ಷ ವಹಿಸಲಿಲ್ಲ. ಅದು ಮೂರು ಬಾರಿ ಸತ್ತ ಹಾಗಾಗಿ ತಲೆ ತಗ್ಗಿಸಲೇಬೇಕಾಯ್ತು. ಅಷ್ಟೇ ಅಲ್ಲ. ಸಭಿಕರಿಗೆ ಕೈಮುಗಿದು ಕ್ಷಮಾಪಣೆಯನ್ನು ಕೇಳಿತು.

ಈ ವಂದನಾರ್ಪಣೆಯ ಭಾಷಾ ಶೈಲಿಯೇ ಸಾಹಿತ್ಯದಲ್ಲಿ ಪ್ರತ್ಯೇಕವಾಗಿದೆ. ಜೀವವಿಮೆಯ ಏಜಂಟರುಗಳು, ಪುರೋಹಿತರು, ಹಳ್ಳಿಯ ನಾಟಕದ ಪಾತ್ರಧಾರಿಗಳು, ಪ್ರಶ್ನೆ ಹೇಳುವವರು, ಬುಡುಬುಡಿಕೆಯವರು– ಹೇಗೆ ಇವರುಗಳಿಗೆಲ್ಲಾ ಪ್ರತ್ಯೇಕವಾದ ಭಾಷಾ ಶೈಲಿಯಿದೆಯೋ ಹಾಗೆಯೇ ವಂದನಾರ್ಪಣ ಶೈಲಿಯು ಇತರ ಭಿನ್ನವಾಗಿದೆ. ಈ ವಂದನಾರ್ಪಣೆಮಾಡುವ ಮಹಾಶಯನಷ್ಟು ಆತ್ಮವಂಚನೆಯಿಂದ ಮಾತಾಡುವುದು, ಇನ್ನಾರಿಗೂ ಇರಲಿ ಯಾವ ರಾಜಕಾರಣಿಗೂ ಸಾಧ್ಯವಿಲ್ಲ. ಅವನು ಅಧ್ಯಕ್ಷರ ಭೇಟಿಗಾಗಿ ಹತ್ತಾರು ಸಲ ಕಾದು, ಅವರ ಅನುಕೂಲಕ್ಕೆ ಸರಿಯಾಗಿ ನಾಲ್ಕಾರು ಬಾರಿ ಸಮಾರಂಭವನ್ನು ಮುಂದಕ್ಕೆ ದಬ್ಬಿ, ಅವರನ್ನು ಷೋಡಶೋಪಚಾರಗಳಿಂದ ತೃಪ್ತಿ ಪಡಿಸುವುದರಲ್ಲಿ ಸುಸ್ತಾಗಿದ್ದರೂ, ವಂದನಾರ್ಪಣೆಯ ಕಾಲದಲ್ಲಿ

"ಹಂಸಕ್ಷೀರ ನ್ಯಾಯ"ದಂತೆ ತನ್ನ ಪಾಡುಗಳನ್ನೆಲ್ಲಾ ಒತ್ತಟ್ಟಿ ಗಿರಿಸಿ ಅವರ ಅನಂತ ಗುಣಗಾನವನ್ನೇ ಮಾಡಬೇಕು. ಇದು ಅವನ ಉದ್ಯೋಗಧರ್ಮ ಅಥವಾ ಪ್ರಾರಬ್ಧಕರ್ಮವೆನ್ನಲೂ ಬಹುದು?

ಇನ್ನು "ಅಳಿದ ಊರಿಗೆ ಉಳಿದವನೇ ಗೌಡ" ಎಂಬಂತೆ ಇದ್ದೊಬ್ಬ ಭಾಷಣಕಾರನು ಅಸಂಬದ್ಧ ಪ್ರಲಾಪಮಾಡಿದರೂ ಸರಸತಿಯ ಚೊಚ್ಚಲು ಮಗ, ಬೃಹಸ್ಪತಿಯ ಅಪರಾವತಾರ ಎಂದೆಲ್ಲಾ ಹೊಗಳಿ ಅವನನ್ನೂ ಸಾಲದೆ ಅವನ ಕುಲಗೋತ್ರ ಗಳನ್ನೂ ಪ್ರಶಂಸಿಸಬೇಕು. ಇಂತಹ ಸಾವಿರಾರು ಅಂಟು ರೋಗಗಳು ಇವನ ರಕ್ತನಾಳವನ್ನು ಸೇರಿಕೊಂಡಿವೆ.

ಮತ್ತೆ ಕೆಲವು ಸಭೆಗಳಲ್ಲಿ ರಸವತ್ತಾದ ಭಾಷಣಗಳನ್ನು ಕೇಳಿ "ಗಂಟೆಗೊಂದೇ ಸ್ವರ"ದಂತಿರುವ ಇವನ ವಂದನಾರ್ಪಣೆ ಯನ್ನು ಕೇಳಲು ಬೆಂಚು ಕುರ್ಚಿಗಳಿಗೂ ಆಕಳಿಕೆ ಬರುವು ದುಂಟು. ಹಾಗೆಂದು ತನ್ನ ಕಾರ್ಯದಲ್ಲಿ ಎಳ್ಳಷ್ಟು ಲೋಪ ವಾದರೂ ಸಹ ಅದಕ್ಕೆ ಕತ್ತೆತ್ತಿ, ಕಿವಿ ನಿಮಿರಿ, ಕಾದಿರುವ ವಂದ ನಾಪ್ರಿಯರಿಂದ ಅವನ ಎಲುಬು ಚಕ್ಕುಲಿಯಾಗುವ ಸಂಭ ವವೂ ಇದೆ. ಆದ್ದರಿಂದ ಊದುವ ಶಂಖ ಊದಲೇಬೇಕು.

ಈ ವಂದನಾರ್ಪಣೆಯು ನಮ್ಮ ಸಂಸ್ಕೃತಿಯಲ್ಲಿ ಬೆರೆತು ಬಂದಿದೆಯಾದರೂ ನಿಷ್ಪ್ರಯೋಜಕ ಕಾರ್ಯಗಳಲ್ಲಿ ಇದು ಒಂದು ಎನ್ನಬಹುದು. ಸೇವಾದೃಷ್ಟಿಯಿಂದ ಸಹಾಯಮಾಡುವವರಿಗೆ ವಂದನಾರ್ಪಣೆಯು ಅಗತ್ಯವಿಲ್ಲ. ವಂದನಾರ್ಪಣೆಗಾಗಿಯೇ ಸಹಕರಿಸುವಂಥಾ ಮೂರ್ಖರಿಗೆ ಅರ್ಪಿಸುವುದು ಯೋಗ್ಯ ವಲ್ಲ. ಅಲ್ಲದೆ ಸಭ್ಯ ಸಭಿಕರ ಅಮೂಲ್ಯ ಸಮಯವೂ ವ್ಯರ್ಥ ವಾಗುವುದು. ಈ ಕಾಲವ್ಯಯದಿಂದಾಗಿ ಸಭೆಗೆ ಧ್ವನಿವರ್ಧಕ

ಮೊದಲಾದ ಸಾಮಗ್ರಿಗಳನ್ನು ಬಾಡಿಗೆಗೆ ತಂದಿದ್ದರೆ ಅವುಗಳ ಬಾಡಿಗೆಯೂ ನಿರ್ದಿಷ್ಟಕ್ಕಿಂತ ಹೆಚ್ಚಾಗುವುದು. ಇದೆಲ್ಲಕ್ಕಿಂತ ಆ ವಂದನಾರ್ಪಣೆಮಾಡುವ ಆ ಬಡಜೀವ ಎಷ್ಟೋ ಗಂಡಾಂತರಗಳಿಂದ ಪಾರಾಗುವುದು. ಹಾಲನ್ನ ಉಂಡ ಸಭಿಕರನ್ನು ಗಂಜಳದಿಂದ ಕೈತೊಳೆಸುವ ಪಾಪವೂ ತಪ್ಪುವುದು. ಇನ್ನು ಹೇಳಬೇಕಾದರೆ ವಂದನಾರ್ಪಣೆಯ ನಡುವೆ ಅಧ್ಯಕ್ಷರ ಅಧಿಕಾರ, ಮನೆತನ, ಭಾಷಣಕಾರರ ಪದವಿ, ಸ್ಥಾನ, ಮಾನ ಕೊನೆಗೆ ಶುಭನಾಮವನ್ನು ಸಹ ಅಲ್ಲಿಯೇ, ಅವರನ್ನೇ ಕೇಳಿ ಹೇಳುವಂಥಾ ಆಭಾಸಕ್ಕೂ ಆಸ್ಪದವಿಲ್ಲ. ಇಷ್ಟೇ ಅಲ್ಲ ಕೆಲವು ಮಹಿಳಾಮಣಿಗಳಿಗೆ ವಂದನಾರ್ಪಣಾ ಸಂದರ್ಭದಲ್ಲಿ ಅವರ "ಗಂಡ"ರುಗಳು ಅಲ್ಲಿಯೇ ಕೈಚೀಲ ಹಿಡಿದು ನಿಂತಿದ್ದರೆ ಅವರಿಗಾಗುವ !ಏಕಕಾಲಿಕ ಉದರ ತಲೆಶೂಲೆಗಳಿಗೆ ಧನ್ವಂತರಿಗಳನ್ನು ಹುಡುಕುವ ಪೇಚಾಟವೂ ತಪ್ಪುವುದು.

ನೀವು ಈ ಎಲ್ಲಾ ಕಾರಣಗಳನ್ನು ಸಕಾರಣಗಳೆಂದು ಒಪ್ಪುವುದಾದರೆ, ಮುಂದಿನ ಸಾಹಿತ್ಯ ಸಮ್ಮೇಳನದಲ್ಲಿ ಇದರ ಖಂಡನಾ ಸೂಚನೆಯನ್ನು ಮಂಡಿಸುತ್ತೇನೆ. ಅಲ್ಲಿಯ ವರೆಗೆ ನನ್ನನ್ನು ಬಿಟ್ಟು ಯಾವಾತನೂ ವಂದನಾರ್ಪಣೆಯನ್ನು ಸ್ವೀಕರಿಸಬಾರದು. ನಿಮ್ಮೆಲ್ಲರ ಮತವನ್ನು ನನಗೆ ಕೊಡಬೇಕು. ಇದಕ್ಕಾಗಿ ನೀವಾರೂ ಯಾವ ರೀತಿಯ ಬಹುಮಾನವನ್ನೂ (ಇಲ್ಲಿ ಲಂಚವೆಂದರೆ ಅದರ ನಿರೋಧ ಶಾಖೆಯವರು ಕೈಯೊಡ್ಡಿಯಾರೆಂದು ಹೀಗೆ ಹೇಳಿದೆ) ಕೇಳದೆ ನನ್ನೊಡನೆ ಸಹಕರಿಸಬೇಕು. ಹಾಗೆ ಸಹಕರಿಸಿದರೆ ಮಾತ್ರ ಆರಂಭದಲ್ಲಿ ಹೇಳಿದಂತೆ ನಿಮಗೆಲ್ಲರಿಗೂ ನನ್ನ ಅನಂತಾನಂತ ಹೃತ್ಪೂರ್ವಕ ವಂದನೆಗಳನ್ನರ್ಪಿಸುತ್ತೇನೆ.

# ಕವಿಯಾಗ ಹೊರಟು—

ವಿರಹವೇದನೆ ಎನ್ನುವುದು ಇತರ ವೇದನೆಗಳಿಗಿಂತ ಮಿಗಿಲಾದ್ದು. "ತ್ರುಟಿಯರ್ಯುಗಯುಗಾಯತೆ" ಎಂದು ಹೇಳಿದ್ದು ಈ ಸಮಯವನ್ನೇ ಕುರಿತು. ಈ ವಿರಹದಲ್ಲೂ ಭಾರ್ಯಾವಿರಹವಂತೂ ಕೇಳೋದೇ ಬೇಡ. ಕಾಳಿದಾಸ ಒಂದು ಕಾವ್ಯವನ್ನೇ ರಚಿಸಿಬಿಟ್ಟಿದ್ದಾನೆ. ಪುಂಡರಿಕನೆಂಬ ಋಷಿ ಕುಮಾರನಂತೂ ತನ್ನ ಪ್ರಾಣವನ್ನೇ ಬಿಟ್ಟಿದ್ದಾನೆ. ಇದು ಯಾಕೆ ಹೇಳಿದೇಂದ್ರೆ ಈ ವೇದನೆ ನನಗೂ ಪ್ರಾಪ್ತವಾಗಿದೆ.

ನಾನಿರುವುದು ಮಲೆನಾಡು ರಾಜಧಾನಿ. "ಗಂಡಸ್ಯೋ ಪರಿಪಿಟಕ" ಎಂದು ಚಳಿಗಾಲ ಬೇರೆ ಬಂದಿದೆ. ಇಲ್ಲಿಯ ಇತರ ಸುಖಭೋಗವೋ? ಪಾತಾಳಕ್ಕೆ ಇಳಿದು ಹೋಗಲು ಭೂಮಿಯಲ್ಲಿ ಬಂದು ನಿಂತಿರುವ ಅನನ್ಯ "ಇಂದ್ರಭವನ" ದಲ್ಲಿ ಊಟೋಪಚಾರ! ಎಂಥ ಉಪಚಾರಾಂತೀರಾ: ಅಳಿಯ ಅಲ್ಲ, ಗಿಳಿಯ, ಆ ಗಿಳಿಯನಿಗೊಬ್ಬ ಗೆಳೆಯ ಇದ್ದರೆ ಅವನಿಗೆ ಹೇಗೋ ಹಾಗೆ. ಇನ್ನು ಆ ಇಂದ್ರಭವನದಲ್ಲಿ ಗಂಧರ್ವ ಗಾನ ನುಸಿ ಸೊಳ್ಳೆಗಳದ್ದು, ಸೇವೆಯು ಅಪ್ಸರೆಯರ ಬದಲಾಗಿ ತಗಣೆಗಳದ್ದು...... ಮುಂದೆ ಬೇಡ.

ಅಂತೂ ನನಗೆ, ನನ್ನ ಉದ್ಯೋಗ, ಜೀವನ ಇತರ ವ್ಯವಹಾರ ಇವೆಲ್ಲಕ್ಕಿಂತ ಈ ಚಳಿಯನ್ನು ಹೇಗೆ ಸುಧಾರಿಸಲಿ ಎಂಬ ಯೋಚನೆಯೇ ಮಿದುಳು ಕೊರೆಯತೊಡಗಿತು. ತಮಗೆ ಕಷ್ಟ ಬಂದಾಗ ಇತರರು ಹೇಗೆ ಕಷ್ಟಗಳನ್ನು ಸಹಿಸಿದ್ದಾರೆ ಎಂದು ತಿಳಿದರೆ ಸ್ವಲ್ಪ ಶಾಂತಿ ಉಂಟಾಗುತ್ತದೆಂದು ಯಾರೋ

ಹೇಳಿದ್ದು ಕೇಳಿದ್ದೆ. ಹಾಗೆ ಈ ಚಳಿಯ ಕಷ್ಟವನ್ನು ಯಾರು ಸಹಿಸಿದ್ದಾರೆಂತ ಯೋಚಿಸುತ್ತಿರವಾಗು ಮೇಜಿನ ಮೇಲಿದ್ದ, ಹರಿಹರನ 'ಗಿರಿಜಾ ಕಲ್ಯಾಣ' ಕಣ್ಣಿಗೆ ಬಿತ್ತು. ಪಾರ್ವತಿಯ ತಪೋವರ್ಣನೆಯನ್ನು ಓದತೊಡಗಿದೆ. ಅಬ್ಬ! ಎಂತಹ ಚಳಿಗಾಲ! "ಇತ್ತಲ್ ಭೂತಲದೊಳ್... ಜನಮುನುರೆ, ನಡುಗಿಸುತುಂ, ಸುತ್ತುತ್ತುಂ, ಸುಗಿಯುತ್ತುಂ, ಮುತ್ತುತ್ತುಂ..॥" ಈ ಪದ್ಯವನ್ನು ಓದಿದ ಕೂಡಲೇ ಇದ್ದ ಒಳಂಗಿ ಸಾಲದೆ ಮೇಲಂಗಿ ಹಾಕಬೇಕಾಯ್ತು. ಮುಂದೆ, "ಉದಯಂ ಶೀತೋದಯ ಮುಗ್ಗದ ಮಧ್ಯಾಹ್ನಂ, ತುಷಾರ ಮಧ್ಯಾಹ್ನಂ, ಮಿಕ್ಕಸ್ತಮಯಂ ತಾನುಷ್ಣದಸ್ತಮಯಮೆನಿಸಿತು, ಅಮಮ." ಇಲ್ಲಿಯ, "ಅಮಮ" ಎಂಬುದು ನನ್ನ ನಾಲಿಗೆಯ ಸ್ವಾತಂತ್ರ್ಯವನ್ನು ಕಸಿದು ಹತ್ತಾರು ಸಲ ಹೊರಟಿತು. ಇಷ್ಟರಲ್ಲಿ ಹತ್ತಿರ ಉಣ್ಣೆ ಶಾಲು ಇದ್ದುದು ನನ್ನ ಜೀವದ ಪುಣ್ಯವೆನ್ನಬೇಕು. ಪಾರ್ವತಿ ಏಕಾಕಿ ಚಳಿಯೊಡನೆ ಹೋರಾಡಿದರೆ, ನಾನು ಸಸೈನ್ಯನಾಗಿಯೇ ಮುನ್ನುಗ್ಗಿದೆ. "ನುಡಿಯೆ ಹು! ಹು!" ಈ ಮಾತನ್ನು. ಇದು ನನ್ನ ಅನುಭವದ ಮಾತು. ಇದನ್ನು ಹರಿಹರ ಹೇಳಿಕೊಡಬೇಕೆ? ಇವನೆಂತಹ ಕವಿ ಎಂದು ನಗು ಹುಟ್ಟಿದ್ದು ಚಳಿಯಿಂದಾಗಿ ಹೊರಬೀಳಲಿಲ್ಲ. ಇನ್ನು ಮುಂದೆ ನೋಡಿದರೆ "ಪ್ರಾಣಂಗೆ ಚಳಿಯೆ ಕುಪ್ಪಸವಾಯ್ತು" ಇದನ್ನು ನೋಡಿ ನಗುಬರಲಿಲ್ಲ ಸಿಟ್ಟು ಬಂತು. ಚಳಿಗೋ, ಸಿಟ್ಟಿಗೋ? ಹಲ್ಲು ಕಟ, ಕಟ ಕಡಿಯಿತು. ನಾನೇನು ಗಂಡಸಲ್ಲವೇ? ಗಂಡು ಹೆಣ್ಣೆಂಬ ಬೇಧಭಾವನೆಯಿಲ್ಲದೆ "ಪ್ರಾಣಂಗೆ ಚಳಿಯೆ ಕುಪ್ಪಸವಾಯ್ತು" ಅಂತ ಅನ್ನೋದೆ. ಕವಿಯಾದರೇನು? ಯಾರಾದರೇನು? ಈ ವರೆಗೆ ಹೇಳಿದ್ದೆಲ್ಲಾ ಒಪ್ಪೋತಕ್ಕ

ವಿಷಯ. ಆದರೆ ಗಂಡಸಿಗೆ ಕುಪ್ಪಸ ಅನ್ನೋದನ್ನ ನಾನಂತೂ ಈ ಪ್ರಾಣಕುಪ್ಪಸ ತೋಡೋದು ಹೋದರೂ ಒಪ್ಪೊಲ್ಲ ಎಂದುಕೊಂಡೆ. ಆದರೆ ತಕ್ಷಣ ನಾನು ಎರಡು ಅಂಗಿಗಳನ್ನು ತೊಟ್ಟದ್ದು ಜ್ಞಾಪಕ ಬಂತು. ಬಹುಶಃ ಆಗಿನ ಹೆಂಗಸರು ನಮ್ಮ ಈಗಿನ ತುಂಡು ಕೈಯಂಗಿ, ಬುಶ್ ಕೋಟುಗಳ ತರಹದ ಮೊಣಕೈ ಕುಪ್ಪಸವನ್ನೇ ತೊಡುತಿದ್ದಿರಬೇಕು. ತ್ರಿಕಾಲಜ್ಞಾನಿಯಾದ ಕವಿಯು ಆ ಕಾಲದ ಹೆಂಗಸರ ಕುಪ್ಪಸವೇ ಈ ಕಾಲದ ಗಂಡಸರಿಗೂ ಆಗುತ್ತದೆ ಎಂದು ಊಹಿಸಿ ಹೀಗೆ ಹೇಳಿರಬಹುದೆಂದುಕೊಂಡೆ. ಆದರೂ ಭವಿಷ್ಯತ್ತಿನ ಗಂಡಸರು ಕುಪ್ಪಸ ತೊಡುತ್ತಾರೆಂದು ಒಬ್ಬ ಗಂಡು ಕವಿ ಹೇಳಿಯಾನೇ? ಹೇಳಿದನೆ? ಎಂಬ ಅವಮಾನದ ಗುಂಗಿಹುಳು ಎದೆ ಕೊರೆಯಿತು. ಆ ಪದ್ಯವನ್ನು ಮತ್ತೊಮ್ಮೆ ಓದಿದೆ. ಆಗ ತಿಳಿಯಿತು, ಪಾರ್ವತಿಯು ಪ್ರಾಣವನ್ನೇ ಕುರಿತು ಈ ಮಾತು ಹೇಳಿದ್ದೆಂದು.

ದೀಪವನ್ನು ಮತ್ತಷ್ಟು ಹತ್ತಿರಕ್ಕೆಳೆದುಕೊಂಡು ಮುಂದೆ ಓದಿದೆ. ಏನು ಚಳಿಗಾಲ! ಖಂಡಿತ ನಾನು ಆ ಕಾಲದಲ್ಲಿರುತಿದ್ದರೆ ಅಗ್ನಿಕುಂಡಕ್ಕೆ ಹಾರುತಿದ್ದೆ. ಶೀತವು ಒಳಪ್ರವೇಶಮಾಡಿದಾಗ ಜೀವವು ತಾಳಲಾರದೆ ಜಠರಾಗ್ನಿಯನ್ನು ಉರಿಸಲು ಅದರ ಹೊಗೆಯೇಳುವಂತೆ ಬಾಯಲ್ಲಿ ಹೊಗೆಯುಸಿರು ಬರುತ್ತದಂತೆ. ಈ ಕವಿಗೆಲ್ಲಿಯ ಅನುಭವ? ನನ್ನ ಹಾಗೆ ಇವನೇನು ಮಲೆನಾಡು ವಾಸಮಾಡಿದ್ದನೊ? ಗೊತ್ತಿಲ್ಲ. "ಪುಟ್ಟಿತು ಚಳಿ . . . ." ಅಬ್ಬಬ್ಬಾ! ಇವನಿಗೆ ಚಳಿಯ ಮೇಲೆ ಅಭಿಮಾನವೊ? ಬೆದರಿಕೆಯೊ? ತಿಳಿಯದು. ಆದರೆ ಈ ಒಂದು ಪದ್ಯದಲ್ಲಿ ಹತ್ತು ಸಲ ಚಳಿಯ ನಾಮೋಚ್ಚಾರ ಮಾಡಿದ್ದಾನೆ. ಸಾಕು! ನನ್ನ ಕಷ್ಟ ಪರಿಹಾರವಾಗಲೀಂತ ಇನ್ನೊಬ್ಬರ ಕಷ್ಟ ನೋಡಲಿಕ್ಕೆ ಹೋದರೆ

ಮತ್ತಷ್ಟು ಜಾಸ್ತಿ ಆಗೋದೇ.

ಇನ್ನು ಈ ಚಳಿಯನ್ನು ನಿವೃತ್ತಿಗೊಳಿಸಲಾಗಲಿಲ್ಲ. ಇನ್ನು ಸರಸ ದಂಪತಿಗಳ ಸಲ್ಲಾಪವನ್ನಾದರೂ ಓದಿ ವಿರಹ ವೇದನೆಯನ್ನು ಕಡಿಮೆಮಾಡಿಕೊಳ್ಳೋಣವೆಂದು, ಮುದ್ದಣನ ರಾಮಾಶ್ವಮೇಧವನ್ನು ತೆರೆದೆ.

"ಓ! ಕಾಲ ಪುರುಷಂಗೆ ಗುಣಮಣವಿಲ್ಲಂಗಡ!" ಈ ಮಾತು ಅಕ್ಷರಶಃ ಸತ್ಯವಾದುದು. ಇಲ್ಲದಿದ್ದರೆ ಇಂತಹ ಕವಿಯನ್ನು ಅಕಾಲದಲ್ಲಿ ಕಬಳಿಸುತ್ತಿರಲಿಲ್ಲ. ಆ ಕಾಲಪುರುಷ ಕವಿ ತನ್ನ ಭವಿಷ್ಯ ಗೊತ್ತಿದ್ದೇ ಈ ಮಾತನ್ನಾಡಿದ್ದನೆಂದರೂ ತಪ್ಪಾಗದು.

ಮುದ್ದಣನನ್ನು ಈಚೆಗೆ ಗೆದ್ದವರಿಲ್ಲ. ಇಂದು ನಾಡಿನ ಮೂಲೆ ಮೂಲೆಯಲ್ಲೂ... ದಿನಾಚರಣೆ... ಅನಾವರಣೆ.. ಅರ್ಪಣೆ ಮುಂತಾಗಿ ಆವನ ವಿಷಯದಲ್ಲಿ ಕೃತಜ್ಞತೆಯನ್ನು ಭಕ್ತಿ ಪುರಸ್ಸರವೊ? ಸಾಹಿತ್ಯ ಪ್ರಿಯರೆಂಬುದನ್ನು ಪ್ರದರ್ಶಿಸಲೊ? ಅಂತೂ ನಡೆಯುತ್ತವೆ: ಆದರೆ ಅಂದು ಅಂತಹ ಉಜ್ವಲ ಪ್ರದೀಪವು ಅಂಧಕಾರದಲ್ಲಿ ಬೆಳಗುತ್ತಿದ್ದಾಗ ಯಾರೂ ಒಂದಿಷ್ಟು ತೈಲವನ್ನೆರೆಯಲಿಲ್ಲ. ಮುದ್ದಣನ ಜೀವನ ಮುದ್ದಾಗಿ ಕಳೆಯಲಿಲ್ಲ. ಮಾತ್ರವಲ್ಲದೆ ಮನಸ್ಸು ಒದ್ದೆಯಾಗುವಂತೆ ಕಳೆಯಿತು.

ರಾಮಾಶ್ವಮೇಧವು ಮಹಾನದಿಗಳೆರಡರ ಸಂಗಮದಂತಿದೆ. ಹಿಂದಿನ ಮತ್ತು ಇಂದಿನ ಕಾವ್ಯ ಶೈಲಿಗಳನ್ನು ನಾವಲ್ಲಿ ಕಾಣಬಹುದು. ಪಾಯಸದೂಟದಲ್ಲಿ ಉಪ್ಪಿನಕಾಯಿ ಇದ್ದಂತೆ ನಡುನಡುವೆ ದಾಂಪತ್ಯ ಜೀವನದ ಆಣಿಮುತ್ತುಗಳನ್ನು ಸಾಹಿತ್ಯಮಾಲೆಯಲ್ಲಿ ಸೇರಿಸಿ ಓದುಗರ ಮನೋರುಚಿಯನ್ನು ಎಬ್ಬಿಸುತ್ತಾನೆ ಕವಿ. "ತದ್ಗುಣೈಃ ಕರ್ಣಮಾಗತ್ಯ ಚಾಪಲಾಯ

ಪ್ರಚೋದಿತಃ" ಎಂದು ಕಾಳಿದಾಸ ಹೇಳಿದ್ದ. ಇಲ್ಲಿ ಮುದ್ದಣ ನಿಗೆ ಅವನ ಅನುಕೂಲ ಸತೀರತ್ನಳಾದ ಮನೋರಮೆಯೇ ಕಾವ್ಯ ಪ್ರಚೋದಕಳು. ಆ ಆದರ್ಶದಂಪತಿಗಳ ಜೀವನವು ಬಾಹ್ಯದಷ್ಟು ಆಂತರಿಕದಲ್ಲಿ ಬಾಳಲಿಲ್ಲ. ಕವಿಯ ಅಂತರಾಳ ವನ್ನು ಕಾಣಲು ಅವನ ಬಾಹ್ಯ ಚರ್ಯೆಯ ಕನ್ನಡಿ ಸಾಲದು.

ರಾಮಾಶ್ವಮೇಧವನ್ನು ತಿರುವಿಹಾಕುತ್ತಾ ಒಂದೊಂದಾಗಿ ಓದಿದೆ. ಅಲ್ಲಿಯ ಸೀತಾಮಾತೆಯ ಗರ್ಭದೋಹಳ, ಪ್ರಜಾ ವಾತ್ಸಲ್ಯಕ್ಕೆ ಸಿಕ್ಕಿದ ಶ್ರೀರಾಮನ ಸೀತಾಪರಿತ್ಯಾಗ ವೇದನೆ, ಲಕ್ಷ್ಮಣನ ಮನೋವ್ಯಥೆ, ಸೀತೆಯು ಅರಮನೆಯನ್ನು ಬಿಡುವ ಸನ್ನಿವೇಶ, ಇವೆಲ್ಲಕ್ಕಿಂತಲೂ ಲವಕುಶರ ಬಾಲ್ಯದ ಆಟಪಾಟ ಗಳು ಎಂತಹ ಕಲ್ಲುಹೃದಯವನ್ನಾದರೂ ಕರಗಿಸುವಂತಹವು.

ನನ್ನ ವಿರಹವೇದನೆ ಶಾಂತಿಗಾಗಿ ಮುದ್ದಣ ಮನೋರ ಮೆಯರ ಸಂವಾದವನ್ನೋದಿದೆ. ಉರಿಗೆ ಉಪ್ಪಿಟ್ಟಂತಾಯ್ತು. ಅಲ್ಲದೆ ಇನ್ನೊಂದು ವಕ್ರಬುದ್ಧಿಯೂ ಹೊಳೆಯಿತು. ಹತ್ತಿರ ಹೆಂಡತಿಯಿದ್ದರೆ ಕವಿಯಾಗಬಹುದು, ಕಾವ್ಯ ಬರೆಯಬಹುದು ಎಂದು. ಇದಕ್ಕಾಗಿ ಕೂಡಲೇ ಮನೆಯನ್ನು ಅರ್ಥಾತ್ ಮನೆ ಯವಳನ್ನು ಸೇರಲು ನಿಶ್ಚಯಮಾಡಿದೆ.

ಅಂದು ಏಕಾದಶಿ. ಮನೆಯಲ್ಲಿ ಬೇಯಿಸುವ ಕಾರ್ಖಾನೆ ಮುಚ್ಚುವ ದಿನ. ಏನಿದ್ದರೂ ಹಸಿ ಫಲಾಹಾರ. ಇದರಿಂದಾಗಿ ಒಲೆ ಯಜಮಾನಿತಿಯಾಳಾದ ನನ್ನವಳಿಗೆ ಬಿಡುವು ಎಂದು ತಿಳಿದು ಮೆಲ್ಲನೆ ಪಡಸಾಲೆಯೊಳಗೆ ಪ್ರವೇಶಿಸಿದೆ. ಕೈಯಲ್ಲಿ ಮಡಿಸಿ ಟ್ಟುಕೊಂಡ ಎಲೆಯಡಕೆ ಸುರುಳಿಯೂ ಇತ್ತು. "ಮಣಿ"ಯು ತೊಟ್ಟಿಲ ಬಳಿ ಕುಳಿತು ಹರಿಭಕ್ತಿಸಾರವನ್ನು ಗಂಟಲೊಳಗಿಂದ ತನ್ನದೇ ಆದ ರಾಗದಲ್ಲಿ ಒದರುತ್ತಿದ್ದವಳ ಮುಂದೆ ಹೋಗಿ

ನಿಂತು ಕೈ ಮುಂದೆ ಮಾಡಿದೆ. ಹಾವು ಮೆಟ್ಟಿದಂತೆ ಬೆಚ್ಚಿಬಿದ್ದು ನನ್ನಡೆಗೆ ನೋಡಿದಳು ಶೀಲಾ. ಕೈಯಲ್ಲಿಯ ಎಲೆಸುರುಳಿಯನ್ನು ಇನ್ನಷ್ಟು ಮುಂದೆ ನೀಡಿ "ತಾಂಬೂಲಂ ಸ್ತ್ರೀ ಕರಂ ಭದ್ರಂ" ಎಂದು ನಗತೊಡಗಿದೆ. "ಹುಶ್ಶ್! ಮೆಲ್ಲಗೆ. ನಿಮ್ಮ ಯಜಮಾನರು ನಿದ್ದೆಮಾಡುವುದು ಕಾಣುವುದಿಲ್ಲವೆ?" ಎಂದು ನನ್ನ ಮುಖವನ್ನು ಚುಚ್ಚುತಿದ್ದ ಆ ಓರೆನೋಟವನ್ನು ನೇರವಾಗಿ ಕೈ ಕಡೆ ಕಳಿಸಿ ಓ, ಇದೇನು ಇನ್ನೂ ಹುಡುಗಾಟ. ಈವತ್ತು ಏಕಾದಶಿಯಲ್ಲವೆ? ನಿಮಗೀಗ ಏಕಾದಶಿ, ಅಮಾವಾಸ್ಯೆ, ಸಂಕ್ರಮಣ ಒಂದೂ ಇಲ್ಲದಂತಾಗಿದೆ ಎಂದಳು ಶೀಲಾ. ಆಗ ನನ್ನ ಕವಿ ಪ್ರತಿಭೆಯ ಚಿಲುಮೆಯೊಡೆದು ಹೇಗೇಗೋ ಹರಿಯ ತೊಡಗಿತು.

ಅಲ್ಲಾ! ಲೇ! ಪ್ರಿಯಾ ಮಾತ್ರ ಪ್ರಿಯಂವದೆ! ನನಗೆ ನಿನ್ನ ವದನಾರವಿಂದ ಮಧುರ ಮಧುರಾಮೃತ ಪಾನವೇ ದುರ್ಲಭವಾಗಿರುವಾಗಲೂ ಜೀವನವನ್ನು ಚಾತಕದಂತೆ ಬಯಸಿದ್ದು ಈಗ ಸುಸಂದರ್ಭದಲ್ಲಿ ಆ ಅನಿಷ್ಟ ಉಪವಾಸ ಬಿದ್ದು ಸಾಯುವ ದಿನಗಳ ಸುದ್ದಿಯೇಕೆ?

\+ × + +

ಏಯ್! ಇಲ್ನೋಡು! ಮುದ್ದಣನಿಗೆ ಮನೋರಮೆಯಿದ್ದಳು. ನೀನು ಮಾತ್ರ "ಮರ"ದಂತೇಕಿರುವೆ?

† † † †

"ಲೇಯ್! ನನ್ನ ಕವಿ ಮನೋಸರಸ್ಸಿನ ಏಕೈಕ ರಂಧ್ರಳೆ! ಯಾಕೆ ಸುಮ್ಮನಿದ್ದಿ."

"ಇದೇನೂಂದ್ರೆ ನಿಮಗೆಲ್ಲಾ ದ್ರೂ... ನೀವು ಹೇಳೋದೇ ಅರ್ಥವಾಗೋಲ್ಲ."

"ಭೇಶ್! ನನ್ನ ಮಾತು ಅರ್ಥವಾಗೋಲ್ಲ. ಸರಿ! ಸರಿ! ಈಗ ನಾನು ಕವಿಯಾದೆ. ಎಲೈ! ವಾಲ್ಮೀಕಿಗೆ ಸಿಕ್ಕಿದ ಹೆಣ್ಣು ಕ್ರೌಂಚಳೆ! ಕಾಳಿದಾಸನಿಗೆ ಪ್ರಸನ್ನಳಾದ ಕಾಳಿಯೆ! ಮುದ್ದಣನ ಮುದ್ದಿನ ಮನೋರಮೆಯೆ! ಉಪ್ಪಿಟ್ಟಿಗಿಟ್ಟ ಬಾಣಾಲೆಯು ನೀರು ಕುಡಿವಂತೆ ನನ್ನಂತರಾಳದ ತಳಮಳವನ್ನೂ ಲಾಲಿಸು."

೦ ೦ ೦ ೦

"ಎಲೇ! ವಾಗ್ದೇವತೆಯ ಅಪರಾವತಾರಳೆ! ಹೀಗೆ ಮೌನ ಳಾಗದಿರು. ನಿನ್ನ ಮೌನವು ನನ್ನ ಕವಿದೇಹವನ್ನು ಶ್ಮಶಾನ ಕ್ಕೊಯ್ಯುವುದು."

"ಅಲ್ಲಾ! ನಿಮಗೇನಾಗಿದೇಂತ ಇವ್ರೊತ್ತು ನಾನು ಮತ್ತೆ..."

"ಹೇ! ಸರ್ವಾರ್ಥಪೂರ್ಣೇಶ್ವರಿ! ಸರಸತಿಯು ಉಗ್ರಾಣ ದಂತಿರುವ ನಿನ್ನಾ ವದನೇಂದುವಿನಿಂದ ಬಿಸುಗದಿರುದಿಸಬ ಹುದೆ? ಆದರೂ ಅದು ಸ್ವಾಗತಾರ್ಹವೇ. ಸಾಗರ ಕಡೆವಾಗ ಮೊದಲು ಕಾಲಕೂಟ ಹುಟ್ಟಿತು, ಆ ಮೇಲೆ ಅಮೃತ; ಮಹಾ ವಿಷ್ಣುವಿನಂತೆ ನಾನೂ ಅಮೃತಕ್ಕಾಗಿ ಕಾದು ಮೊದಲು ಹುಟ್ಟಿದ ವಿಷವನ್ನು ನಿನ್ನ ಅತ್ತೆ ಮಾವಂದಿರಿಗರ್ಪಿಸುತ್ತೇನೆ. ಆ ಮೇಲೆ ಅಮೃತವನ್ನು ಪಕ್ಷಪಾತವಿಲ್ಲದೆ ಸಕಲರಿಗೂ ಹಂಚಿಬಿಡುವೆ. ಎಲೈ! ಕುಲಕ್ರಮಾಗತವಾದ ಕುಲದೈವಳೆ ಪ್ರಸನ್ನಳಾಗು."

"ನಿಮ್ಮ ದಮ್ಮಯ್ಯಂಬೆ! ಮಣಿಯನ್ನೆಬ್ಬಿಸಬೇಡಿ. ಇದು ಏನೂಂದ್ರೆ? ಹುಚ್ಚುಗಿಚ್ಚು."

"ಹೌದು! ಇದೊಂದು ತರದ ಹುಚ್ಚು! ಈ ಹುಚ್ಚು ಮೆಚ್ಚಾದರೆ ಸಾರ್ಥಕ; ನನ್ನ ಕವಿಜನ್ಮ ಪ್ರಾಪ್ತಿ . . . ಅದೇನು ನಿನ್ನ ಕೈಯಲ್ಲಿ?

"ಅಯ್ಯೋ! ಹರಿಭಕ್ತಿಸಾರವೇ? ಆಯ್ತು. ಎಸೆ ಅದನ್ನು ಆಚೆ. ಅದನ್ನೋದಿದರೆ ಈ ಜನ್ಮಾನೇ ಬೇಡ ಅನ್ನಿಸ್ತದೆ. ಯಾವ ಸಂಸಾರದಲ್ಲಿ ಸ್ವರ್ಗಸುಖಕ್ಕಿಂತಲೂ ಮಿಗಿಲಾದ ಸುಖ ವನ್ನುಣ್ಣಬಹುದೋ, ಅದನ್ನೇ ಅದು ದೂರಮಾಡಲುಪದೇ ಶಿಸುತ್ತದೆ. ಮುಟ್ಟಬೇಡ ಅದನ್ನು."

"ಇದೇನೊಂದ್ರೆ. ಹರಿಭಕ್ತಿಸಾರ ಓದು ಒಳ್ಳೆ ಜ್ಞಾನ ಬರತ್ತೇಂತ ನೀವೇ ಹೇಳಿದ್ದಿರಿ."

"ನಾನು ಹೇಳಿದ್ದೆನಾ? ಅದು ಹಿಂದೆ ಆಗಿ ಹೋಯಿತು. ಈಗ ಈ ರೀತಿ ಹೇಳುತ್ತೇನೆ. ಅದು ಬೇಡ. ಆಗ ಹೇಳಿದ್ದು ಆ ಹೊತ್ತಿಗಾಯ್ತು, ಈಗ ಹೇಳೋದು ಈ ಹೊತ್ತಿಗೆ."

ಅಷ್ಟರಲ್ಲಿ ತೊಟ್ಟಿಲಲ್ಲಿ ಮಲಗಿದ್ದ "ಮಣಿ" ಎದ್ದು ಅಳಲು ಮೊದಲು ಮಾಡಿದ. ನನ್ನ ಕವಿತಾ ಪ್ರವಾಹವು ಇಂಗಿಹೋಯ್ತು.

ಸಾಯಂಕಾಲ ಮನೆಗೆ ಹೋದ ಪ್ರಾಯಶ್ಚಿತ್ತಕ್ಕಾಗಿ ಸಂಧ್ಯಾವಂದನೆಯ ಶಾಸ್ತ್ರ ಮಾಡುತಿದ್ದೆ. ನನ್ನವಳಲ್ಲೇ ಎದುರು ಕಡೆ ಕುಳಿತು ದೇವರಿಗೆ ಬತ್ತಿ ತೋರಿಸಲು ತಯಾರಿಸುತಿದ್ದಳು. ನೆಲದಲ್ಲಿ ಕೂಡಿಸಿಟ್ಟ ಬತ್ತಿಗಳನ್ನು "ಮಣಿ"ಯು ಒಂದೊಂದಾಗಿ ತೆಗೆದು ಬಿಡಿಸಿ ಪೂರ್ವರೂಪಕ್ಕೆ ತರುತಿದ್ದ. ಆದರೆ ಅವಳ ಗಮನ ಆ ಕಡೆ ಯಿರಲಿಲ್ಲ. ನನ್ನನ್ನೇ ನೋಡುತ್ತಾ "ಆಗ ಏನಾಯ್ತು ನಿಮಗೆ" ಎಂದು ಕಣ್ಣು ಬಾಯಿಗಳಿಂದ ಕೇಳಿದಳು ಕೊನೆಗೆ. ಅದನ್ನು ಅಲ್ಲೇ ಬಾಗಿಲ ಬಳಿ ಗೋಡೆಗೊರಗಿ ಕುಳಿತು ಹರಿಸ್ಮರಣೆ ಮಾಡುತಿದ್ದ ಅಮ್ಮ ಕೇಳಿ ''ಏನೇ ಅದು? ಯಾವಾಗ?" ಅಂದಳು ಅದಕ್ಕೆ ನಾನೇ ಉತ್ತರ ಕೊಟ್ಟೆ. "ನೋಡಮ್ಮ ಎಷ್ಟೋ ಕವಿಗಳು ತಮ್ಮ ಹೆಂಡಂದಿರೊಡನಾಡಿದ "ರಂಭಾಶುಕ"ಯಾ ರಂಭಾರೂಟಿ ಯಂತಹ ಮಾತುಗಳನ್ನೇ ಹೆಣೆದು ಸರಸಕಾವ್ಯಮಾಡಿಬಿಟ್ಟೆ

ದ್ದಾರೆ." ನಾನೂ ಹಾಗೆ "ಮಾಡೋಣಾಂತ ಹೊರಟರೆ ಇದೆಂತಹ ಮೂದೇವಿಯಮ್ಮಾ? ಒಂದಾದರೂ ಸರಿಯಾದ ಉತ್ತರ ಬೇಡವೇ?" ಎಂದು. ಇದನ್ನು ಕೇಳಿ ನನ್ನವಳು "ನನಗೆ ಗೊತ್ತೇ ಇಲ್ವೆ? ಹೇಳಬಾರದಿತ್ತೇ ನಾನು ಕವಿಯಾಗಲು ಹೊರಟಿದ್ದೇಂತ. ಆಗ ನಾನೂ. . . ." ಅವಳನ್ನು ಮುಂದೆ ಆಡಗೊಡದೆ "ಓಹೊ! ಹೊ! ನೀನು ಕಂತಿಯಾಗಿ ಬಿಡುತಿದ್ದೇಂತ ಕಾಣುತ್ತೆ. ಹೋಗಲಿ ನಿನ್ನ ಬುರುಡೆಯೊಳಗೆ ಏನಿದೇಂತ ಈಗ ಕಾಣೋಲ್ವೆ? ನೋಡು ನೀನು ಈಚೆಯಿಂದ ಬತ್ತಿ ಮಾಡಿಟ್ಟರೆ ಆಚೆಯಿಂದ "ಮಣಿ'' ಅದೆಲ್ಲವನ್ನೂ ಬಿಡಿಸಿ ಹತ್ತಿ ಮಾಡಿಬಿಡುತ್ತಾನೆ. ನೋಡು, ನೋಡು, ನಿನ್ನ ಬುರುಡೆ ಹೇಗಿದೆ?" ಎಂದು ಅವಳನ್ನು ಚಡಾಯಿಸಿದೆ. ಮಣಿಯ ಕಾರಬಾರವನ್ನು ನೋಡಿದವಳೇ ಅಯ್ಯೋ ಕವಿಪುತ್ರ! ಮಾಡಿಟ್ಟ ಬತ್ತಿಯನ್ನೆಲ್ಲಾ ಹತ್ತಿ ಮಾಡಿಬಿಟ್ಟೆಯಲ್ಲಾ! ಯಾಕೆ ನಿನ್ನ ತಲೆಯೊಳಗೂ ಇದನ್ನೇ ತುಂಬಿಸಿಕೊಳ್ಳುವೆಯಾ? ಎಂದು ಮಾತನ್ನು ಮಗುವಿಗೆ ಬೀಸಿ ನನ್ನಡೆಗೆ ಹೊಡೆದಳು. ನಾನು ಹೆಂಡತಿಗೆ ಸೋಲುವುದೆ? ಅಲ್ವೆ? ಹತ್ತಿರವಿದ್ದೂ ಮಗು ಏನು ಮಾಡುತ್ತದೆಂಬುದನ್ನು ತಿಳಿಯದಷ್ಟು ಖಾಲಿಬುರುಡೆಯವರ ಸಹವಾಸದಿಂದ ಇದ್ದ ಮಿದುಳೂ ಹತ್ತಿಯಾದೀತು ಎಂದು ಬಿಟ್ಟೆ. ಅಮ್ಮ ಮತ್ತು ಮಣಿ ಇಬ್ಬರೂ ನಕ್ಕುಬಿಟ್ಟರು.

# ಎದುರಂಗಡಿ

"ಎದುರಂಗಡಿ" ಅಂದ ಕೂಡಲೇ ನಿಮಗೆ ಗಾಬರಿಯಾಗ ಬಹುದು. ಈ ಮಹಾರಾಯ ನಮಗೆ ಎಲ್ಲಿ ಎದುರಂಗಡಿ ಹಾಕುತ್ತಾನೋ? ಎಂದು. ಇಲ್ಲ! ನನಗಾ ಅಭ್ಯಾಸವೀಗಿಲ್ಲ. ಈಗ ನಾನದರ ಜೀವನ ಕಥನಕ್ಕೆ ಹೊರಟಿದ್ದೇನೆ.— "ಎದು ರಂಗಡಿ" ಬಲು ಪುರಾತನದಿಂದ ಬೆಳೆದು ಬಂದು ಈಗಲೂ ತನ್ನ ಯೌವನವನ್ನು ಕಳೆದಿಲ್ಲ. ಇದು ಪುರಾತನವೆಂದರೆ ಅಷ್ಟಿಷ್ಟು ಹಿಂದಿನದ್ದಲ್ಲ. ಬ್ರಹ್ಮನಷ್ಟೇ ವಯಸ್ಸಾಯ್ತು ಇದಕ್ಕೆ. ಹೇಗೆನ್ನು ವಿರಾ? ಶ್ರೀಮನ್ನಾರಾಯಣನಿಗೆ ಕ್ಷೀರಸಾಗರದಲ್ಲಿಯೇ ಇದ್ದು ಬೇಸರವಾಗಿ ಇನ್ನು ಮುಂದೆ ಸೃಷ್ಟಿಕಾರ್ಯಕ್ಕಿಳಿದು ಅದರ ಆನಂದವನ್ನನುಭವಿಸೋಣವೆಂದು ಯೋಚನೆಯಾಯ್ತು. ದೇವರ ಯೋಚನೆಯಲ್ಲವೇ? ನಮ್ಮ ಹಾಗೇನೇ? ಒಡನೆಯೇ ನಾಲ್ಕೂ ಕೈಗಳಿಂದ ಕೆಲಸಕ್ಕಾರಂಭವಾಯಿತು. ತತ್ಪರಿಣಾಮವಾಗಿ ಚತುರ್ಮುಖ ಬ್ರಹ್ಮನೇ ಹುಟ್ಟಿದ. ಅವನು ಹುಟ್ಟಿದ್ದೇ ತಡ, ಈ ಎದುರಂಗಡಿಯೂ ಹುಟ್ಟಿತು.

ಆ ಚತುರ್ಮುಖ ಬ್ರಹ್ಮನು ತನ್ನ ನಾಲ್ಕು ಮಂಡೆ ಗಳಲ್ಲಿಯೂ ಬಹಳ ಕಾಲದ ವರೆಗೆ ಯೋಚಿಸಿದ— ಸೃಷ್ಟಿ ಮಾಡುವ ಕೆಲಸವು ಬಲು ಸ್ವಾರಸ್ಯಮಯವಾದುದು. ಬೇಕಾದ ಸಮಯಕ್ಕೆ ಬೇಕಾದವುಗಳನ್ನುಂಟುಮಾಡಬಹುದು. ತಂದೆ ಮಾಡಿದ ಕಾರ್ಯವು ಮಗನಿಗೆ ಅಸಾಧ್ಯವೆ? ಇನ್ನು ಮುಂದೆ ತಾನೇ ಸೃಷ್ಟಿಮಾಡುವೆನೆಂದು ನಿರ್ಧರಿಸಿಯೇ ಅಪ್ಪನಿಂದ ಅಪ್ಪಣೆ ಪಡೆದ. ತನ್ನ ಭಾರವನ್ನು ಹೊರಲು ಸಮರ್ಥನಾದ

ಮಗನ ವಿಷಯದಲ್ಲಿ ಮೊದಲು ತಂದೆಗೇನೋ ಆನಂದವಾಯಿತು. ಆದರೆ ಮುಂದೆ ಈ ತಂದೆಯೂ ಎಷ್ಟೋ ಬಾರಿ ಮಗನ ಆಡಳಿತದಿಂದ ಪೇಚಿಗೆ ಗುರಿಯಾಗಿ ಒದ್ದಾಡಬೇಕಾಯಿತು.

ಯಾವಾಗ ಬ್ರಹ್ಮನ ನಾಲ್ಕು ತಲೆಬುರುಡೆಗಳಲ್ಲಿಯೂ ಈ ಎದುರಂಗಡಿಯ ಗಾಳಿ ಸುಳಿಯಿತೊ? ಅಂದಿನಿಂದ ಜೀವನ ಸೃಷ್ಟಿಯಲ್ಲೂ ಅದರ ಪ್ರಭಾವ ಕಾಣತೊಡಗಿತು. ಸೃಷ್ಟಿಕರ್ತನ ಬುದ್ಧಿಯೇ ಹಾಗಿರುವಾಗ ಅದು ಆಶ್ಚರ್ಯವಲ್ಲ. ಆದರೆ ಇದರಿಂದ ಅವನಿಗೂ "ಶೋಕರ್" ಆಗದೆ ಇರಲಿಲ್ಲ. ಎಷ್ಟೋ ಮಂದಿ "ಪ್ರಜಾಪತಿ"ಗಳು ಆಗಿಬಿಟ್ಟರು.

ಈ ಎದುರಂಗಡಿಯು ಪ್ರಾಯಕ್ಕೆ ಬಂದ ಹಾಗೆ ಎರಡು ರೂಪವನ್ನು ತಾಳಿತು. ಒಬ್ಬನು ಮಾಡಿದ್ದಕ್ಕೆ ನ್ಯೂನಾತಿರಿಕ್ತವಾಗಿ ಮಾಡುವುದೊಂದು. ತದ್ವಿರುದ್ಧವಾಗಿರುವುದಿನ್ನೊಂದು. ಇದನ್ನು ನಾವು ಎಲ್ಲೆಲ್ಲೂ ಕಾಣಬಹುದು. ಸಮುದ್ರ ಮಥನದಲ್ಲಿ ನೋಡಿರಿ. ಸರ್ವನಾಶಕವಾದ ಕಾಲಕೂಟವು ಮೊದಲು ಹುಟ್ಟಿದರೆ ಅದಕ್ಕೆದುರಂಗಡಿಯಾಗಿ ಸತ್ತವರನ್ನೂ ಜೀವಿಸುವ ಅಮೃತವು ಆ ಮೇಲೆ ಹುಟ್ಟುವುದೆ? ಒಬ್ಬನೇ ತಂದೆಯ ಹಿರಿಯ ಮಕ್ಕಳು ಮಾಂಸ ತಿಂದು ರಕ್ತ ಕುಡಿದರೆ ಕಿರಿ ಮಕ್ಕಳು ಹವಿಸ್ಸುಂಡು ಹಾಲು ಕುಡಿಯುತ್ತಾರೆ.

ಇನ್ನೊಂದು ವಿಶೇಷ ಕೇಳಿ– ಜಗತ್ತಿನ ತಾಯಿ ತಂದೆಗಳಾದ ಆದರ್ಶದಂಪತಿಗಳಾಗಿ ಗೃಹಸ್ಥಾಶ್ರಮವನ್ನು ಸಾಗಿಸುತ್ತಿರುವ, ಆ ಪಾರ್ವತಿ ಪರಮೇಶ್ವರರನ್ನು ನೋಡಿ:– ಗಂಡನು ಎತ್ತಿನ ಮೇಲೆ ಸವಾರಿಮಾಡುತ್ತಿದ್ದರೆ, ಅದನ್ನು ಸಿಗಿದು ತಿನ್ನುವ ಸಿಂಹದ ಮೇಲೇರಿ ಹೋಗುತ್ತಾಳೆ ಆದರ್ಶ ಗೃಹಿಣಿ ಪಾರ್ವತಿ. ಅವಳು ಗಂಡನಿಗೆ ಮಾತ್ರ ಎದುರಂಗಡಿಯಲ್ಲ;

ಮಗ ಗಜಾನನನಿಗೂ ಹಾಗೇನೇ. ಇನ್ನವರ ಮಕ್ಕಳ ಗತಿಯೋ ಹೇಳಿತೀರದು. ಗಣಪತಿಯ ಕುದುರೆಲಾಯಕ್ಕೂ ಸುಬ್ರಹ್ಮಣ್ಯನ ಬೈಠಕುಖಾನೆಗೂ ದಶಯೋಜನಾಂತರ ಬೇಕು. ಅಂತೂ ಕೈಲಾಸ ಬೆಟ್ಟದ ತುದಿಗಳಲ್ಲೆಲ್ಲಾ ಈಶ್ವರನ ಸಂಸಾರ ಗೃಹಗಳೇ ತುಂಬಿರ ಬೇಕು.

ಇನ್ನು ಕೆಲವರು ಎದುರಂಗಡಿಯನ್ನು ಹಾಕಿ ದಿವಾಳಿ ತೆಗೆದವರೂ ಇದ್ದಾರೆ. ಇಂದ್ರಪಟ್ಟಕ್ಕೆ ಎದುರಂಗಡಿ ಹಾಕ ಹೋದ ನಹುಷ ಮಹಾರಾಜನು ಬಂಡವಾಳ ಸಾಲದೆ ಬೇಗನೆ ಬಾಗಿಲು ಮುಚ್ಚಬೇಕಾಯಿತು. ಇನ್ನೀ ಎದುರಂಗಡಿಯ ಪ್ರಭಾವದಿಂದ ಕೆಲವು ಸಾಧು ಸಜ್ಜನರೂ ಹಿಂಸೆ ಪಡಬೇಕಾ ಯಿತು. ಅವರಲ್ಲಿ ವಸಿಷ್ಠನಿಗೆ ಎದುರಂಗಡಿ ಹಾಕಹೋದ ವಿಶ್ವಾ ಮಿತ್ರನಿಂದ ಬೆಂಡುಹೋದ ಹರಿಶ್ಚಂದ್ರ ಮಹಾರಾಜನೊಬ್ಬ. ಈ ಎದುರಂಗಡಿಯ ಪ್ರಭಾವದಿಂದಲೇ ಜಗದೀಶ್ವರನೂ ಸಹ ತಲೆಬುರುಡೆ ಹಿಡಿದು ಭಿಕ್ಷೆ ಬೇಡುವ ಕಾಲ ಬಂತು. ವಿಶ್ವಾ ಮಿತ್ರ ಸೃಷ್ಟಿ, ಪರಶುರಾಮ ಸೃಷ್ಟಿ, ಧ್ರುವಲೋಕ, ತ್ರಿಶಂಕು ಸ್ವರ್ಗ, ಮೊದಲಾದ ವಿಶೇಷ ಸೃಷ್ಟಿಗಳಿಗೂ ಇದೇ ಕಾರಣ.

ಇನ್ನು ಮಾನವರಿಂದ ಉತ್ತಮರೂ, ದೇವತೆಗಳೂ ಇವರ ಅವಸ್ಥೆಯನ್ನು ನೋಡಿರಿ: ತಮ್ಮ ಹೆಸರುಗಳಲ್ಲಿಯೂ ಎದು ರಂಗಡಿ ಹಾಕಿಕೊಂಡಿದ್ದಾರೆ ಆ ಮಹಾತ್ಮರು. ಇಂದ್ರ-ಉಪೇಂದ್ರ, ರಾಮ-ಬಲರಾಮ, ಧರ್ಮರಾಯ-ಯಮಧರ್ಮ ರಾಯ, ಕರ್ಣ-ಕುಂಭಕರ್ಣ, ರಾವಣ-ಮಹಿರಾವಣ, ಸಾಲ ದ್ದಕ್ಕೆ ಅಹಿರಾವಣನೊಬ್ಬ.

ಲೋಕದಲ್ಲಿಯ ವಿಷಯಗಳನ್ನು ಯೋಚಿಸಿರಿ- ಬೆಂಕಿ ಸುಡುತ್ತಿದ್ದರೆ, ನೀರು ಆರಿಸುವುದು. ಸೂರ್ಯ ಬಿಸಿಯಾದರೆ

ಚಂದ್ರ ತಂಪು. ಒಬ್ಬ ನರ, ಇನ್ನೊಬ್ಬ ವಾನರ. ಹುಲಿ-ಬೆಕ್ಕು, ನರಿ-ನಾಯಿ, ಹೀಗೆ ಒಂದಲ್ಲೊಂದು ರೀತಿಯಿಂದ ಎದುರಂಗಡಿ ಇದ್ದೇ ಇದೆ.

ವೃಕ್ಷಗಳಲ್ಲಿ ನೋಡಿ. ಹಲಸು-ತೆಕ್ಕು, ಗೋಳಿ-ಕಿರು ಗೋಳಿ, ಮಾವು-ಅಂಬಟೆ, ಇತ್ಯಾದಿ ಕಾಡು ನಾಡು ಭೇದಗ ಳಿಂದಲೋ ನಾಡು ಭೇದಗಳಿಂದಲೋ ಅಂತೂ ಎದು ರಂಗಡಿ ಇದೆ.

ಇದು ಮನುಷ್ಯರ ವ್ಯವಹಾರದಲ್ಲೂ ಹಬ್ಬಿಕೊಂಡಿದೆ. ಒಂದೂರಲ್ಲೊಬ್ಬ ಪುರೋಹಿತನಿದ್ದರೆ ಇನ್ನೊಬ್ಬ ಉದ್ದ ನಾಮ ಹಾಕಲಾರಂಭಿಸಿದ, ಒಬ್ಬ ಮೀನ-ಮೇಷ ಎಂದರೆ, ಮತ್ತೊಬ್ಬ ಕನ್ಯಾ-ಮಿಥುನವೆನ್ನುತ್ತಾನೆ. ಒಬ್ಬ ಬೇರು ಅಗೆದರೆ ಬೇರೊಬ್ಬ ಎಲೆ ಕೊಯ್ಯುತ್ತಾನೆ. ಒಬ್ಬ ಗುಣುಗುಣು ಇನ್ನೊಬ್ಬ ಮಣ ಮಣ. ಸ, ರಿ, ಗ, ಮ, –ಸ ನಿ-ಪತಿ, ಅಂತೂ ಯಾವ ಕಡೆಯೂ ಜಾಗವಿಲ್ಲ. ಪೇಟೆಯಲ್ಲೊಂದು "ತಿಗಣೆ ಭವನ" ವೆದ್ದರೆ, ಇನ್ನೊಂದು "ಸೊಳ್ಳೆ ಭವನ". ಕೊನೆಗೆ ಎಲ್ಲರಿಗೂ ಬಂತು ಬವಣೆ.

ಒಂದೂರಲ್ಲಿ ಒಂದು "ಸಂಘ" ಹುಟ್ಟಿದರೆ ಇನ್ನೊಬ್ಬನ ದೊಂದು "ಕೂಟ" ಮತ್ತೊಬ್ಬನದೊಂದು "ಬಳಗ" ಬೇರೊಬ್ಬನ ದೊಂದು "ಸಮಾಜ", ಮಗುದೊಬ್ಬನದೊಂದು "ಸಂಸ್ಥೆ". ಹೀಗಾಗಿ ಎಲ್ಲರೂ ತಿರುಕರೆ. ಆದರೆ ಯಾರಿಗೂ "ಭಿಕ್ಷೆ ನಹಿ". ರಾಯರ ಮಗಳ ಮದುವೆಗೆ ತಂಜಾವೂರಿನ ಪಿಳ್ಳೆಗಳ ಕಚೇರಿ ಯಾದರೆ, ಶಾಸ್ತ್ರಿಗಳ ಮಗನ ಮುಂಜಿಗೆ ಮದರಾಸಿನ ಅಯ್ಯರ ಗೋಷ್ಠಿ. ಅಂತೂ ಊರಿಗೆ ೫೦೦೦ ವ್ಯಯ. ಆದಾಯ ಶೂನ್ಯ.

ಅಬ್ಬಾ! ಈ ಎದುರಂಗಡಿಯ ಪ್ರಭಾವವೇ! ನಮ್ಮ ದೇಶವು ಇಷ್ಟೊಂದು ಪಾರ್ಟಿ ಪೊಟ್ಟೆಗಳನ್ನಿಟ್ಟು ಅವು ಯಾದವ

ರಂತೆ ಹೊಡೆದಾಡಲು ಹೊರಟಿವೆ. ಜಗತ್ತಿನ ಮೂಲೆ ಮೂಲೆಗೂ ಪಾರ್ಟಿ! ಪಾರ್ಟಿ!! ಇವುಗಳ ಗಾಳಿಯು ಮನೆಮನೆಗೂ ಬೀಸಿದೆ. ನೀವು ಕೇಳಿರಬಹುದು- ಇಲೆಕ್ಷನ್ನಲ್ಲಿ. ಗಂಡನಿಗೆ-ಹೆಂಡತಿ, ತಂದೆಗೆ-ಮಗ, ಅಣ್ಣನಿಗೆ-ತಮ್ಮ, ಮಾವನಿಗೆ ಅಳಿಯ ಎದುರಾಗಿ ನಿಂತದ್ದು. ಇದು ಯಾವದರ ಪ್ರತಾಪ? ಒಂದೂರಲ್ಲಿ ಇಲೆಕ್ಷನ್ನಿಗೆ ನಿಂತ ಗಂಡ ಹೆಂಡಿರಲ್ಲಿ, ಹೆಂಡತಿಗೆ ಗಂಡನಿಗಿಂತ ಒಂದೇ ಒಂದು ಓಟು ಜಾಸ್ತಿಯಾಗಿತ್ತಂತೆ. ಕೊನೆಗೆ ವಿಚಾರಿಸುವಾಗ, ಗಂಡ ಅವಳ ಕಡೇಗೇ ಓಟುಮಾಡಿದ್ದ. ಅಂತೂ ಅವನು ಪಾರ್ಟಿಯ ಪರವಾಗಿ ನಿಂತಿದ್ದ ಅನ್ನಿ ಇಲೆಕ್ಷನ್ನಿಗೆ. ಅಂದರೆ ಜನರಲ್ಲಿ ನಾನೊಂದು ಪಾರ್ಟಿ ಕಟ್ಟಿಯೇ ಸಾಯಬೇಕು ಎನ್ನುವ ಭಾವನೆ ಮೂಡಿದೆ. ಇದು ಭುವನದಿಂದ ಭವನದೊರೆಗಿನ ಸಿದ್ಧಾಂತವಾದವಾಗಿದೆ.

ವೇದ ಕಾಲದ ಗೀತಾ ಸಮಯದ ಚಾತುರ್ವರ್ಣ್ಯವೂ ಸಹಚತುಸ್ಸಹಸ್ರ ಮರಿಗಳನ್ನಿಡಲು ಈ ಎದುರಂಗಡಿಯೇ ಕಾರಣ. "ಸ್ವಧರ್ಮೆ ನಿಧನಂ ಶ್ರೇಯಃ" ಎಂಬುದು, ನಿಧನವಾಗಿ "ಪರ ಧರ್ಮೇ ನಿಧನಂ ಶ್ರೇಯಃ" ಎಂದು ಹುಟ್ಟಿದ್ದೂ ಇದರಿಂದಲೇ. ನಾವು ಪಾಶ್ಚಾತ್ಯ ನಡೆ-ನುಡಿಗಳಿಗೆ ಎದುರಂಗಡಿ ಹಾಕಲು ಹೋಗಿ ಇಂದು ಹಿಂದೂ ಧರ್ಮವೇ ಕಂಠಗತ ಪ್ರಾಣವಾಗಿದೆ.

ಇಷ್ಟೆಲ್ಲ ಯಾಕೆ? ನಮ್ಮ ಮನೆಯ ಸತಿಯರೇ ನಮ್ಮ ಪತಿಸ್ಥಾನಕ್ಕೆ ಎದುರಂಗಡಿ ಹಾಕುವುದಿಲ್ಲವೆ? ನಾವೇನು ಕಡಿಮೆ? ಪ್ರಜಾಪ್ರಭುತ್ವ ರಾಜ್ಯದಲ್ಲಿ "ಸತಿ-ಪತಿ" ಎಂದಿರಬಾರದು. ಎಲ್ಲರೂ ಪತಿಗಳೇ ಆಗಬೇಕು. ಅದಕ್ಕೆ ತಕ್ಕುದಾದ ಕೆಲಸಗಳನ್ನು ನಾವೂ ಮಾಡಬಲ್ಲೆವು. ನಾವೂ ನಿಮ್ಮಂತೆಯೇ ನಡೆ-ನುಡಿ,

ವೇಷ-ವ್ಯವಹಾರಗಳನ್ನು ನಡೆಸುವೆವು ಎಂದು ಆಚರಿಸಿ ತೋರಿಸುವುದಿಲ್ಲವೆ? ಇದರ ಪರಿಣಾಮವಾಗಿ ಕೆಲವು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಆ ಮಾತೆಯರನ್ನು ಗುರುತಿಸಲು ಸಾಧ್ಯವೆ? ಇದು ಎಡುರಂಗಡಿಯ ಮಹಾತ್ಮೆ!

ನಮ್ಮಲ್ಲಿಯ ಪಂಗಡಗಳಲ್ಲಿ ಎಡುರಂಗಡಿಯ ಕೈವಾಡ ವನ್ನು ನೋಡಿ- ನೀಟನಾಮ, ಅಡ್ಡನಾಮ, ಅರಸಿನ-ಬೂದಿ ಪಂಚೆ ಕಚ್ಚೆ-ಲುಂಗಿ ಪಂಚೆ, ಬೋಳು ತಲೆ-ಕಾಕಪಕ್ಷ, ಒಬ್ಬನೇ ದೇವರ ಮುಖಕ್ಕೆ ಬೆಂಕಿ, ಲಿಂಗಕ್ಕೆ ನೀರು, ಮೈಗೆ ಬತ್ತಲೆ. ಅಂದು ಒಬ್ಬನಿಗೆ ಏಕಾದಶಿಯಾದರೆ ಇನ್ನೊಬ್ಬನಿಗೆ ಹೊಟ್ಟೆ ಬಿರಿವ ಹಬ್ಬ.

ಇಲ್ಲಿ ಸ್ವಲ್ಪ ವಿಜ್ಞಾನ ವಿಭಾಗವನ್ನು ನೋಡಿ, ಸೈಕಲು, ಮೋಟರು, ಉಗಿಬಂಡಿ, ಹಡಗು, ವಿಮಾನ, ಇನ್ನೊಂದು ಇದಕ್ಕೆ ಎಡುರಂಗಡಿಯಾಗಿ "ಕ್ರಮಾಮ್" ಹುಟ್ಟುತ್ತದಂತೆ. ಸಂಹಾರ ಸಾಧನಗಳಲ್ಲಿ ಎಲ್ಲಕ್ಕೂ ಎಡುರಂಗಡಿಯಾಗಿ "ಅಟಂ ಬಾಂಬು" ಇತ್ತು. ಈಗದಕ್ಕೂ "ಹೈಡ್ರೋಜನ್" ಎಂಬು ದೊಂದು ಹುಟ್ಟಿದೆ. ಮುಂದೆ...?

ಹೀಗೆ ಈ ಎಡುರಂಗಡಿಯು ಕೊನೆಯ ವರೆಗೂ- ಈ ಬ್ರಹ್ಮನ ಸೃಷ್ಟಿಯಿರುವ ವರೆಗೂ, ಜಗತ್ತಿನಲ್ಲಿ ತನ್ನ ಪ್ರಭಾವ ವನ್ನು ಬೀರುತ್ತಲೇ ಇರುವುದು. ಇದರ ಮಹಾತ್ಮೆಯನ್ನು ವರ್ಣಿಸುವುದು ಸಾಮಾನ್ಯರಿಗೆ ನಿಲುಕದ ವಿಷಯ. ಆದುದ ರಿಂದ ಎಡುರಂಗಡಿಗೆ ಜಯವಾಗಲಿ!

# ರೌದ್ರಾವತಾರ

ಸಿಟ್ಟು! ಮುನಿಸು! ಕಿನಿಸು! ಸಾಲದು, ಆ ಭಾವದ ರೂಪ ಚೇಷ್ಟೆಗಳನ್ನು ನಮ್ಮ ಮುಂದಿಡಲು ಈ ತಿಳಿಗೊಳದಂತಹ ಕನ್ನಡದ ಸಲ್ನುಡಿಗಳು ಸಾಲವು! ಅದಕ್ಕೆ ವಾರಿಧಿಯಂತೆ ಗಂಭೀರವಾದ ಸಂಸ್ಕೃತವೇ ಶರಣು. ಕೋಪ! ರೋಷ!! ಕ್ರೋಧ!!! ಅಬ್ಬಬ್ಬಾ ಕೇಳಿದೊಡಯೇ ನಿಜರೂಪವು ಪ್ರತ್ಯಕ್ಷವಾಗಿಬಿಡುತ್ತದೆ. ಆರ್ಭಟಿಸಿ ಬಾಯಿ ತೆರೆದು ನಿಲ್ಲುತ್ತದೆ! ಅರ್ಧನಾರೀಶ್ವರನಂತೆ ವಾಕ್ಕಿನೊಡನೆಯೇ ಅರ್ಥವನ್ನು ಕಾಣಬೇಕಾದರೆ ಸಕ್ಕದದ ಕಲ್ಲುಸಕ್ಕರೆಯನ್ನೇ ಕಡಿಯಬೇಕು.

ಥತ್! ನಾನು ಯೋಚಿಸಿದ್ದು ಸಿಟ್ಟಿನ ಕಟ್ಟು ಬಿಚ್ಚಬೇಕೊಂತ. ಆದರೆ ಈ ಲೇಖನಿ ಏನನ್ನೋ ಬರೆದುಬಿಡುತ್ತೆ. ಇದರ ಮನೆಹಾಳಾಗ! ಇದನ್ನು ಮುರಿದು ಹಾಕಬೇಕು. ಇದರ ಬೆಲೆ ನಾಲ್ಕಾಣೆಯಾದರೂ, ಹಾರಾಟವೆಷ್ಟು! ಲಂಗಿಲ್ಲ, ಲಗಾಮಿಲ್ಲ. ಲಜ್ಜೆಯಂತೂ ಇಲ್ಲೇಇಲ್ಲ...

ನೋಡಿ! ಇದು ಆ ಸಿಟ್ಟಿನ ಪ್ರತಾಪ, ಈ ನಿರ್ಜೀವ ಕಡ್ಡಿಯ ಮೇಲೆ ನಾನು ಹಾರಿಬೀಳೋದೆ? ಪಾಪ! ಅದೇನು ಮಾಡುತ್ತೆ? ಕೈ ಹೋದ ಹಾಗೆ ಬರೆಯುತ್ತೆ. ಆದರೂ ನನ್ನ ಸಿಟ್ಟು ಅದರ ಮೇಲೆ.

ಕಾರಣವಿಷ್ಟೆ! ನಾನು ಸಿಟ್ಟಿನ ಮನುಷ್ಯ! ಇದನ್ನು ನಾನು ಮಾತ್ರ ಹೇಳಿಕೊಳ್ಳೋದಲ್ಲ. ನನ್ನ ಕಂಡವರೆಲ್ಲಾ ಹಿಂದಾಗಲೀ ಮುಂದಾಗಲೀ ಅಂದೇ ಅನ್ನುತ್ತಾರೆ. ಆದರೆ ಅನ್ನುತಾರೆಂದು ನಾನು ಮಾತ್ರ ಅವರ ಮೇಲೆ ಸಿಟ್ಟಿಗೇಳುತ್ತಿಲ್ಲ.

ಕಾರಣ ಒಂದು ಕ್ಷೇತ್ರ ಬಿಟ್ಟು ಇನ್ನೆಲ್ಲೂ ಅದಕ್ಕೆ ಜಯವಿಲ್ಲ ಅವೆಲ್ಲೀಂತ ಮುಂದೆ ಗೊತ್ತಾಗುತ್ತೆ.

ನಾನು ಆ ಸಿಟ್ಟನ್ನು ಬಿಡಲು ಶತಪ್ರಯತ್ನ ಮಾಡಿದೆ. ಆದರೆ ಅದು ಮಾತ್ರ ಬಿಡವೊಲ್ಲದು. ಅದು ನನ್ನ ಹುಟ್ಟುಗುಣ ಮಾತ್ರವಲ್ಲ ಹುಟ್ಟಿಸಿದವನ ಗುಣವೂ ಆಗಿರಬೇಕು. ಅಂದರೆ ನನ್ನಪ್ಪನಿಗೆ ಸಿಟ್ಟಿತ್ತೆಂದಲ್ಲ. ಪಾಪ! ಸಾಧು ಕುರಿಯಂತಹ ಪ್ರಾಣಿ ಮನುಷ್ಯ ಅವರು. ಅಂದಾಗ ನನ್ನನ್ನು ಸೃಷ್ಟಿಮಾಡಿದ ಬ್ರಹ್ಮನಿಗೆ ಆ ಸಮಯ ಸಿಟ್ಟಿದ್ದಿರಬೇಕು. ದೇವತೆಗಳಿಗೂ ಸಿಟ್ಟುಂಟೆ? ಅದರಲ್ಲೂ ಸತ್ವಗುಣ ಸಂಪನ್ನನಾದ ಬ್ರಹ್ಮನಿಗೇ ಸಿಟ್ಟು? ಎಂದು ನಿಮಗೆ ಆಶ್ಚರ್ಯವಾಗಬಹುದು. ಅವನಿಗೂ ಸಿಟ್ಟು ಬರಲು ಕಾರಣವಿದೆ. ಯಾರೋ ಅವನನ್ನು "ಮಗಳಗಂಡ" ಅಂದರಂತೆ. ಆಗ ಸಿಟ್ಟೇರಿತು. ಆ ಸಮಯ ಸೃಷ್ಟಿಯಾದ ಜೀವ ಜಂತುಗಳೆಲ್ಲಾ ಸಿಟ್ಟಿನವು. ಅವುಗಳಲ್ಲಿ ನಾನೂ ಒಬ್ಬನಾಗಿರಬೇಕು.

ಕೆಲವರನ್ನು "ವಿಶ್ವಾಮಿತ್ರ ಗೋತ್ರದವರು" ಅನ್ನೋದುಂಟು. ಅಂದರೆ ನಾವೆಲ್ಲಾ ಆ ಹಿಂದಿನ ಮಹಾತ್ಮರಾದ ಋಷಿ ವಂಶದವರಂತೆ. ಇಲ್ಲಿ ಅಂತೆ ಯಾಕೇಂತ ನಿಮಗೆ ಸಂಶಯ ಅಲ್ಲವೆ? ಒಂದು ಶಾಸ್ತ್ರದ ಪ್ರಕಾರ ನಾವು ವಾನರ ಕುಲದವರು ಬೆಳೆಯುತ್ತಾ ಬೆಳೆಯುತ್ತಾ "ವಾನರ" ಶಬ್ದದ ಉದ್ದವಾದ ಅಕ್ಷರ–ಬಾಲವು ಹೋಗಿ, ಈಗ "ನರ"ರಾಗಿ ಉಳಿದಿದ್ದೇವೆ. ತಮ್ಮ ಮೂಲಪುರುಷರು ಕಪಿಗಳು. ತಾವು ಮಂಗನ ಮರಿಗಳು ಎಂಬೀ ವಾದವನ್ನು ಒಪ್ಪದವರು ಮಾತ್ರ ಈಗಲೂ, ತಾವು ಆ ಗೋತ್ರದವರು ಈ ಗೋತ್ರದವರು, ಎಂದು ಆ ಸದ್ವಂಶವಾದ ಋಷಿಕುಲಕ್ಕೆ ಮಸಿ ಬಳೆಯುತ್ತೇವೆ. ಒಳ್ಳೆಯ

ವರ ಹೆಸರು ಹೇಳಿ ಅನ್ಯಾಯ ಮಾಡುವುದಕ್ಕಿಂತ, ತಾವು ಕೆಟ್ಟ ವರು ತಮ್ಮ ಗುಣವೇ ಹೀಗೆ- ಎಂದುಕೊಳ್ಳುವುದು ಯೋಗ್ಯ ವಲ್ಲವೆ? ಹೇಗೂ ಇರಲಿ! ದೊಡ್ಡವರ ಹೆಸರಾದರೂ ನಮ್ಮ ಬಾಯಲ್ಲಿ ಉಳಿದಿದೆತಾನೆ.

ಆ ನಮ್ಮ ಮೂಲಪುರುಷರಾದ ಋಷಿಗಳಲ್ಲೊ ಕೆಲವರು ಪ್ರಚಂಡ ಕೋಪಿಗಳಿದ್ದರಂತೆ. ಆವರಲ್ಲೊಬ್ಬ ವಿಶ್ವಾಮಿತ್ರ! ಅಬ್ಬಾ! ಅವನ ಕೋಪವೇ!!

ವಡವಾಗ್ನಿ ಜಡೆವೆತ್ತುದೋ? ಸಿಡಿಲು ಭಜಿತವ
ನ್ನಿಡಕಲಿತುದೋ? ಕಾಡ ಕಿಚ್ಚು ಹರಿಣಾಜಿನವ
ನುಡಕಲಿತುದೋ? ಪ್ರಳಯವಹ್ನಿ ತಪವೊತ್ತುದೊ?
ಭಾಳ ಲೋಚನನ ಕೋಪ-
ಕಡೆಗೆ ಮುನಿಯಾಯ್ತೋ? ಹೇಳೆನೆ ಕಣ್ಣ ಕಡೆತೋರ
ಗಿಡಿಗೆದರೆ, ಮೀಸೆಗುಂದಲು ಹೊತ್ತಿ ಹೊಗೆಯೇ ಬಿರು
ನುಡಿಗಳುರಿಯುಗಳೆ, ವಿಶ್ವಾಮಿತ್ರನುರವಣಿಸಿ ಬಂದನ್....
ಪೊಡವಿಯೊಳು ಖಳವಹ್ನಿಯುಗ್ರ, ಖಳವಹ್ನಿಯಿಂ
ದಡವಿಗಿಚ್ಚತ್ಯುಗ್ರ, ವಡವಿಗಿಚ್ಚಿಂದೆ ಬರ-
ಸಿಡಿಲುಗ್ರ, ಸಿಡಿಲಿಂದ ವಡಬಾನಳನೆಯುಗ್ರ,
ವಡಬಾನಲಾಗ್ನಿಯಿಂದ
ಕಡೆಯ ಶಿಖಿಯುಗ್ರ, ವಂತಾಕಡೆಯ ಶಿಖಿಯಿಂದ
ಮೃಡನ ಹಣೆಗಣ್ಣುಗ್ರ, ವಾಮೃಡನ ಹಣೆಗಣ್ಣ
ಕಿಡಿಯಿಂ...... ಕೌಶಿಕನ ಕೋಪಾಗ್ನಿ ಕರಮುಗ್ರವಾಯ್ತು.

ಹೀಗೆ ಇದು ಆ ನಮ್ಮ ಮೂಲಪುರುಷನ ಸಿಟ್ಟು ನಮ್ಮಲ್ಲಿ ಹೆಚ್ಚು ಸಿಟ್ಟಿನವರನ್ನು "ವಿಶ್ವಾಮಿತ್ರಗೋತ್ರದವರು" ಅನ್ನೋದು ಇದರಿಂದ. ನನ್ನ ಸಿಟ್ಟಿಗೆ ಮಾತ್ರ ಆ ಮೂಲಪುರುಷನೂ

ಸಾಟಿಯಲ್ಲ.

ಹಾಗೆಯೇ ನಮ್ಮ ಹಿರಿಯರಲ್ಲಿ ಇನ್ನೊಬ್ಬನಿದ್ದಾನೆ. ಅವನ "ಸುಲಭ ಕೋಪೋಯಂ ಮಹರ್ಷಿ" ಸುಂಸುಮ್ಮನೆ ಸಿಟ್ಟಿಗೇಳು ತ್ತಿದ್ದರೂ ಮಹರ್ಷಿ ಎಂಬ ಬಿರುದುಪಡೆದವ. ಆ ಮಹಾ ತ್ಮನೇ, ದುರ್ವಾಸ. ಆದ್ದರಿಂದ ಅವನು ಪೀತಾಂಬರ ಉಟ್ಟು ಬಂದರೂ ನಾವು ಕರೆವುದು ಹಾಗೇನೆ. ಅವನಲ್ಲಿ ಸಿಟ್ಟಿದ್ರೂನು, ನಾವು ಹ್ಯಾಗೆ ಕರೆದ್ರೂನು, ಅವನು ಒಳ್ಳೆಯವ. ತನ್ನ ನಾಟಕ ದಲ್ಲಿ ಅವನಿಗೊಂದು ಪಾರ್ಟು ಕೊಟ್ಟಿದ್ದರಿಂದ ಕಾಳಿದಾಸ ಕೃತ ಕೃತ್ಯನಾಗಿದ್ದಾನೆ.

ಕಂಡಲ್ಲಿ ಕೇಳಿದಲ್ಲಿ ಸಿಟ್ಟಿಗೇಳುವ ಈ ದುರ್ವಾಸನನ್ನು ಆ ಮಹಾರಾಯ, ಕೌರವರಾಯ- ಪಾಂಡವರ ಅಕ್ಷಪಾತ್ರಿ. ತನ್ನ ಕೆಲಸಕ್ಕೆ ಸಹಾಯಮಾಡಬೇಕೆಂದು ಕೇಳಿಕೊಂಡಿದ್ದ. ಅವನು ಸ್ವಾಭಾವಿಕವಾಗಿಯೂ ಸಿಟ್ಟಿನವ "ಆರವಮಂ ನಿರ್ಜಿತ ಕಂಠೀರವರವಮಂ, ನಿರಸ್ತ ಘನರವಮಂ, ಕೋಪಾರುಣನೇ ತ್ರಂ, ಕೇಳ್ದಾನೀರೊಳಗಿರ್ದುಂ ಬೆಮರ್ದನುರಗಪತಾಕಂ" ಹೀಗೆ ನೀರೊಳಗಿರ್ದು ಸಿಟ್ಟಿನ ಬಿಸಿಯಿಂದ ಬೆವರಿದ ಮನುಷ್ಯ. ಇನ್ನವನ ಎದುರಾಳಿ ಸಾಮಾನ್ಯ ಸಿಟ್ಟಿನವನೆ? "ಅರಿಬೆಂದವು ತಾವರೆ, ಖಗಮರಿಬೆಂದವು, ಭೀಮಕೋಪಶಿಖಿಮುಟ್ಟೆ ಸರೋ ವರದ ಮಳಲ್ಪುರಿಗಡಲೆಗೆ ಪುರಿದ ಮಳಲ್ಕಾಯ್ವತೆರೆಪೆ ಕಾಯ್ದು ತ್ತೆತ್ತಂ" ತನ್ನ ಸಿಟ್ಟಿನ ಉರಿಯಿಂದ ಕೊಳದಡಿಯ ಮಳಲನ್ನು ಹುರಿದವನು.

ನನ್ನ ಸಿಟ್ಟಿಗೆ ಮಾತ್ರ ಇವರೆಲ್ಲರೂ ಸಾಟಿಯಲ್ಲ. ಅಷ್ಟೇಕೆ? ತನ್ನ ಸಿಟ್ಟಿನಿಂದಲೇ ಮಗನನ್ನು ಸೃಷ್ಟಿಮಾಡಿದ ಆ ಅನ್ವರ್ಥ ನಾಮಧಾರಿಯಾದ ರುದ್ರನೂ ಸಾಲದು. ಅವನ ಸಿಟ್ಟೊಂದ್ರೆ

ಕಡಿಮೆಯೆ? ಸಿಟ್ಟಿನ ಬಿಸಿಯಾರಲೆಂದು ನೆತ್ತಿಯಲ್ಲಿ ಹಿಮದ ಗೆಡ್ಡೆಯಿಟ್ಟುಕೊಂಡಂತೆ ಚಂದ್ರನ ತುಂಡನ್ನು, ಅದೂ ಸಾಲದಕ್ಕೆ ನೀರಿನ ಟಾಂಕಿಯನ್ನೇ ಹೊತ್ತಂತೆ ಗಂಗೆಯನ್ನು ಇಟ್ಟುಕೊಂಡವನು.

ಮನುಷ್ಯನಲ್ಲಿರುವ ಗುಣಗಳಲ್ಲಿ ಕೆಲವು ಅವನನ್ನು ದೇವತ್ವಕ್ಕೇರಿಸಿದರೆ ಇನ್ನು ಕೆಲವು ಪಶುತ್ವಕ್ಕೆ ಇಳಿಸಿಬಿಡುತ್ತವೆ. ಇಂಥವುಗಳಲ್ಲಿ ಈ ಸಿಟ್ಟೂ ಒಂದು. ಸಿಟ್ಟು ಬಂದಾಗ ಮನುಷ್ಯನ ಬುದ್ಧಿಯು ಅವನ ಸ್ವಾಧೀನದಲ್ಲಿರುವುದಿಲ್ಲ. ಅಷ್ಟೇಕೆ ಆಗವನು ಮನುಷ್ಯನೇ ಅಲ್ಲ. ಒಬ್ಬನ ಯೋಗ್ಯತೆಯನ್ನು ಪರೀಕ್ಷಿಸಬೇಕಾದರೆ, ಅವನನ್ನು ಸಿಟ್ಟಿಗೆಬ್ಬಿಸುವುದು ಮೊದಲನೆಯ ಪರೀಕ್ಷೆ. ಅದರಲ್ಲಿ ಮೇಲೆ ಬಿದ್ದರೆ, ಮುಂದವನು ಕೆಳಗಿಳಿಯುವುದೇ ಇಲ್ಲ.

ಸಿಟ್ಟಿಗೆದ್ದ ಮನುಷ್ಯನು ಅದರ ಪ್ರಭಾವವನ್ನು ಸುಧಾರಿಸುವುದಕ್ಕಾಗಿ ಪ್ರತಿ ಭಾಷೆಯಲ್ಲೂ ಬೇಕಾದಷ್ಟು ಶಬ್ದಗಳಿವೆ. ಆದರೂ ಕೆಲವರು ತಮ್ಮ ಸಿಟ್ಟನ್ನು ಕಾರುವುದಕ್ಕೆ ತಮ್ಮ ಭಾಷೆಯ ಶಬ್ದಗಳು ಸಾಲದೆ, ಬೇರೆ ಭಾಷೆಯವುಗಳನ್ನೂ ಉಪಯೋಗಿಸುತ್ತಾರೆ. ಇಂಥವರ ಶಬ್ದಾಭಾವವನ್ನು ಪರಿಹರಿಸುವುದಕ್ಕಾಗಿ, ಕತ್ತೆ, ನಾಯಿ ಮೊದಲಾದ ಪ್ರಾಣಿಗಳು ತಮ್ಮ ಪವಿತ್ರ ನಾಮಗಳನ್ನು ಉದಾರವಾಗಿ ದಾನಮಾಡಿದ್ದಾವೆ. ಆದ್ದರಿಂದ ಸಿಟ್ಟಿಗೇಳುವ ಮನುಷ್ಯರು ಅವುಗಳಿಗೆ, ಮೊದಲು ಕೃತಜ್ಞತಾಪೂರ್ವಕ ವಂದನೆಗಳನ್ನರ್ಪಿಸಬೇಕು.

ಇರಲಿ! ನಾನು ಹೊರಟದ್ದೆಲ್ಲಿಂದಲೊ? ಬಂದದ್ದೆಲ್ಲಿಗೊ? ಥತ್ತೇರಿ! ಇದು ಈ ಹಾಳಾದ ಲೇಖನಿ ದೋಷ. ಸರಿ! ನಾನು ಸಿಟ್ಟಿನ ಮನುಷ್ಯಾ ಅಂದ್ನಲ್ವೆ? ಹೌದು. ನೋಡಿ! ನನಗೆ

ಮದುವೆ ಆಗಿ ಸುಮಾರು ಎಂಟು ವರ್ಷವಾಯಿತು ಕಳೆದ ಅಮಾವಾಸ್ಯೆಗೆ...... ಮದ್ವೆ ಅನ್ನುವಾಗ ಒಂದು ಜ್ಞಾಪಕಕ್ಕೆ ಬಂತು. ನೊನ್ನೆ ಒಬ್ಬರು ನಮ್ಮ ಶಾಲೆಗೆ ಸಂಸ್ಕೃತ ಪ್ರಸಾರಕ್ಕಾಗಿ ಬಿಜಯಂಗೈದರು. ಅಂದು ತುಂಬಿದ ಸಭೆಯಲ್ಲಿ ಆ ಬ್ರಹ್ಮಚಾರಿಗಳ ಮುಂದೆ ನೆಟ್ಟಗೆ ನಿಂತುಕೊಂಡು ಮದುವೆಯಿಂದ ಮುಂದುವರಿದು ದಾಂಪತ್ಯ ಜೀವನದ ವಿಷಯವನ್ನು ಕುರಿತು ಸುಶ್ರಾವ್ಯವಾಗಿ, ಮನಮುಟ್ಟುವಂತೆ, ಭಾಷಣಮಾಡಿದರು. ಬಹುಶಃ ಅವರಿಗೆ ಮನಶ್ಶಾಸ್ತ್ರ ಜೋತಿಶ್ಶಾಸ್ತ್ರಗಳೆರಡೂ ಗೊತ್ತಿರಬೇಕು. ಅದೊಂದು ದಿನದ ಭಾಷಣದಲ್ಲಿ ಅವರು ಮದುವೆ ಎನ್ನುವ ಶಬ್ದವನ್ನು ನೂರೆಂಟು ಬಾರಿ ಉಚ್ಚರಿಸುವವರೆಗೂ ನಾನು ಲೆಕ್ಕಮಾಡಿದ್ದೆ. ಆ ಮೇಲೆ ಹುಡುಗರ ಗಲಾಟೆಯಿಂದಾಗಿ ಲೆಕ್ಕ ತಪ್ಪಿತು. ಆದರೂ ಆ ಶಬ್ದಗಳು ಆಗಾಗ ಹೊರಟು ಬರುವಾಗ ಸರಿಯಾಗಿ ಕಿವಿಗೊಟ್ಟು, ಕೇಳಿದೆ. ಕಾರಣ ಅದರಲ್ಲೊಂದು ವೈಶಿಷ್ಟ್ಯವಿತ್ತು. ಅವರು ಪ್ರತಿಸಲವೂ, ಮಧುವೆ, ಮಧು-ವೆ, ಎಂದೇ ಹೇಳುತ್ತಿದ್ದರು. ನನಗೂ ಕೂಡಾ, ದಶರ, ಮಶರ, ಮೆಣ, ಸುಜಿ, ರಿಗೆ, ಎಂದಾದರೂ ಸಂಸ್ಕೃತ ಕನ್ನಡ ಉಭಯ ಭಾಷಾ ಪಾಂಡಿತ್ಯವಿತ್ತು. ಆದರೂ ಇದಾವ ಭಾಷೆಯ ಶಬ್ದವೆಂದು ನಾನೂ ಬೆಪ್ಪುಕಟ್ಟಿಹೋದೆ. ಸಟ್ಟಕ್ಕೆ ಆ ಶಬ್ದದ ಮೇಲೊ ಅವರ ಮೇಲೊ? ಸಿಟ್ಟು ಬರಲಿಲ್ಲ. ಕೊನೆಗೆ ಸಭೆ ಮುಗಿದ ಮೇಲೆ ಅವರ ಬೆನ್ನು ಹತ್ತಿ "ಇದೇನು ಸ್ವಾಮಿ! ತಾವು ಭಾಷಣ ಮಾಡುವಾಗ ನವ ವಧೂವರರು ಸೇರುವ ಆ ಕಾರ್ಯಕ್ಕೆ ನವ ಶಬ್ದವನ್ನೇ ಪ್ರಯೋಗಿಸಿದಿರಿ?" ಎಂದ ಕೂಡಲೇ ಅವರು, ಅಯ್ಯೊ ಪಂಡಿತರೆ! ನೀವು ಮೇಷ್ಟ್ರಾಗಿದ್ರೂನು ಅದರರ್ಥ ಗೊತ್ತಾಗಿಲ್ಲಾಂದ್ರೆ ಆಶ್ಚರ್ಯ.

ಹೋಗಲಿ, ನಾನು ಮಧು-ವೆ, ಅಂದದ್ದನ್ನಲ್ಲವೆ ನೀವು ಕೇಳೋದು. "ಮಧು" ಅಂದರೆ, ಮೊದಮೊದಲು ಸಿಹಿಯಾಗಿರುವುದು. "ವೇ" ಅಂದರೆ, ನಂತರ ವಾಂತಿಯಾದ ಹಾಗಾಗುವುದು, ಅಷ್ಟೆ ಅದರರ್ಥ. ಕಾರ್ಯದಲ್ಲಿ-ಅರ್ಥದಲ್ಲಿ ಗಂಡು ಹೆಣ್ಣು ಸೇರಿದೆ, ಶಬ್ದದಲ್ಲಿ ಸಂಸ್ಕೃತ ಕನ್ನಡ ಸೇರಿದೆ, ಇನ್ನೇನಿದೆ ಅಂದುಬಿಟ್ಟರು. ಇರಲಿ ಈಗ ನಾನು ಜಗಲಿ ಪುರಾಣದಂತೆ ಬಾಗವ್ವನವರ ಗಂಡ ಕಾಶಿಗೆ ಬೆಳಿಗ್ಗೆ ಹೊರಟರು, ಅವರ ಸೊಸೆ ಸಂಜೆ ಬಾವಿಗೆ ಬಿದ್ದರು, ಎಂದು ಅರ್ಥಾರ್ಥ ಸಂಬಂಧವಿಲ್ಲದೆ ಹರಟುತ್ತಾ ಬಂದೆ.

ಎಲ್ಲಿಂದ ಹೊರಟದ್ದು? ಓ! ನನಗೆ ಮದುವೆಯಾಗಿ ಎಂಟು ವರ್ಷವಾಯ್ತು. ಸರಿ, ಆ ಮೇಲೆ ಈಗ ಏಳು ಮಂದಿ ಕನ್ನೆಯರು ಸಂಜನಿಸಿದರು. ಅದು ಸಹ ನಾನು ಸಂತಾನ ನಿರೋಧಿ ಕಾನೂನಿಗೆ ಹೆದರಿದ್ದರಿಂದ. ಹೇಗೂ ಆಗಲಿ, ನನ್ನಂಥವನಿಗೆ– ಮೇಷ್ಟ್ರಿಗೆ, ಮೇಷ್ಟ್ರೆಂದ್ರೆ ಗೊತ್ತು ತಾನೆ? ಎಳೇ ಮಿದುಳಿಗೆ ಸೂಜಿ ಚುಚ್ಚಿ, ಅದರ ಬುಡದಿಂದ ತನ್ನ ಹೆಬ್ಬೆಟ್ಟು ಚುಚ್ಚಿಸಿಕೊಳ್ಳುವವ. ಅಂಥವನಿಗೆ ಹೀಗೆ ಒಂದೇ ಸಮನೆ ಅದೂ ಸಹ ಹೇಂಟೆಗಳೇ ಆದರೆ ಅವನ ಗತಿ ಯೇನಾಗಬೇಡ. ಇದರ ಮೇಲೆ ನನ್ನ ಸ್ವಭಾವ ಮೊದಲೇ ಹೇಳಿದ್ದೆ. ಆದ್ದರಿಂದ ಅವಳ– ನನ್ನ ಅರ್ಧಾಂಗಿಯ ಮೇಲೆ ಎಲ್ಲಿಲ್ಲದ ಸಿಟ್ಟು.

...ಈ ಪಿಂಡಗಳು! ...ಯಾಕೆ ಹುಟ್ಟಿದವು? ...ಇವುಗಳ ಗುಡಾಣ ಭರ್ತಿಮಾಡೋದು ಹೇಗೆ... ನಿನಗೊಬ್ಬಳಿಗೆ ಸೀರೆ ರವಕೆ ಕೊಡೋದೇ ನನ್ನ ಜೀವಕ್ಕೆ ಸಾಕಾಗುತ್ತದೆ. ನಿನ್ನ ಚಂಡ ದಕ್ಷ ಸಂತಾನ! ನಿನ್ನಪ್ಪಾಂತ ಕಾಣುತ್ತೆ... ಅಲ್ಲಾ,

ನಿನ್ನ ಕೈ ಹಿಡಿದಾಗ ಅಲ್ಲ ನೀನು ನನಗೆ ಕೈಕೊಟ್ಟಾಗ ನಿನ್ನ ಹೊಟ್ಟೇಲಿಷ್ಟು ಅವತಾರ ಇವೇಂತ ತಿಳಿದಿದ್ರೆ– ಥತ್! ಮೊದ್ಲು ಎರಡು ಜೊತೆ ಬಳೆಗೆ ಮಾತ್ರ ಕಾಸು ಆದ್ರೆ, ಈಗ ಇಪ್ಪತ್ತೈದು ಜೊತೆಯಾದ್ರೂ ನಿನ್ನ ಸಂತಾನಕ್ಕೆ ಸಾಲೊಲ್ಲ... ನನ್ನ ಸಂಬಳ ವೆಲ್ಲಾ ಈ ದುರ್ಬೀಜಗಳಿಗೆ ಲಂಗ ಟೋಪು ಕೊಡೋಕೇ ಸಾಲದು!... ಅಬ್ಬಾ ಎಂಥ ಗೂಬೆಗಳನ್ನ ಕಾರಿಬಿಟ್ಟಿದ್ದಿ?... ನೋಡಿದವರು ಒಂದು ಗಳಿಗೆ ಕಣ್ಣು ಮುಚ್ಚಬೇಕು... ಎಂದು ಮೊದಲಾಗಿ ಬೈದದ್ದೇ ಬೈದದ್ದು. ಪುಣ್ಯಕ್ಕೆ "ಸಿಟ್ಟಿಗೆ ನಗು ಮದ್ದೂಂತ," ಸುಮ್ಮನೆ ನಗೋದ್ರಿಂದ ಇನ್ನು ಮುಂದಿನ ನನ್ನ ಸಂತಾನ ವೃದ್ಧಿಗಾಗಿ ಬದುಕಿದ್ದಾಳೆ.

"...ಲೇ! ಅದೇನು ನಿನ್ನ ಪಿಂಡಶಕ್ತಿಯೊ? ಅಲ್ಲ ಮೈಗುಣವೊ? ದಿನದಿನಕ್ಕೆ ಅಡ್ಡಡ್ಡವಾಗಿ ಬೆಳೆಯುತ್ತೀಯಲ್ಲೆ? ನಾನಾದರೆ ಉದ್ದುದ್ದ ಬೆಳೆದು ಸಾಯಲಿಕ್ಕಾಗಿದ್ದೇನೆ. ಅಲ್ಲಾ ನಾವು ದಾರಿಯಲ್ಲಿ ಮೆರವಣಿಗೆ ಮಾಡುತ್ತಿದ್ದಾಗ್ಗೆ, ನಮಗೆ ಕೇಳೀತೆಂಬ ಹೆದರಿಕೆಯಿಲ್ಲದೇನೆ, "ನೋಡೊ! ಗುಜ್ಜಾನೆ ಮರಿ ಮತ್ತು ಬರಗಾಲದ ಒಂಟೆ" ಎಂದು ಹಾಸ್ಯ ಮಾಡುತ್ತಾರಲ್ವೆ ಜನ. ನಿಂಗೆ ಅವಮಾನ ಅನ್ನೋದು ಸಾಸಿವೆ ಕಾಳಿನಷ್ಟೂ ಇಲ್ವೆ?... ಯಾಕೆ ಹೀಗೆ ಅಡ್ಡಾದಿಡ್ಡಿ ದೇಹ ಬೆಳೆಸ್ತಿ!... ತಂದ ಸಾಮಾನೆಲ್ಲಾ ಕದ್ದು ಸ್ವಾಹಾ ಮಾಡ್ತೀಂತ ಕಾಣುತ್ತೆ. ಯಾವಾಗ ನೋಡಿದ್ರೂನೇ ಅದಿಲ್ಲ ಇದಿಲ್ಲಾಂತ ನಂಗೆ ಅರಿಹೊಟ್ಟೆ. ಒಂದು ಗಂಡನ್ನ ಸಾಕದ ಹೆಂಡ್ತಿ ಯಾಕೆ ನೀನು? ನಾಳೆಯಿಂದ ನೀನು ಕಾರ್ಖಾನೆ ಕೆಲಸಕ್ಕೆ ಹೋಗಬೇಕು. ಆಗಲಾದ್ರೂ ಈ ಬೊಜ್ಜು ಕರಗೀತು.

"ಅಲ್ಲಾಂದ್ರೆ! ನೀವು, ನಂಗೆ ತಿಂದು ಮಾಂಸ ತುಂಬಿದೆ

ಅನ್ನೋದಲ್ವೆ? ನೀವು ತಿಂದು ಅದು ತುಂಬೋ ವರೆಗೆ ಕಾಯೋದು ಬೇಡ, ನನ್ನ ಮಾಂಸನೇ ತಿಂದುಬಿಡಿ..."

ನಾನು ತಿನ್ನಹೋದಾಗ ಬರೀ ನೀರೇ ಆದ್ರೂ ಸಿಹಿಇತ್ತೂನ್ನಿ.

ತಿಂಗಳಾಯ್ತೂಂದ್ರೆ ಸರಿ! ಆ ಮೂರು ದಿನ ಬರುತ್ತಲ್ಲ! ಆಗ ನಮ್ಮ ಮನೆಯಲ್ಲಿ ಕುರುಕ್ಷೇತ್ರವೆ... ಥು! ಥು! ಥು!... ಆ ಕೌರವ ಪಾಳ್ಯವೇ ನನ್ನಲ್ಲಿ ಬಡ ಜೀವಿಗಳಾಗಿ ಹುಟ್ಟಿವೆ... ಥತ್ತೇರಿ!... ಕೈಯೆಲ್ಲಾ ಮಸಿ... ಅಯ್ಯೋ ಮೂಗು ತುರಿಸ ಹೋದ್ರೆ ಅಲ್ಲೂ ಆಯ್ತು?... ಹಾಳಾಗಲಿ ಈ ಹೆಂಗ್ಸು ಜಾತಿ!... ಯಾಕೆ ತಿಂಗಳಿಗೊಮ್ಮೆ ಹೀಗಾಗುತ್ತೊ!... ಛೆ! ಛೆ! ಒಂದೇ ದಿನ ಮೂರು ಮಡಿಕೆ ಹೋಯ್ತು ಬೆಂಕಿ ಬೀಳಲಿ! ಈ ಒಲೆನೋ ಎಷ್ಟು ಸೀಮೆ ಎಣ್ಣೆ ಸಿಡಿದ್ರೂ ಉರಿಯೋಲ್ಲ. ಹಾಳು ಸಂಸಾರ! ಸಾಕಾಗೋಯ್ತು!... ಅಲ್ವೆ! ನೀನೊಬ್ಬೈನ ಹೆಂಗ್ಸಿರೋದು ಈ ಜಗತ್ನಾಗೆ. ಎಲ್ಲಾ ಹೆಂಗ್ಸ್ರುಗೂ ನಿನ್ನಾಂಗೆ ಈ ರೋಗ ಉಂಟು?... ಇಲ್ಲ! ಯಾರಿಗೂ ಇಲ್ಲ. ಇದು! ಇದು! ನನ್ಕೈಲಿ ಸುಡ್ಸೋಕೇಂತ ದೇವ್ರು ಕೊಟ್ಟ ವರ ನಿಂಗೆ. ಈ ವ್ಯಾಧಿ ಅಂಟಿದ್ದು ನಿಂಗೊಬ್ಬೆಗೆ. ಎಲ್ಲಾರ್ಮನೆ ಎಷ್ಟು ಹಾಯಾಗಿದೆ. ಈ ಪೀಡೆ ನಮ್ಮಲ್ಲಿ ಮಾತ್ರ!... ಅಲ್ವೆ! ಲೇ! ನನ್ನ ಪೀಡ್ಸೋ ದಲ್ಲದೆ, ಅಲ್ಲಿ ಮೂಲೆಯಲ್ಲಿ ಕೂತ್ಕೊಂಡು ಕಿಲಕಿಲಾಂತಿರ್ತಿ ಯಲ್ವೆ?... ಹುಂ, ನಿನ್ನ ಕಣ್ಣಲ್ಲಿ ಒಂದಿಷ್ಟು ರಕ್ತಾನೂ ಇಲ್ಲಾಂತ ಕಾಣುತ್ತೆ! ಬಾ! ನೀನು ನಾಳ್ದು ಒಳಗೆ ಬಾ! ಒಳಗೆ ಮಾತ್ರ ಬಾ!... ನಿನ್ನ ಸೊಕ್ಕು!... ಇಳ್ಸಿಬಿಡ್ತೇನೆ...

"ಅಲ್ವೆ! ಪ್ರತಿಸಲನು ಚಳಿಗಾಲ ಮಳೆಗಾಲ ಈ ಎರಡೇ ಕಾಲಗಳಿರೋದೇನೆ ನಿನ್ನ ಆ ಗಾಂಧಾರಿ ಪಿಂಡಗಳ್ನ ಇಳ್ಸೋಕೆ?... ಕಡ್ಡಿಯಂಥ ಈ ಜೀವ ಬದ್ಕೋದಾದ್ರು ಹೇಗೆ? ನಿನ್ನಂಥ ಹೆಂಡ್ತಿ

ಇದ್ರೆ ಆಯ್ತು ಅವನ ಗತಿ? ಲೇ! ಲೇ! ನೋಡು ವರ್ಷದಲ್ಲಿ ಇನ್ನು ಎಂಟು ತಿಂಗ್ಳು ಇಲ್ವೆ?... ಅಲ್ಲಾ ನನ್ನ ಈ ಜನ್ಮದಲ್ಲಿ ಎಷ್ಟು ಸತಾಯಿಸ್ಬೇಕೂಂತ ನಿನ್ನ ಪ್ರತಿಜ್ಞೆ? ಗಂಡಾ ಅನ್ನಿಕೊಂಡೊನ್ಮೇಲೆ ಹೆಂಡ್ತಿ ಅಂಬೊಳೀಗೆ ಒಂದಿಷ್ಟು ದಯಾನು ಬೇಡ್ವೆ?

ಶ್ರಾದ್ಧ! ಶ್ರಾದ್ಧ ನನ್ನಪ್ಪಂದು ಹೋಗಿ ನಂದೇ ಆಯ್ತು!... ಪಿಂಡ ನನ್ನಪ್ಪನ್ಪಿಂಡ ಅಲ್ಲ! ನನ್ಪಿಂಡ. ನಾನೇ ತಿನ್ಬೇಕು... ಈ ಹೆಂಗ್ಸ್ರನ್ನ ನಂಬಿ ಯಾವ ಕೆಲ್ಸನೂ ಆರಂಭಿಸಬಾರ್ದು ...ಲೇ! ಲೇ! ನಿಂಗೆ ಬೆಳಗೆದ್ದೊಳಿಗೆ ಏನು ಗರಬಡೀತ್ತೆ? ಅಲ್ಹೋಗಿ ಕುಕ್ಕರಿಸಿ ಬಿಟ್ಟೆಲ್ಲ? ಐದು ಜನ ಬ್ರಾಹ್ಮಣ್ರನ್ನ ಈ ದಿನ ಕ್ಷಣಿಸ್ಬೇಕೂಂತ ಹೇಳ್ಬಿಟ್ಟಿದ್ದೆಲ್ವೆ? ಈಗೇನ್ಮಾಡ್ಲಿ?... ಅರ್ಧ ದಾರೀಲಿ ಬರ್ತಿರೊ– ಒಂದು ವರ್ಷದಿಂದ ಉಪಾಸ ಬಿದ್ದ, ಆ ಅಪ್ಪನ್ನ ವಾಪ್ಸು ಕಳ್ಸ್ಲೆ?... ನೀನು, ಜೀವ ಇದ್ದಾಗ್ಲೂ ಅವನಿಗೆ ಹೊತ್ತಿಗೆ ಸರಿಯಾಗಿ ಕೂಳು ಹಾಕಿದ್ರಲ್ವೆ. ಈಗ ಹಾಕೋದು ನಿನ್ನ್ಖರ್ಮ! ಅಲ್ಲ! ನಿನ್ಪಡದ್ದು ನನ್ನ್ಖರ್ಮ!!... ಅಪ್ಪಂಗೆ ಕೊಡೊ ತಿಲಾಂಜಲಿ ಶ್ರಾದ್ಧಕ್ಕೇ ಕೊಟ್ಟ ಹಾಗಾಯಿತು ಅಲ್ವೆ! ಕಾದು, ಕಾದು ಬೇಕುಬೇಕೂಂತ ಹೀಗೆ ಹಿಂಸೆ ಕೊಡ್ತಿಯಲ್ವೆ!

ನೋಡು ನನ್ನ ರೇಗಿಸ್ಬೇಡ! ನನಗೆ ಸಿಟ್ಟು ಬರುತ್ತೆ "ಎಂದು ಅನ್ನೋದುಂಟು. ಅವರ ಸಿಟ್ಟಿಗೆ ಮೊದ್ಲು ಕಾರಣ ಬೇಕು. ನನ್ನ ಸಿಟ್ಟು ಆ ಮೇಲೆ ಕಾರಣ ಹುಡುಕುತ್ತೆ... ಲೇ ಲೇ... ಅಲ್ಯಾಕೆ ಕೂತಿದ್ದೀ?... ಹಾಂ! ಎದ್ಬಿಟ್ಟೆಯಾ!... ಯಾಕೆದ್ದೀಂತ... ಲೇ ಪಿಶಾಚಿ ಎಲ್ಲಿ ಹೋಗ್ತ್ಯೆ?... ಏ ಮಾರಿ! ನನ್ನೇ ನೋಡ್ತಿಯಾ?... ಮೂಳಿ ಮತ್ತೂ ನೋಡ್ತಿಯಾ?... ಅದ್ಯಾಕೆ ಒಳಗ್ಹೋದೀ ಲೇ ಕತ್ತೇ! ಈವತ್ತು ಏಕಾದಶೀಂತ ಗೊತ್ತಿಲ್ವೆ... ನಾನು ಉಪವಾಸ ಮಾಡೋದು ಮರ್‍ತ್ಹೋಯ್ತೆ!..

ಅಡಿಗೆ ಯಾಕ್ಮಾಡ್ಲಿಲ್ವೆ... ಉಪವಾಸಲ್ವೇನೇ ನಂಗೆ. ಅಡಿಗ್ಯಾಕ್ಮಾಡ್ಲಿಲ್ಲಾಂತೀನಿ. ಬಾಯಿ ಬಿಡ್ತಿಯಾ? ಹಲ್ಲು ತೋರ್ಸ್ತಿಯಾ? ನಿನ್ನ ಹಲ್ಲು! ಅದನ್ನು ತುಟಿ ಮುಚ್ಚದ್ಹಾಂಗೆ ಮಾಡ್ಬಿತ್ತೀನಿ..."

# ಶಬ್ದದ ಕೊಲೆ

ಶಬ್ದದ ಕೊಲೆ ಎಂದಕೂಡಲೇ ನಿಮಗಾಶ್ಚರ್ಯವಾಗಬಹುದು! ಕೊಲೆಮಾಡಲು ಅದೇನು ಮನುಷ್ಯನೆ? ಪ್ರಾಣಿಯೆ? ಎಂದು ಕೇಳಬಹುದು? ನಮಗರಿವಿಲ್ಲದೇನೇ, ಇದ್ದೂ ಅಸಡ್ಡೆ, ಅಭ್ಯಾಸಬಲದಿಂದ ಶಬ್ದದ ಕೊಲೆಯಾಗುತ್ತದೆ. ಏನೂ ಅರಿಯದವನು ಈ ಕೊಲೆಯನ್ನು ಮಾಡಿದ್ದರೆ ಕ್ಷಮ್ಯವಾಗುತ್ತಿತ್ತು. ಆದರೆ ಪ್ರಾಜ್ಞರೆನ್ನಿಸಿಕೊಂಡವರೇ ಈ ಪಾತಕವನ್ನಾಚರಿಸಿದ ಮೇಲೆ ದಂಡ್ಯವಲ್ಲವೆ? ಇರಲಿ ಶಬ್ದದ ಕೊಲೆ ಹೇಗೆಂಬುದನ್ನು ನೋಡೋಣ.

ಶಬ್ದ ಮತ್ತು ಅರ್ಥ ಇಗ್ಗಾಲು ಬಂಡಿಯಂತೆ, ಸೂರ್ಯ ಚಂದ್ರರಂತೆ, ಕಣ್ಗಳಂತೆ, ಪ್ರಕೃತಿ ಪುರುಷರಂತೆ, ಕೂಡಿದ್ದರೇನೇ ಪ್ರಪಂಚದಲ್ಲಿ ಸುಖಶಾಂತಿ ಇಲ್ಲವಾದರೆ ಏನಿದ್ದರೂ ಇಲ್ಲದಂತೆ. ಈಗ ನಾವೂ ಹೆಚ್ಚಾಗಿ ಶಬ್ದವನ್ನು ಮಾತ್ರ ಹಿಡಿದು ಜೋತಾಡುವುದರಿಂದ ಜಗತ್ತಿನಲ್ಲೆಲ್ಲಾ ಅಲ್ಲೋಲ ಕಲ್ಲೋಲಗಳಾಗವು. ನಮ್ಮಲ್ಲಿ ಶಬ್ದಕ್ಕೆ ಕೊರತೆಯೇ ಇಲ್ಲ. ಉತ್ತಮರೆಂದು ಪ್ರದರ್ಶಿಸುವ ಜನರ ಬಾಯಲ್ಲಂತೂ ಆ ಶಬ್ದವು ಸರ್ವಾಂಗ ಸುಂದರವಾಗಿ ಕಂಗೊಳಿಸುತ್ತದೆ. ಆದ್ದರಿಂದಲೇ ಅವರ ಗೋಮುಖದ ಹಿಂದಿರುವ ವ್ಯಾಘ್ರ ಹೃದಯ ಕಾಣದಂತಾಗಿದೆ. ಎಲ್ಲರೂ ಆ ಶಬ್ದಾಡಂಬರಕ್ಕೆ ತಲೆದೂಗಿ ಪುಂಗಿಯ ಮುಂದಿನ ನಾಗರಾಗಿದ್ದಾರೆ. ಭಾಷಣ, ಪತ್ರಿಕೆ, ಮನವಿ, ಆಜ್ಞೆ ಮೊದಲಾದವುಗಳ ಶಬ್ದ ಶೈಲಿಯನ್ನು ಕಂಡರೆ ಈ ಕರ್ಮಭೂಮಿಯು ಸುರನಗರಿಯಾಗಿ ಎಷ್ಟೋ ಸಹಸ್ರ ವರ್ಷಗಳಾ

ದಂತೆ ಭಾಸವಾಗುತ್ತದೆ.

ಒಬ್ಬ ಮಾನ್ಯ ಮಂತ್ರಿಗಳಿಗೆ ಸಲ್ಲಿಸಿದ ಭಿನ್ನವತ್ತಳೆಯ ನ್ನೋದಿದರೆ ಪ್ರತ್ಯಕ್ಷ ಧರ್ಮರಾಯನೇ ಅವರೆಂದು ಸಾಮಾನ್ಯರು ತಿಳಿದಲ್ಲಿ ತಪ್ಪಿಲ್ಲ. ಅಲ್ಲಿ ವರ್ಣಿತವಾಗಿರುವ ವಿಷಯಗಳ ಸಹಸ್ರಾಂಶವಾದರೂ ಆ ವ್ಯಕ್ತಿಯಲ್ಲಿ, ದೀಪ ಹಿಡಿದು ಹುಡುಕಿದರೂ ಒಂದು ಮೂಲೆಯಲ್ಲಾದರೂ ಇದೆಯೆ? ನಾನು ಇಲ್ಲವೆನ್ನುವುದಿಲ್ಲ? ಇದ್ದರೆ ತಿಳಿಸಿ. ಇನ್ನು ಆ ಮಹಾಶಯರು ನೀಡುವ ಆಶ್ವಾಸನೆಯ ಮಾತುಗಳಲ್ಲಿ ಒಂದಾದರೂ ಸ್ವಾರ್ಥವಾಗಿದೆಯೆ? ಇದೊಂದು ರೀತಿಯ ಶಬ್ದದ ಕೊಲೆಯಲ್ಲವೆ?

ಇನ್ನು ಕೆಲವು ಪತ್ರಿಕೆಗಳಲ್ಲಿಯ ಔಷಧಿಗಳ ವರ್ಣನೆಯನ್ನು ನೋಡಿದರೆ ಈ ಮರ್ತ್ಯಲೋಕವು ಅಮರ ಲೋಕವಾಗಿ ಯಮನು ತನ್ನ ಉದ್ದಿಮೆಗೆ ಒಲ್ಲೆಯೋಲೆ ಸಲ್ಲಿಸಬೇಕೆನ್ನಿಸುತ್ತದೆ. ಆದರಾ ಶಬ್ದಗಳಿಗೆ ಅರ್ಥ ಕೂಡಿದೆಯೆ?

ಪ್ರತಿಯೊಬ್ಬರೂ ತಾವು ಸತ್ಯವಾದಿಗಳೆಂದೇ ನಂಬಿದ್ದಾರೆ. ಆದರೆ ಅವರಾಡುವ ಶಬ್ದಗಳಲ್ಲಿ ಸತ್ಯಾರ್ಥವೆಷ್ಟಿದೆಯೆಂದು ಅವರಿಗೇ ಗೊತ್ತಿಲ್ಲ. ತಮ್ಮ ಹೊಲಸು ಬಾಯಲ್ಲಿ ಒಳ್ಳೆಯ ಶಬ್ದಗಳನ್ನುಚ್ಚಾರ ಮಾಡಲು ಲಜ್ಜೆಯೇಕಾಗುವುದಿಲ್ಲವೊ? ಕೆಲವರಿಗೆ.

ಶಬ್ದಾರ್ಥಗಳಿದ್ದಂತೆ ಜಗತ್ತಿನ ತಾಯಿ ತಂದೆಗಳಾದ ಪಾರ್ವತೀ ಪರಮೇಶ್ವರರಿದ್ದಾರೆಂದೊಬ್ಬ ಕವಿ ಸಾರಿದ್ದಾನೆ. ಆ ಶಬ್ದರೂಪ ಸತಿಯನ್ನು ಪತಿಯಿಂದ ದೂರಮಾಡಿ ಯಾ ಪತಿಯನ್ನು ನಾಶಮಾಡಿ ವಿಧವೆಯನ್ನಾಗಿ ಮಾಡುವುದು ಈಗ ಸರ್ವಸಾಮಾನ್ಯವಾಗಿದೆ. ಎಲ್ಲರೂ ದೊಡ್ಡ ದೊಡ್ಡ ಶಬ್ದಗಳನ್ನು ಹೇಳುವವರೇ ಹೊರತು, ಅದರರ್ಥದಂತಿರುವವರು

ವಿರಳ. ಇದೊಂದು ಬಗೆಯ ಶಬ್ದದ ಕೊಲೆಯಲ್ಲವೇ?

ಈಗ ಜನತಾ ಮುಖಂಡರೆನ್ನಿಸಿಕೊಂಡವರ ಬಾಯಲ್ಲಿ ಹಾಗೆಯೇ ಧರ್ಮರಕ್ಷಕರೆನ್ನಿಸಿಕೊಂಡವರ ಬಾಯಲ್ಲಿ ಸಿಕ್ಕಿ ನರಳುತ್ತಿರುವ ಸತ್ಯ-ಪ್ರಾಮಾಣಿಕತೆ-ದೇಶಪ್ರೇಮ, ಮುಂತಾದ ಶಬ್ದಗಳು ಎಂದಿಗೆ ಸಾರ್ಥಕವಾದಾವು? ಅರ್ಥವಿಲ್ಲದ ಶಬ್ದವು ಅರಣ್ಯರೋದನವಾಗುವುದಲ್ಲದೆ ಹೇಳುವವನ ಶ್ವಾಸವನ್ನೂ ಕ್ಷೀಣಿಸುತ್ತದೆ. ನಾವಿಂದು ಬರೆವ ಮತ್ತು ಆಡುವ ಪ್ರತಿಯೊಂದು ಶಬ್ದಗಳೂ ಅರ್ಥಹೀನವಾಗುತ್ತ ಬಂದಲ್ಲಿ ಪರಿಣಾಮವೇನಾದೀತು? ನಮ್ಮ ಶಬ್ದಗಳು ಎಷ್ಟು ಸತ್ವಪೂರ್ಣವಾಗಿವೆ?

ಇಂದು ಪ್ರತಿಯೊಬ್ಬ ಯುವಕ-ಯುವತಿಯರ ಮುಂದೆ ಪ್ರತ್ಯಕ್ಷವಾಗಿ ನಲಿವ "ಪ್ರೇಮ" ಶಬ್ದದ ಅರ್ಥವು ಅವರಲ್ಲೆಷ್ಟು ಮಂದಿಗೆ ಮಂದಟ್ಟಾಗಿದೆ? ಆದರೂ ಎಷ್ಟು ಜನ ತಮ್ಮ ಎಲುಬಿಲ್ಲದ ನಾಲಗೆಯಲ್ಲಿ ಆ ಶಬ್ದವನ್ನು ಬಂಧಿಸಿಲ್ಲ? ಈ ರೀತಿ ಅರ್ಥಶೂನ್ಯವಾದ ಆ ಶಬ್ದಕ್ಕೆ ಬಲಿಬಿದ್ದು ಅದೆಷ್ಟು ವ್ಯಕ್ತಿಗಳು ಮೋಸಹೋಗಿಲ್ಲ? ನಾವು ನಾಗರಿಕರೆನ್ನಿಸಿಕೊಂಡವರು ಈ ಪರಿಯಾಗಿ ಶಬ್ದದ ಕೊಲೆಮಾಡಬಹುದೆ?

ಸರಿ! ನಾವು ನಾಗರಿಕರು! ಅಲ್ಲವೆ? ಹೌದು! ೨೦ನೇ ಶತಮಾನದವರು! ಸ್ವತಂತ್ರ ನಾಗರಿಕರು! ಇಲ್ಲಿ ನಾಗರಿಕ ಎಂದರೆ ನಗರವಾಸಿ, ಸುಸಂಸ್ಕೃತ, ಎಂದು ಎರಡರ್ಥವಿವೆ. ಕ್ರಿಮಿಕೀಟಗಳಿಂದ ತುಂಬಿದ ಕೊಚ್ಚೆ ನೀರಿನ ಚರಂಡಿಯ ಬದಿಯಲ್ಲಿ ತಟ್ಟಿಗೋಡೆಯೊಳಗೆ, ಹರಕು ಚಾಪೆಯಲ್ಲಿ ಚಿಂದಿಯುಟ್ಟು ತುಣುಕು ರೊಟ್ಟಿ– ಅದೂ ಎಂಜಲು– ತಿನ್ನುವ ಮಾನವ ಪ್ರಾಣಿ ನಾಗರಿಕನೆ? ದಿನವಿಡೀ ಯಂತ್ರದಂತೆ ದುಡಿ

ದರೂ ಅರೆಹೊಟ್ಟೆ ಬಿಗಿದು, ಕೂಳಿಗಾಗಿ ಬಾಳನ್ನು ಬಲಿಕೊಡುವ ಜನರು ನಾಗರಿಕರೆ? ಕರಿಸೊಡ್ಡುಗಳಿಗೆ ಬಣ್ಣ ಬಳಿದು ಕಂಡವರ ಕಣ್ಣು ವಂಚಿಸುವ ಆಡಂಬರದ ಬಾಹ್ಯ ಶೃಂಗಾರಗಳಿಂದ ಆಂತರಿಕದ ಕೊಳೆಯನ್ನು ಮುಚ್ಚಿಡುವ, ವ್ಯಾಪಾರಧರ್ಮವೆಂದು ಒಬ್ಬರನ್ನೊಬ್ಬರು ಸುಲಿವ, ಅಧಿಕಾರಿಗಳೆಂದು ಜನರ ಸಂಪತ್ತನ್ನು ಬಲಿಗೊಳ್ಳುವ ಮಾನವರು ಸುಸಂಸ್ಕೃತರೆ?......

ಹೀಗೆ ಶಬ್ದದ ಕೊಲೆಯನ್ನು ಹೇಳಿಹೋದರೆ ಹನುಮಂತನ ಬಾಲವಾದೀತು. ತಾವು ತಾವೇ ಯೋಚಿಸುವುದೊಳ್ಳಿತು. ಮಾತು ಬರಹಗಳಲ್ಲಿ ಆದಷ್ಟು ಶಬ್ದದ ಕೊಲೆ ಕಡಿಮೆಯಾದರೆ ಆ ಸರಸತಿಯು ಪ್ರಸನ್ನಳಾದಾಳು! ಮನದಂತೆ ನುಡಿ, ನುಡಿಯಂತೆ ನಡೆ, ಇದೇ ನಾಗರಿಕನ ಲಕ್ಷಣ. ಆದರಿಂದು ಎಷ್ಟೋ ಜನ ಹೊಗಳಿಕೆಯ ಮಾತು, ಬರಹಗಳಿಂದಲೇ ಮುಂದೆಬಂದ, ರಾಷ್ಟ್ರವೀರ, ಕವಿವರ, ಗುರುವರ್ಯರುಗಳನ್ನು ಕಾಣಬಹುದು. ಅಂಥಹ ಗಾಳಿ ತುಂಬಿದ ಬೆಲೂನುಗಳು ಎಷ್ಟು ಕಾಲ ಹಾರಾಡಬಲ್ಲುವು? ಹೀಗೆ ತೋಟ ಶೃಂಗಾರವೇ ಆಗುತ್ತಾ ಹೋದರೆ ನಾವು ಗಾಂಧಿ ಬಯಸಿದ ರಾಮರಾಜ್ಯವನ್ನು ಕಾಣಲು ಸಾಧ್ಯವೆ? ಮಾತು ಆಡಿ ಕೆಡಬಾರದು ಮುತ್ತು ಒಡೆದು ಕೆಡಬಾರದು. ಇದು ಎಲ್ಲರಿಗೂ ಗೊತ್ತು. ಆದರಿಂದು ಎಲ್ಲರ ಕಂಠದಲ್ಲೂ ಒಡೆದ ಮುತ್ತಿನ ಸರವೇ. ಅಲಂಕಾರಿಕ ಮಾತುಗಳಿಗೆ ಸಾಹಿತ್ಯದಲ್ಲಿ ಮಾತ್ರ ಬೆಲೆಯಲ್ಲದೆ ವ್ಯಾವಹಾರಿಕ ಜೀವನದಲ್ಲಿ ಬೆಲೆಯಿಲ್ಲ. ಹೇಳುವುದು ಸತ್ಯವಾಗಬೇಕು. ಮಾಡುವುದು ಆ ಸತ್ಯದ ಧರ್ಮವಾಗಬೇಕು. "ಸತ್ಯಂ ವದ ಧರ್ಮಂ ಚರ" ಇದೇ ಭಾರತ ಸಂಸ್ಕೃತಿಯ ಮೂಲಮಂತ್ರ. ಸುಶಬ್ದವು ಆನಂದವನ್ನುಂಟುಮಾಡಿದಂತೆ,

ಅಪಶಬ್ದವು . ದುಃಖವನ್ನುಂಟುಮಾಡುತ್ತದೆ. ಅಂದಮೇಲೆ ಶಬ್ದವು ಮನುಷ್ಯನಲ್ಲಿ ತತ್ಪರಿಣಾಮವನ್ನುಂಟುಮಾಡುವುದು ಸಿದ್ಧ. "ಭಂದ್ರಂ ಕರ್ಣೇಭಿಃ ಶೃಣುಯಾಮ ದೇವಾಃ" ಎಂದು ಹೇಳಿದ್ದೂ ಲೋಕ ಕ್ಷೇಮಕ್ಕಾಗಿಯೇ.

ಲೋಕದಲ್ಲೆಷ್ಟು ಮಂದಿ ಸಾಕ್ಷಿಗಾರರು ಸತ್ಯ ಹೇಳುವೆವೆಂದು ಸುಳ್ಳು ಹೇಳುವುದಿಲ್ಲ? ಸ್ನೇಹಿತರೆಷ್ಟು ಜನ ವಂಚಿಸುವುದಿಲ್ಲ? ಪ್ರೇಮಿಗಳೆಷ್ಟು ಮನುಷ್ಯರು ಘಾತಮಾಡುವುದಿಲ್ಲ? ನಂಬಿಗರೆಷ್ಟು ವ್ಯಕ್ತಿಗಳು ದ್ರೋಹಮಾಡುವುದಿಲ್ಲ? ಇವು ಆ ಸತ್ಯ, ಸ್ನೇಹ, ಪ್ರೇಮ ಪ್ರಾಮಾಣಿಕತೆ ಶಬ್ದಗಳ ಕೊಲೆಯಲ್ಲವೆ? ಹೀಗೆ ಎಲ್ಲೆಲ್ಲಿ ನೋಡಿದರೂ ಶಬ್ದಗಳ ಸರ್ವನಾಶವೇ. ಇದು ಕಡಿಮೆಯಾದರೆ ಮಾತ್ರ ದೇಶದಲ್ಲಿ ಸತ್ಯ, ಧರ್ಮ, ಶಾಂತಿಗಳು ನೆಲೆಸಾವು. "ಸತ್ಯಂ ವದ, ಧರ್ಮಂ ಚರ" ಎಂದ ಆಚಾರ್ಯವಾಣಿ ಸಫಲವಾದೀತು. ಆಗಲೇ ನಾವು ಧನ್ಯರು! ಸಂಸ್ಕೃತರು! ನಾಗರಿಕರು!

# ಅಮ್ಮಾಪ್ರೇ ಗೆದ್ರು

"ಸಿದ್ದ! ಸಿದ್ದ!"

"ಬಂದೆ ಸ್ವಾಮಿ!"

"ಸರಿ! ಎಲ್ಲಾ ವ್ಯವಸ್ಥೆಮಾಡಿದಿಯಷ್ಟೆ?"

"ಓ ಹೋ!... ಎಲ್ಲಾ ರಡಿ! ಜನರು ಮಾತ್ರ ಇನ್ನೂ ಬಂದಿಲ್ಲ"

"ಹಾಗಾದರೆ, ಸಭೆ ಹೇಗೆ ನಡೆಯೋದು?"

"ಕುರ್ಚಿ ಮೇಜೆಲ್ಲಾ ಹಾಕೀದೀಸಿ ಸ್ವಾಮಿ!"

"ಆಯಿತು! ಸರಿ! ಭಾಷಣ ಕೇಳೋದಕ್ಕೆ ಒಂದಿಬ್ಬರಾದರೂ ಬೇಡವೆ!"

"ಬೇಕೂಂತ್ಲೆ ಸ್ವಾಮಿ! ಎಲ್ಲಾರ ಮನೆಗೂ ಹೋಗಿ ನಾನೇ ಹೇಳಿದ್ದೆ, ಆದ್ರೂ—"

ಓ! ಅಗೊ! ಅಲ್ಲಿ ಯಾರೋ ಬರುವಹಾಗಿದೆ."

"ಓ! ಬನ್ನಿ! ಬನ್ನಿ! ಈಗ ಸಭೆ ಆರಂಭವಾಗುತ್ತೆ"

"ಇಗೋ ಈ ಕಡೆಯಿಂದ ಯಾರೋ ಹೋಗ್ತಾ ಇದ್ದಾರೆ. ಅವರನ್ನು ಕರೆ"

"ಬಂದ್ರು ಸ್ವಾಮಿ! ಇನ್ನು ಆರಂಭವಾಗಲಿ! ಆ ಮೇಲೆ—"

"ಹೌದು! ಹೌದು! ಆ ಮೇಲೆ, ಆ ಮಹಿಷಿ ಮಂಡಲದವರು ಬಂದರೆ ನಮ್ಮ ಪ್ರಚಾರ ಕಾರ್ಯ ನಡೆಯೋದಿಲ್ಲ. ಏನಿದ್ರೂ ಅವರು ಸೇರುವ ಮೊದಲೇನೇ ಮುಗಿಸಬೇಕು."

"ಅದೇ ಸ್ವಾಮಿ! ನಾನೂ ಹೇಳಬೇಕೂಂತಿದ್ದದ್ದು. ಬೇಗನೆ ನಿಮ್ಮ ಭಾಷಣ ಶುರುಮಾಡಿಬಿಡಿ."

"ಥಕ್! ಅದೇನೋ ಅಪಶಬ್ದ, ಭಾಷಾಣಾಂತ"

"ಅಲ್ಲ ಸ್ವಾಮಿ! ಆ ಉದ್ದಕ್ಕೆ ಮಾತಾಡಿದರೆ ಅದು ಭಾಷಾಣ ಅಲ್ವೆ?"

"ಉದ್ದ ಹೇಳಿದರೂ ಗಿಡ್ಡ ಹೇಳಿದರೂ ಅದು ಭಾಷಣವೆ"

"ಉದ್ದ ಹೇಳೋದಕ್ಕೆ ಹೆಸರೂ ಉದ್ದ ಇರ್ಲೀಂತ ಹೇಳ್ದೆ"

"ಏನು ನಿನಗೆ ಉದ್ದುದ್ದ ಭಾಷಣ ಆಗೋಲ್ಲಾಂತ ಕಾಣುತ್ತೆ"

"ಆಗೋದೇನು ಸ್ವಾಮಿ! ಕೆಲವು ಕಡೆ ಕೇಳಿಯಂತೂ ನಿದ್ದೆ ಬರಲಿಕ್ಕೆ ಹತ್ತಿತ್ತು. ಅವರ ಭಾಷಾಣ ಅವರಿಗೂ ಅರ್ಥಾಗೋಲ್ಲ ಕೇಳಿದವರಿಗಂತೂ ತಿಳಿಯೋಲ್ಲ."

"ಹೋಗಲಿ, ನನಗೀಗ ಸಮಯಾನೂ ಇಲ್ಲಾನ್ನು ಉದ್ದ ಭಾಷಣ ಮಾಡೋಕೆ. ಹಂ–"

"ಆಗಲಿ ಸ್ವಾಮಿ! ಆದಷ್ಟು ಬೇಗ ಮುಗಿಸಿ ಆಮೇಲೆ–"

"ಸರಿ! ಸರಿ! ಹಾಂ... ಶುರುಮಾಡ್ಲಿಯಾ"

"ಸ್ವಲ್ಪ ತಾಳಿ ಸ್ವಾಮಿ! ನಾನೀ ಸಭಿಕರಲ್ಲಿ "ತಮ್ಮ ಕಿವಿಗಳನ್ನು ಈಕಡೆ ಕೊಡೀಂತ" ಪ್ರಾರ್ಥಿಸುತ್ತೇನೆ"

"ಎಲಾ ಇವನ! ಅವರು ಕಿವಿ ನಿನ್ನ ಕೈಲಿ ಕೊಟ್ಟಮೇಲೆ ನನ್ನ ಭಾಷಣ ಕೇಳೋದೇನು ಬಂತು?"

"ಹಾಗಲ್ಲ ಸ್ವಾಮಿ! ಈಕಡೆ ಕಿವಿಕೊಟ್ಟು ಕೇಳೀಂತ–"

"ಓಹೊ! ಹಾಗೋ! ಆಗಲಿ ನಾನೇ ಕೇಳುತ್ತೇನೆ– ಹಾಂ– ಸರಿ."

ಮಾನ್ಯ ಮಹನೀಯರೆ! ಮತ್ತು ಛೆ! ಛೆ! ಇಲ್ಲ ಇಲ್ಲ. ಮಹನೀಯರು ಅಷ್ಟೆ! ಇದು ಕೇವಲ ಮಹನೀಯರಿಗೆ ಸಂಬಂಧಪಟ್ಟ ಸಭೆಯೆಂದು ಇನ್ನೊಮ್ಮೆ ಒತ್ತಿ ಹೇಳುತ್ತೇನೆ. ಮಹನೀಯರೆ!

ಇಂದಿನ ಸಭೆಯ ಉದ್ದೇಶವು ನಿಮಗೀಗಾಗಲೇ ತಿಳಿದಿರ ಬಹುದು. ಆದರೂ ಸಂಕ್ಷಿಪ್ತವಾಗಿ ತಿಳಿಸುತ್ತೇನೆ. ನೋಡಿ- ನಮ್ಮ ದೇಶದಲ್ಲಿ ಎಂದಿನಿಂದ ಪರಕೀಯ ಆಡಳಿತ ಆರಂಭ ವಾಯಿತೋ? ಅಂದಿನಿಂದ ನಮ್ಮ ಅರ್ಧಾಂಗಿಯರಾಗಿದ್ದ ಆರ್ಯಮಹಿಳೆಯರು, ಮಹಿಷಿಯರಾಗತೊಡಗಿದ್ದಾರೆ. ಪರರ ಆಚಾರ ವಿಚಾರಗಳನ್ನು ಕಂಡು, ಕೇಳಿ, ತಾವು ಹುಲಿಯ ಬಣ್ಣಕ್ಕೆ ನರಿ ಸುಟ್ಟುಕೊಂಡಂತೆ ಆಚರಿಸತೊಡಗಿದ್ದಾರೆ. ನಮ್ಮ ಧರ್ಮದ ಮೂಲೆ ಮೂಲೆ ಹುಡುಕಿದರೂ ಸ್ತ್ರೀಯರಿಗೆ ಅವ ಮಾನಕಾರಕ, ಕಷ್ಟದಾಯಕಗಳಾದ ಮಾತುಗಳಿಲ್ಲವಾದರೂ, ಸ್ವಾತಂತ್ರ್ಯವೆನ್ನುವ ಶಬ್ದಕ್ಕೆ ಸ್ವೇಚ್ಛಾಚಾರವೆಂಬ ಅರ್ಥಕೊಟ್ಟು, "ನಸ್ತ್ರೀ ಸ್ವಾತಂತ್ರ್ಯಮರ್ಹತಿ" ಎಂದ ಆ ಮನುವಿನ ಮಾತ ನ್ನೆತ್ತಿ ಇಡೀ ಹಿಂದೂಧರ್ಮವನ್ನೇ ಹಳಿಯುತ್ತಿದ್ದಾರೆ ಇಂದಿನ ಮಹಿಷಿಯರು. ಎಲ್ಲೆಲ್ಲಿಯೂ ಸ್ತ್ರೀಸ್ವಾತಂತ್ರ್ಯದ ಉರಿಯೆದ್ದು ಸತಿ ಪುತ್ರರು ಸುಡುತ್ತಿದ್ದಾರೆ. ಈ ಉರಿಗೆ ನಮ್ಮ ಸರಕಾರವೂ ಗಾಳಿ ಬೀಸುತ್ತಿದೆ. ನಾಳೆ ನಾವೆಲ್ಲರೂ ಕೈಕಟ್ಟಿ, ಬಾಯಿ ಮುಚ್ಚುವ ಸಂಭವವಿದೆ. ಗಂಡಸು ಅನ್ನಿಸಿಕೊಂಡ ನಾವು ಈ ಸಮಯದಲ್ಲಿ ಇದನ್ನು ಪ್ರತಿಭಟಿಸಿದರೆ ತಪ್ಪಾಗದು. ಅದಕ್ಕಾಗಿಯೇ ನಾವೀ ಸಭೆಯನ್ನು ಕರೆದದ್ದು ಎಂಬುದು ನಿಮ್ಮೆಲ್ಲರ ಜ್ಞಾಪಕದಲ್ಲಿರಲಿ.

ಮಹಾಜನರೇ, ನಾವು ನಮ್ಮ ಹೆಂಗಸರನ್ನು ಎಷ್ಟು ಗೌರವದಿಂದ ಕಾಣುತ್ತೇವೆಂಬುದಕ್ಕೆ ನಮ್ಮ ಹಿಂದಿನವರ ಮಾತುಗಳೇ ಸಾಕ್ಷಿ- "ತಾಯಿಯನ್ನು ದೇವರೆಂದು ತಿಳಿ" "ಎಲ್ಲಿ ಸ್ತ್ರೀಯರು ಆನಂದಪಡುತ್ತಾರೊ, ಅಲ್ಲಿ ದೇವತೆಗಳೆಲ್ಲರೂ ಸಂತುಷ್ಟರಾಗುತ್ತಾರೆ," ಪತಿವ್ರತೆಯರ ನಾಮ ಸ್ಮರಣೆಯಿಂದ

ಪಂಚ ಮಹಾಪಾತಕವೂ ನಾಶವಾಗುತ್ತದೆ" "ಬೆಳಗ್ಗೆದ್ದು ಸತಿಯನ್ನು ನೋಡು!" ತ್ರಿವರ್ಗಗಳಲ್ಲಿಯೂ ಅವಳನ್ನು ಮೀರಿ ನಡೆಯಬೇಡ" ಮುಂತಾದ ಸಾವಿರಾರು ಮಾತುಗಳಿವೆ. ಆದರೂ ನಾವವರನ್ನು ಪೂಜಿಸುವುದು ಸಾಲದಂತೆ, ಇದಕ್ಕೆ ನೀವೇನೆನ್ನುವಿರಿ. ನಾಳೆ ನೀವು ಬದುಕಿರುವಾಗ ನಿಮ್ಮ ಹೆಂಡಂದಿರು, ನೀವು ಅವರು ಹೇಳಿದಂತೆ ಲಾಗಹಾಕಲಿಲ್ಲ ವೆಂಬ ಕಾರಣಕ್ಕಾಗಿ ನಿಮ್ಮನ್ನು ವಿಚ್ಛೇದಿಸಿ, ಅನ್ಯರೊಡನೆ ಮೆರೆದಾಡಹೋದರೆ, ನೀವೇನು ಮಾಡುವಿರಿ! ಹೇಳಿ? ಜೀವನದ ಜೊತೆಗಾರ್ತಿಯೆಂದು ನಂಬಿದ್ದ ನಾವು, ಯಾವುದೋ ಅಲ್ಪ ಕಾರಣಕ್ಕಾಗಿ ಜಗಳಾಡಿ ಬಿಟ್ಟೋಡುವ ಹೆಂಡಂದಿರನ್ನು ನೋಡಿ ಸುಮ್ಮನಿರಲಾಗುವುದೆ? ಮನುಷ್ಯನಿಗೆ ಹುಟ್ಟು ಸಾವುಗಳಂತೆ, ನಿಜವಾದ ಮದುವೆಯೂ, ಒಂದೇ ಬಾರಿ. ಅಂಥಹ ಸ್ತ್ರೀಯು ಹೀಗೆ ನಮ್ಮ ಎದೆಮೇಲೆ ಕುಳಿತರೆ ನಾವೇನುಮಾಡಬೇಕು? ಇರಲಿ! –ನಾಳದು ೨೦ನೇ ತಾರೀಕು ಚುನಾವಣೆಯಾಗಲಿದೆ. ನಾನು ನಿಮ್ಮೆಲ್ಲರ ಪರವಾಗಿ ಈವೂರಿನ ಉಮೇದುವಾರನಾಗಿ ನಿಂತಿದ್ದೇನೆ. ನೀವೆಲ್ಲರೂ ನನಗೇ ಮತದಾನಮಾಡಬೇಕೆಂದು ಕೇಳಿಕೊಳ್ಳುವೆನು. ನಾನು ದೆಹಲಿಗೆ ಹೋಗಿ ನಮ್ಮ ಗಂಡಸುತನವನ್ನುಳಿಸಿಕೊಂಡು ಬರುವೆನೆಂದು ನಿಮ್ಮ ಮುಂದೆ ಪ್ರತಿಜ್ಞೆ ಮಾಡಿ ಹೇಳುತ್ತೇನೆ. ನಿಮ್ಮ ನಮ್ಮ ಗಂಡಸುತನವೆಲ್ಲವೂ ಒಂದೇ ಆದಕಾರಣ ಈ ವಿಷಯುಲ್ಲಿ ನಾನು ನಿಮಗೇನೂ ಲಂಚ ಕೊಡ ಬೇಕಾಗಿಲ್ಲ. ನಿಮ್ಮ ಬಲವಿದೆಯೆಂದೇ ತಿಳಿಯುತ್ತೇನೆ. ಇತಿ...

ಮ, ಮಾ, ಆ ಮಹಿಷಿಮಂಡಲದವರೂ ನಾಳದು ಚುನಾವಣೆಗೆ ಒಬ್ಬರನ್ನು ನಿಲ್ಲಿಸಿದ್ದಾರೆ, ಅವರೂ ನಿಮ್ಮ

ಓಟನ್ನು ಕೇಳಲು ಈಗಾಗಲೇ ಇಲ್ಲಿಗೇ ಬರಲಿದ್ದಾರೆ, ನೀವು ಅವರ ಕಣ್ಣು ಬಾಯಿ ಕಂಡು ಜಾರಿ ಬೀಳಬೇಡಿರಿ. ನಮ್ಮ, ಅಂದರೆ ನಿಮ್ಮ ಪರವಾಗಿ ನಿಂತಿರುವ ನನ್ನ ಪೆಟ್ಟಿಗೆಯ ಗುರುತು "ಮೀಸೆ" ಎಂಬುದನ್ನು ಸರಿಯಾಗಿ ನೆನಪಿಟ್ಟುಕೊಳ್ಳಿರಿ. ಎಲ್ಲಿಯಾದರೂ ಅಭ್ಯಾಸಬಲದಿಂದ "ಜಡೆ"ಯ ಗುರುತಿನ ಅವರ ಪೆಟ್ಟಿಗೆಯಲ್ಲಿ ಕೈ ಹಾಕಬೇಡಿ; ಎಚ್ಚರವಿರಲಿ. ಮತ್ತೆ—"

"ಸ್ವಾಮಿ! ಸ್ವಾಮಿ! ಅಲ್ಲಿ ಏನೋ ಒಳೆ ಶಬ್ದ ಕೇಳಿದಂತಾಯಿತು!''

"ಹಾಂ! ಹೌದಾ? ಸಾಕು! ಸಾಕು! ಬೇಗನೆ ಇಲ್ಲಿಂದ ಕಂಬಿಕಿತ್ತೋಣ, ಹಾಂ!— ನಾನು ಮುಂದೆ ಹೋಗುತ್ತೇನೆ. ನೀನು ಇವರಿಗೆಲ್ಲಾ ವಂದನಾರ್ಪಣೆ ಮಾಡಿ ಓಡಿ ಬಾ ತಿಳಿತೆ."

‡ ‡ ‡

"ರೀ! ರೀ!"

"ಲೇ! ಲೇ!"

"ಅಲ್ಲಾಂದ್ರೆ..."

''ಅಲ್ಲಾಂದ್ರೆ ಬಿಸ್ಮಲ್ಲಾ''

"ಹಾಂ! ತಡೀರಿ ಸಂಜೆ ಮನೆಗ್ಬನ್ನಿ! ಹುಟ್ಟುಹಬ್ಬ ಮಾಡಿ ಬಿಡ್ತೇನೆ"

"ನಾ ಬಂದ್ರಲ್ವೆ? ಓಟಾಗೋವರೀಗೂ ಸ್ವಾಮ್ಯೋರಲ್ಲೇ ಇರ್ತೇನೆ"

"ಆಮೇಲಾದ್ರೂ ಬರ್ತೀರೊ ಇಲ್ವೊ?"

"ಬರ್ತೇನೆ! ಸ್ವಾಮ್ಯೋರು ಗೆಲ್ತಾರೇ"

"ಅಮ್ಮಾವ್ರ ಮುಂದೆ ಅವ್ರೆಲ್ಲಿ ಗೆಲ್ತಾರೆ!"

"ಹಾಂ! ಹಾಂಗಂತೀಯಾ? ಅದೇಂಗೊತ್ತು?"

"ನಂಗೊತ್ತಿಲ್ವೆ? ಸ್ವಾಮ್ಯೋರ ಜರ್ಬು, ಅವ್ರಾಮ್ಮನ್ರ ಮುಂದೆ ಒಂದೂ ಬೇಳೆ ಬೇಯೊಲ್ಲ"

"ಹಾಂ! ನಿಜ್ವೇನೆ? ಹಾಂ! ಸರಿಯಾಗಿ ಹೇಳು! ಸತ್ಯ ಹೇಳು."

"ಸತ್ಯಾಂದ್ರೆ— ನಾ ಸುಳ್ಳು ಹೇಳ್ತೀನಾ?"

"ಹಾಗಾದರೆ, ಕೊನೆಗೂ ನಮ್ಮ ಗಂಡಸರ ಪಾರ್ಟೀನೇ ಸೋಲೋದೂನ್ನು"

"ಮತ್ತೆ? ನಮ್ಮುಂದೆ ನಿಮ್ಮ— ಅದೆಲ್ಲಾ ನಡೆಯೋಕಿಲ್ಲ. ಅಲ್ದೆ ಸರ್ಕಾರಾನೂ ನಮ್ಗೇ ಸಾಯಾ ಮಾಡ್ತಾ ಇದೆ?''

"ಲೇ... ಲೇ..."

''ಲೇನೂ ಇಲ್ಲ! ಲೀನೂ ಇಲ್ಲ! ಈಗ ನಾನು ಹೇಳಿದ ಹಾಗೆ ಕೇಳ್ತಿರೊ! ಇಲ್ಲವೊ?"

"ಹಾಂ! ಅಲ್ಲಾ ಹೀಗಂದ್ಮೇಲೇ... ಕೇಳ್ದೆ ಇದ್ರೆ—''

"ಹುಂ! ಹಾಗಾದ್ರೆ, ಈ ಕುರ್ಚಿ ಮೇಜುಗಳನ್ನು ಸರಿಯಾಗಿಡಿ. ಅಲ್ಲಿಂದ ಆ ಬೆಂಚುಗಳನ್ನು ಹೊತ್ತು ತಂದು ಇಲ್ಲಿ ಸಾಲಾಗಿಡಿ, ಹುಂ! ಈಗ ನಮ್ಮ ಸಭೆ ಸೇರಬೇಕಾಗಿದೆ. ಹುಂ! ಅವ್ರಾಮ್ಮನ್ರು ಈಗ ಬರ್ತಾರೆ!"

"ಅಲ್ಲೆ! ನಿಮ್ಮ ಸಭೆಗೆ ನಾನು ಬೆಂಚು ಹೊರೋದು ಸ್ವಾಮ್ಯೋರೀಗೆ—''

"ನಾಳೇದಿನ ಬದುಕಬೇಕಾದ್ರೆ ನಮ್ಮಿಂದ, ಸ್ವಾಮ್ಯೋರೂ ಇಲ್ಲ, ಗೀಮ್ಯೋರೂ ಇಲ್ಲ. ಬೇಗ! ಸರಿ ಇಡಿ. ಹುಂ''

"ಆಗಲಿ! ಆಗಲಿ! ಆದ್ರೆ— ನೀನು ಯಾವ ಗಂಡಸಿನ ಮುಂದೂ ಇದನ್ನು ಹೇಳ್ಬಾರ್ದು ಕಣೆ!''

"ಅಯ್ಯೊ! ನಿಮ್ಮ— ಹೇಳಿದ್ರೂ ಒಂದೇ ಹೇಳದಿದ್ರೂ

ಒಂದೇ. ನೀವೀ ಕೆಲ್ಸಮಾಡಿದ ಮೇಲೆ. ಅಗೊಳ್ಳಿ ಅವ್ಮಾವ್ರು ಬಂದ್ರು ಹುಂ ಬೇಗ''

''ಇದೇನೇ ಸಾತೂ! ಇನ್ನೂ ಸಭೆಯೇರ್ಪಾಡೊಂದೂ ಆಗಿಲ್ಲ?"

"ಅದಕ್ಕೇ ಇವ್ರನ್ನ ಹಿಡಿದು ನಿಲ್ಲಿಸಿದೆ. ಆಯಿತು ಬೇಗ ಮಾಡ್ತೀವಿ?"

''ಓಹೋ! ಇವನು? ಇಲ್ಲಿ? ಯಾಕೆ? ಎಲ್ಲಾ ನಮ್ಮ ಸಭೆ ಗುಟ್ಟನ್ನು ಹೊರಗೆ ಹಾಕ್ಯಾನು, ಬೇಗ ಒದ್ದು ಕಳ್ಸು ಆಚೇಗೆ, ಈ ಅರೆ ಗಂಡ್ಸನ್ನು"

"ಅಯ್ಯೋ! ನಿಮ್ಮ ಅವ್ವಾವ್ರ ಮುಂದೆ 'ನಾಯೇನೂ ಬಾಯಿ ಬಿಡೊಲ್ಲಾಂತ' ಅಡ್ಡ ಬೀಳಬಾರ್ದೆ! ಸುಮ್ಗೆ ದೆವ್ವದ ಹಾಗೆ ನಿಂತಿದ್ದೀರಲ್ಲಾ?''

''ಲೇ! ನೀ ಕಳೆಯೋದಲ್ದೇ ಅವ್ರ ಮುಂದೂ ನನ್ಮಾನ ಕಳೀತೀಯಲ್ಲೆ''

"ಏನಂತೆ? ಅವ ಬೊಗಳೋದು! ಒದ್ದೋಡ್ಸು ಇಲ್ಲಿಂದ''

"ಇಲ್ಲ ಅವ್ವಾವ್ರೆ! ಅವ್ರೆಲ್ಲೂ ಪಿಟ್ಟೋ ಅನ್ನದ ಹಾಗೆ ನಾನಿದ್ದೇನೆ."

"ಸರಿ! ಇನ್ನು ಆರಂಭ ಮಾಡೋಣ?''

"ಓಹೊ! ಸಭೆ ತುಂಬಿಹೋಗಿದೆ. ತಮ್ಮನ್ನೇ ಕಾಯ್ತಾ ಇದ್ದಾರೆ''

''ಹಾಂ! ಆಯಿತು— ಮಾನ್ಯ ಮಹಿಳೆಯರೆ! ವೀರ ಮಾತೆಯರೆ! ಇಂದಿನ ದಿನವೇ ಸುದಿನ! ಸಾವಿರಾರು ವರ್ಷ ಗಳಿಂದ ನಮ್ಮನ್ನು ಬಂಧಿತವಾಗಿರುವ ಚಿನ್ನದ ಸರಪಳಿಯು ಇಂದು ಸಡಿಲಾಗಿದೆ– ಯಾಕೆ? ಆಯಿತು. ಅದನ್ನು ಕೆಡವಿ

ಸ್ವತಂತ್ರರಾಗಿ ಬಾಳುವುದೇ ನಮ್ಮ ಕರ್ತವ್ಯವಾಗಿದೆ. ಮಾತೆಯರೆ! ಭಾರತಮಾತೆಯೊಡನೆಯೇ ನಮ್ಮ ಬಂಧವೋಚನೆಯೂ ಆಯಿತೆಂದು ತಿಳಿಯಿರಿ. ಇಂದು ನಾವು ಸ್ವತಂತ್ರರಾಗಿ ನಮ್ಮ ಪುತ್ರರನ್ನು ಭಾರತದ ವೀರ ಪುತ್ರರನ್ನಾಗಿ ಮಾಡಬೇಕು. ಭಾರತದ ಮಹಿಳೆಯರ ಮಹಿಮೆಯನ್ನು ಅಂದಿನಿಂದೀವರೆಗೂ ಜಗತ್ತೆಲ್ಲಾ ಕೊಂಡಾಡುವುದೆಂಬುದನ್ನು ಮರೆಯಬೇಡಿ. ಅಂತಹ ನಮ್ಮನ್ನು ಈ ಗಂಡಸು ಜಾತಿಯು (ಪಶುಗಳು) ತಮ್ಮ ಸ್ವಾರ್ಥಕ್ಕಾಗಿ ಭೋಗದ ಗೊಂಬೆಗಳನ್ನಾಗಿ ಮಾಡಿದ್ದಾರೆ. ನಮ್ಮ ಸಕಲ ಸ್ವಾತಂತ್ರ್ಯವನ್ನು ಭದ್ರಮುಷ್ಟಿಯಿಂದ ಹಿಡಿದಿದ್ದಾರೆ. ಆ ರಾಕ್ಷಸೀ ಕೃತ್ಯವನ್ನು ನಾವು ಎದುರಿಸಲೇಬೇಕು. ನಮ್ಮ ಶಕ್ತಿಯನ್ನು ತೋರಿಸಿ ಜಗತ್ಕಲ್ಯಾಣ ಮಾಡಬೇಕು. ಪ್ರಕೃತಿಯಲ್ಲಿ ಸ್ತ್ರೀಪುರುಷರಿಬ್ಬರೂ ಸಮಾನರು ಅಲ್ಲದೆ ಮೊದಲೆಂದರೂ ತಪ್ಪಾಗದು. ನೋಡಿ– ಪ್ರಕೃತಿ-ಪುರುಷ, ಲಕ್ಷ್ಮೀನಾರಾಯಣ, ಪಾರ್ವತೀ-ಪರಮೇಶ್ವರ, ಸೀತಾ-ರಾಮ, ರಾಧಾಕೃಷ್ಣ, ಹೀಗೆ ಎಲ್ಲಿ ಕಂಡರೂ ಸ್ತ್ರೀಯೇ ಮೊದಲು. "ಸ್ತ್ರೀಪುನ್ನಪುಂಸಕಂಜ್ಞೇಯಂ" "ಸ್ತ್ರೀಪುಂಸಾವಾತ್ಮಭಾಗೌತೇ" ಇಲ್ಲಿಯೂ ಸ್ತ್ರೀಯೇ ಮೊದಲು, ಇಂತಹ ಸ್ತ್ರೀಯನ್ನು ಪಾತಾಳಕ್ಕಿಳಿಸಿದ ಮಹಾಪರಾಧಕ್ಕೆ ಪುರುಷರ ಸ್ವಾರ್ಥವೇ ಮೂಲ. ರಾತ್ರಿ ಹಗಲು ದುಡಿದರೂ ಆವಳಿಗೆ ಅನ್ನ ಬಟ್ಟೆ ಕೊಡಲು ಹಿಂಜರಿವ ಪುರುಷನು ಎಷ್ಟು ನಿರ್ದಯಿ! ಸುಮಕೋಮಲೆಯಾದ ಬಾಲೆಯನ್ನು, ಜೀವನದ ಸುಖಸ್ವಪ್ನಗಳನ್ನು ಕಾಣುತ್ತಿರುವ ಕುಮಾರಿಯನ್ನು ತನ್ನ ಕಾಮಕ್ಕೆ ಬಲಿಗೊಳ್ಳುವ ಶ್ರೀಮಂತ ಮುದುಕ ಪುರುಷನಿಗೆ ದಯೆಯಿದೆಯೆ? ಬಾಲವಿಧವೆಯನ್ನು ಬೋಳಿಸಿ ನಿರೂಪಳನ್ನಾಗಿ ಮಾಡಿ ಸಮಾಜದಲ್ಲಿ ಮುಖವೆತ್ತದಂತೆ ಬಂಧಿಸಿ,

ಅಲ್ಲಿಯೇ ಕಣ್ಣು ಹಾಕುವ ಪುರುಷನು ಪುರುಷನೇ? ಮನೆಯ ಸತಿಯನ್ನು ಬಿಟ್ಟು, ಗತಿಯಿಲ್ಲದಬಲೆಯನ್ನು ಕೆಡಿಸಿ, ಮುಂದೆ ಸೂಳೆಯೆಂದು ಕಸಿದು ಹೀಯಾಳಿಸುವ ಪುರುಷ ಪೌರುಷವಂತನೆ? ತನ್ನಕ್ಕತಂಗಿಯರನ್ನು, ಏಕೆ ಸ್ವತಃ ಕೈಹಿಡಿದ ಹೆಂಡತಿಯನ್ನೇ ಸ್ವಾರ್ಥಕ್ಕೋಸ್ಕರ ಇತರರಿಗೆ ಬಲಿಕೊಡುವ ಗಂಡಸು ಗಂಡಸೆ? ಇಂತಹ ಅಧಮರನ್ನು ನಾವು ಏಕೆ ಎದುರಿಸಬಾರದು? ತಾನು ಕಂಡ ಕಂಡ ಹೆಂಗಸರ ಬೆನ್ನುಹಿಡಿದು ಅಲೆದರೂ, ತನ್ನವಳು ಮಾತ್ರ ಸ್ವಾಭಾವಿಕವಾಗಿಯಾದರೂ, ಅನ್ಯಪುರುಷನೊಡನೆ ನಕ್ಕು ನುಡಿಯಬಾರದು! ಎಂತಹ ಸ್ವಾರ್ಥವೀ ನರಪಶುವಿನದು? ಸ್ತ್ರೀಯು ಪುರುಷನಿಗಿಂತ ಯಾವ ಭಾಗದಲ್ಲಿ ಕಡಿಮೆ? ತಾಯಿಯ ಕರುಳು, ಸತಿಯ ಪ್ರೇಮ, ಮಗುವನ್ನು ಸಾಕುವ ತಾಳ್ಮೆ, ಯಾವ ಪುರುಷನಿಗಿದೆ? ಇಷ್ಟಾದರೂ ಅವಳು ಅವನ ದಾಸಿ! ಚರಣ ಸೇವಕಿ! ಸುಖದ ಯಂತ್ರ!— ಇರಲಿ; ನಾನಿದನ್ನೆಲ್ಲಾ ವಿವರಿಸುವುದಿಲ್ಲ. ಇಂದು ನಮ್ಮ ಸರಕಾರವು ಪತಿತೋದ್ಧಾರದ ಕೆಲಸದಲ್ಲಿ ತೊಡಗಿದೆ. ನಮ್ಮ ಸರ್ವ ಸ್ವಾತಂತ್ರ್ಯವೂ ಸಿಕ್ಕುವ ಕಾಲಬಂದಿದೆ. ಅದಕ್ಕಾಗಿ ವಿಧಾನ ಸಭೆಯಲ್ಲಿ ಚರ್ಚೆ ನಡೆಯುತ್ತಿದೆ. ದೇಶದಲ್ಲೆಲ್ಲ ಆರಿಸಿದ ಪ್ರತಿನಿಧಿಗಳು ಹೋಗಲಿದ್ದಾರೆ. ಈ ಊರಿನಿಂದ ನಾನು ನಿಮ್ಮೆಲ್ಲರ ಪರವಾಗಿ ಉಮೇದುವಾರಳಾಗಿ ನಿಂತಿದ್ದೇನೆ. ನೀವೆಲ್ಲರೂ ನಿಮ್ಮ ಅಮೂಲ್ಯವಾದ ಮತವನ್ನು ನನಗೆ ಕೊಡಬೇಕು. ಆ ಗಂಡಸರ ಯಾವ ಪುಸಲಾಯಿಕೆಗೂ ಒಳಗಾಗಬಾರದು. ನಾನು ದೆಹಲಿಗೆ ಹೋಗಿ ನಮ್ಮ ಸರ್ವ ಹಕ್ಕು ಸ್ವಾತಂತ್ರ್ಯಗಳನ್ನು ಸಾಧಿಸಿಕೊಂಡು ಬರುತ್ತೇನೆ. ನಾಳಿನ ಚುನಾವಣೆಯಲ್ಲಿ ನೀವು ಎಚ್ಚರಿಕೆಯಿಂದ ವರ್ತಿಸಬೇಕು. ನಮ್ಮ ಓಟಿನ

ಪೆಟ್ಟಿಗೆಯ ಗುರುತು "ಜಡೆ'' ಎಂಬುದನ್ನು ಮರೆಯಬಾರದು. ಅದಕ್ಕೆ ತಮ್ಮ ಓಟಗಳನ್ನು ಹಾಕಿರಿ. ಆ ಮುಖಚುಚ್ಚುವ ಮೀಸೆಯ ಪೆಟ್ಟಿಗೆಯನ್ನು ಕಾಲಿಂದ ಒದ್ದುಬಿಡಿರಿ.

§ § §

"ಸಿದ್ದ! ಸಿದ್ದ!"

"ಬಂದೆ ಸ್ವಾಮಿ"

"ಎಲ್ಹೋಗಿದ್ಯೋ ಇಷ್ಹೊತ್ತು?"

"ಅಲ್ಲೆ ಬರುತ್ತಾ ಇದ್ದೆ. ಆ ಸಭೆ–"

"ಹಾ! ಏನು ಆ ಸಭೆಗೋಗಿದ್ಯಾ? ಷಂಡ!"

"ಇಲ್ಲ ಸ್ವಾಮಿ! ಏನಾಗುತ್ತೇಂತ ನೋಡೋಣ'' ಎಂದು ಹಿಂದೆ—

"ಹಿಂದೇಂದ್ರೆ? ಎದುರುಗಡೆಗೋ? ಲಜ್ಜೆ ಆಗ್ಲಿಲ್ವೇನೊ?"

"ಇಲ್ಲ ಸ್ವಾಮಿ! ಹಿಂಬದೀಲಿ! ಅಧ್ಯಕ್ಷ ಮಂಟಪದ ಹಿಂದೆ"

"ಮಂಟಪ! ನಾಚಿಕೆ ಆಗೊಲ್ವೇನೊ ಹೇಳ್ಳಿಕ್ಕೆ? ಜಗಲೀನ್ನು''

"ಓ! ಹೌದು ಅಲ್ಲೇ ಸ್ವಾಮಿ"

"ಸರಿ; ಅಲ್ಲಿ ಏನಾಯ್ತು?''

"ಅಹಾ! ಹಾ! ಹಾ! ಒಂದು ಅಮ್ಮಾವ್ರು ಭಾಷಣ ಮಾಡಿದ್ರೂ ಸ್ವಾಮಿ! ಏನು ಧ್ವನಿ! ಏನು ಠೀವಿ! ಅದೇನು ಸ್ಟೈಲಿ!''

"ಹೌದಾಽಽ? ಇಲ್ಲಿ ಮನೇಲಿ ಅವಳ ಗಂಟ್ಲು ಒಳಗೆ ಹೋಗುತ್ತೆ, ಅಲ್ಲಿ ಅಷ್ಟು ಆಡಿಬಿಟ್ಳಾಽಽ?''

"ಏನು ಸ್ವಾಮಿ! ಹಾಗಂದ್ರೆ? ಅವ್ರು ಭಾಷಾಣ ಕೇಳಿ ಎಲ್ಲರೂ ಜೈ ಜೈ ಅಂತ ಚಪ್ಪಾಳೆ ತಟ್ಟಿದ್ದೇ ತಟ್ಟಿದ್ದು. ಮರ್ಹೋಗಿ

ನಾನು—''

"ಥತ್! ಲಜ್ಜೆ ಕೆಟ್ಟೋನೆ"

"ಅಲ್ಲ ಸ್ವಾಮಿ! ಹಾಗಿತ್ತು ಭಾಷಾಣ, ಆದ್ರೂ ನಾನು ಚಪ್ಪಾಳೆ ಬಡ್ದಿದ್ದನ್ನು ಯಾರೂ ನೋಡ್ಲಿಲ್ಲಾನ್ನಿ!"

"ಆಯಿತು ನಮಗೆಲ್ಲಾ ಪಾಷಾಣ, ಅದಿರ್ಲಿ, ಸಿದ್ದ! ನಿನಗೆ ಆ ಸಭೆ ಗಿಭೆ ಎಲ್ಲಾ ಕಂಡು ಹೇಗೆ ನಮ್ಮ ಜಯ— ಅನ್ನಿಸುತ್ತೆ?''

"ಬಿಡಿ ಸ್ವಾಮಿ! ನಾವು ಎಷ್ಟು ಹೋರಾಡಿದ್ರೂ, ಸಾಳ್ದು ಓಟು ಆಗೋದು ಅವರಿಗೇನೇ. ಆದ್ರಿಂದ ನೀವು ಅರ್ಜೀನ ಹಿಂದೆ—''

"ಅದೂ ಹೌದು! ಬೇರೊಬ್ಬಳು ನನಗೆ ಎದುರಾಗಿ ನಿಂತಿದ್ದರೆ ಆ ಮಾತು ಬೇರೆ. ಅದೆ... ಇವಳೇ ನಿಂತಾಗ–''

"ಅದನ್ನ ನಾ ಹಿಂದೇನೇ ಹೇಳ್ಳಿಲ್ವೆ? ನಮ್ಮ ಹೆಂಡಂದಿರನ್ನು ಮಾರೋಕಾಗೋಲ್ಲಾಂತ''

"ನೋಡು! ಸಿದ್ದ! ಅದು ನಂಗೂ ಗೊತ್ತು! ಅವಳನ್ನು ಮಾರೋಕಾಗೋಲ್ಲಾಂತ. ನಾನೂ ಈ ಹತ್ತು ವರ್ಷ ಅವಳೊಡನೆ ಹೋರಾಡ್ಲಿಲ್ವೆ? ಎಲ್ಲಾ ಅನುಭವವಾಗಿದೆ. ಆದ್ರೂ ಈಗ ನಿಂತಾಗಿದೆ. ಹೇಗಾದರೂ ಆಗಲಿ. ಅವಳು ಗೆದ್ದರೂ ನಂಗೇ ಅಲ್ವೆ ಬಹುಮಾನ! ಆದ್ರೂ ಕೊನೇ ತನಕ ಹೋರಾಡಿದಾಂತ ಆಗಬೇಕು.''

"ಸರಿ! ಸರಿ! ಆಗಲಿ! ನಾನು– ಆ ಶಾಲು ಪಂಚೆಗಳನ್ನು ಆ ಹೊಲೇರ ಕೇರಿಲಿ ಹಂಚಿ ಬರುತ್ತೇನೆ.''

೦ ೦ ೦

"ಏನೇ ಅದೂ ತಲೇಲಿ ಗಂಟು?"

"ನಿಮ್ಮ ಹೆಗಲ ಮೇಲಿನದು ಮೂಟೆ?"

"ನಿಂದು ಹೇಳೇ ಸಾ ಆ ಮೇಲೆ ಹೇಳ್ತೇನೆ"

"ನೀವು ಮೊದ್ಲು ಹೇಳೀಂದ್ರೆ.."

"ನೋಡು! ಆ ಹೊಲೇರಿಗೆಲ್ಲಾ ಈ ಶಾಲು ಪಂಚೆ ಕೊಟ್ಟು ಓಟು ಕೊಡ್ಬೇಕೂಂತ ಹೇಳಿ ಬಾಂದ್ರು ಸ್ವಾಮ್ಯೋರು"

"ಓ! ಹೋ! ನಂದೂ ಹಾಂಗೇ ಆ ಹೊಲತಿಯರಿಗೆ ಈ ಸೀರೆ ಕುಪ್ಪಸಗಳನ್ನು ಕೊಟ್ಟು ಓಟು ಕೇಳೂಂದ್ರು ಅಮ್ಮಾವ್ರು"

"ಹಂಗಾರೆ ಇಬ್ರೂ ಲಂಚ ಕೊಟ್ಟು ಓಟು ಕೇಳೊ ಕೆಲ್ಸಕ್ಕೆ ಹೊರಟೇ..."

"ಅವರ ಉಪ್ಪು ತಿಂದ ಮೇಲೆ ಏನಾದ್ರೂ ಮಾಡ್ಲೇ ಬೇಕು"

"ಅದೇನೇ ಹಾಗಂತಿ, ಜಯಾ ನಿಂಗೆ ಸಮಾಧಾನವಿಲ್ವೆ?"

"ಏನೂ ಇಲ್ಲ. ಈ ಸೀರೆ ರವಕೆಗಳನ್ನು ಆ ಹೊಲೆ ಮುಂಡೆಗಳಿಗೆ ಬಿಟ್ಟಿ ಕೊಡ್ತಾರಲ್ಲ! ಎಷ್ಟು ಒಳ್ಳೆ ಸೀರೆಗಳೂಂ ತಿರಾ?"

"ಹಾಂ! ಹೌದು! ಏನು ಮಾಡೋದು. ನಂಗೂ ಹಂಗೇ ಅನ್ನಿಸುತ್ತೆ. ಇದರಲ್ಲಿರೋ ಶಾಲು ಪಂಚೆಗಳನ್ನು ಕೈಯೇರಿ ಕೋಡೊಕೆ ಮನಸ್ಸೇ ಬರೋಲ್ಲ, ಏನಿಲ್ಲಾಂದ್ರು ಇವು ನಂಗೊ ಬ್ಬನಿಗೇ ಹತ್ತು ವರ್ಷಕ್ಕೆ ಸಾಕು."

"ನೀವೂ ಹಿಂಗಂತೀರಾ? ನನಗೂ ಈ ಬಟ್ಟೆಗಳು ಹತ್ತು ವರ್ಷಕ್ಕೆ ಸಾಕು. ಆದರೆ— ಉಪಾಯವಿಲ್ಲಾನ್ನಿ"

"ಯಾಕಿಲ್ಲ? ನಾವಿಬ್ರೂ ಒಂದಾಂದ್ರೆ ಉಪಾಯವಿದೆ."

"ಅದೇನು ಹೇಳಿ ನೋಡೋಣ"

"ನೋಡು ಸಾತು! ನಾವು ಒಂದು ಕೆಲಸ ಮಾಡೋಣ.

ಯಾರು ಗೆಲ್ಲೀ ಸೋಲ್ಲಿ ನಾವಂತೂ ಕೂಲಿ ಮಾಡ್ಲೇಬೇಕು, ಏನಾದ್ರೂ ಆಗ್ಲಿ. ಈ ಬಟ್ಟೆಗಳನ್ನು ನಾವೇ ಇಟ್ಕೊಳ್ಳೋಣ. ಇನ್ನು ಹತ್ತು ವರ್ಷ ಇಬ್ಬರೀಗೂ ಬಟ್ಟೇಚಿಂತಿಲ್ಲ."

"ಆದ್ರೆ- ಅವರು ಸುಮ್ಮನಿರುತ್ತಾರೆಯೆ?"

"ನಾವೀವೂರು ಬಿಟ್ಟೇ ಹೋಗೋಣ"

"ಅದು ಮೋಸಾಗೋದಿಲ್ವೆ?"

"ಮತ್ತೆ ಅವರೀ ಲಂಚಕೊಟ್ಟು ಓಟು ಕೊಳ್ಳೋದು ಮೋಸಲ್ವೆ! ಮೋಸಕ್ಕೆ. . . ."

"ಹಾಗಾದ್ರೆ- ಇದು ನಿಶ್ಚಯಾಂತೀರಾ?"

"ನಿಶ್ಚಯಾನೇ, ಈವೊತ್ತು ರಾತ್ರೀನೇ ಹೊರಡೋಣ"

† † † †

"ಅಲ್ಲ! ಇದೇನೂಂದ್ರೆ, ಈವೊತ್ತು ಇಷ್ಟು ಹೊತ್ತು"

"ದಾರೀಲಿ ಬರೋವಾಗ ಆ ಕಿಟ್ಟಯ್ಯ ಸಿಕ್ಕಿಬಿಡೋದೇ"

"ಯಾರು? ಸ್ವಾಮ್ಯೋರ ಭಾವನಂಟನೆ?"

"ಹೌದು! ಓಟಿನ ಸಮಾಚಾರವೆಲ್ಲಾ ಹೇಳ್ದ"

"ಏನಾಯ್ತುಂದ್ರೆ, ಬೇಗ ಹೇಳಿ"

"ಆಗೋದೇನು! ಅಮ್ಮಾವ್ರೇ ಗೆದ್ರಂತೆ, ಒಂದೇ ಒಂದು ಓಟು ಜಾಸ್ತಿ"

"ಹಾಂ! ಹಾಗಂದ್ರೆ?"

"ಸ್ವಾಮ್ಯೋರಿಗೆ 590, ಅಮ್ಮಾವ್ರಿಗೆ 591 ಅಷ್ಟೆ!"

"ಒಂದೇ ಓಟಿನಿಂದ ಜಯ!"

"ಅದೂ ಹೇಗಂತೀಯಾ?"

"ಅಂದ್ರೆ-"

"ಸ್ವಾಮ್ಯೋರ ಓಟಿನ ಚೀಟು ಅಮ್ಮಾವ್ರ ಪೆಟ್ಟಿಗೇಲಿ

ಇತ್ತಂತೆ"

''ಹಾಂ! ಸುಳ್ಳು! ಸುಳ್ಳು''

"ಸುಳ್ಳೇನು! ಅಮ್ಮಾವ್ರ ಪೆಟ್ಟಿಗೇಲಿ ಗಂಡಸರ ಓಟಿನ ಚೀಟು ಒಂದೇ ಒಂದಂತೆ, ಅಂದಾಗ, ಅಮ್ಮಾವ್ರಿಗೆ ಯಾವ್ನು ಓಟು ಹಾಕುತ್ತಾನೆ ನೀನೇ ಹೇಳು.''

''ಸ್ವಾಮ್ಯೋರೇ ಓಟು ಹಾಕಿದ್ರಾ ಅಮ್ಮಾವ್ರಿಗೆ?"

"ಹಾಕದೇನ್ಮಾಡುತ್ತಾರೆ ಪಾಪ! ಹೆಂಡ್ತಿ ಜೊತೇಲಿ ಬಾಳ್ವೆ ಬೇಡ್ವೆ?''

"ಅಂತೂ ಅಮ್ಮಾವ್ರೇ ಗೆದ್ರೂನ್ನಿ''

''ಗೆದ್ದೂ ಆಯಿತು, ದೆಹಲೀಗೋಗಿ ಗೆದ್ದು ಬಂದೂ ಆಯಿತು"

"ಹೆಂಗಸ್ರ ಕಾನೂನು ಸರ್ಕಾರದಲ್ಲೂ ಪಾಸಾಯಿತೆ?"

"ಎಲ್ಲಾ ಆಯಿತು. ಇನ್ನು ಮುಂದೆ 'ಗಂಡ ಹೆಂಡ್ತಿ' ಹೋಗಿ, ಹೆಂಡ್ತಿ ಗಂಡ ಅಂತ ಡಂಗುರ ಹೊಡೀಬೇಕು''

''ಸದ್ಯ! ಎಷ್ಟೋ ಹೆಂಗಸರು ಬಚಾವಾದ್ರೂನ್ನಿ"

"ಹಾಗೇನೇ ಗಂಡಸರೂ ಬಚಾವಾದ್ರು"

"ಅದ್ಹೇಗೆ?"

"ತಮ್ಮ ಗಂಡಸ್ತನಾನ್ನೊ ಪೀಡೆ ಕಳ್ಕೊಂಡದ್ದರಿಂದ"

''ಅಂದ್ರೆ?''

"ಅಂದ್ರೇನಿಲ್ಲ. ಇನ್ನು ಮುಂದೆ ಏನಿದ್ರೂ ನೀವೇ, ನಾವು ಒಳಗಿದ್ದು ಹಾಯಾಗಿ ತಿಂದು ತೇಗಿದ್ರೆ ತೀರಿತು"

''ಏನಾದ್ರೂ ಹೆಂಗಸು ಹೆಂಗಸೇನ್ನಿ. ಅವಳು ಹೊರ ಗೋಗಿ ಏನು ಮಾಡ್ತಾಳೆ ಪಾಪ!"

''ಏನು? ಹೆಂಗಸೂಂದ್ರೆ ಹೆಂಗಸೇಂತೀಯಾ ನೀನೂ''

“ಅಲ್ದೆ ಇನ್ನೇನು? ಯಾವ ಯುಗಕ್ಕೂ ಹೆಂಗಸೊಂದ್ರೆ ಹೆಂಗಸೇ. ಕಾನೂನು ಆಗುತ್ತೆ ಹೋಗುತ್ತೆ”

“ಹಾಗೇನಿಲ್ಲ, ಒಂದು ಕಾಲಕ್ಕೆ ಅಡೀಲಿದ್ದದ್ದು ಇನ್ನೊಂದು ಕಾಲಕ್ಕೆ ಮೇಲೇಳಲೇಬೇಕು.”

“ನಾನೊಪ್ಪೊಲ್ಲ”

“ಸರಿ ಬಿಡು, ಹಾಗಾದ್ರೆ ನನ್ನ ಗಂಡಸುತನ ಉಳಿತು”

“ಕಟ್ಟಿಕೊಂಡ ಮೇಲೆ ಬಿಡೋಕಾಗುತ್ತ್ಯೇ”

“ಲೇ— ಹಾಗಿದ್ರೆ— ಇಲ್ಲಿ ಬಾ!”

“ಥೂ! ನೋಡಿ! ಅಲ್ಲಿ ಯಾರೋ ಬಂದ್ರು ಬಿಡೀಂದ್ರೆ ನಂಗೆ ಲಜ್ಜೆ”

“ನಿಂಗಿನ್ನೂ ಲಜ್ಜೆಯಿದೆಯಾ? ಹಾಗಾದ್ರೆ—”

# ಅಜ್ಜಿ— ಉವಾಚ?

"ಅಳಳುತ್ತಾ ಹುಟ್ಟು. ನಗುನಗುತ್ತಾ ಸಾವು" ಇದು ನಮ್ಮಜ್ಜಿಯ ಬೊಕ್ಕು ಬಾಯೊಳಗಿಂದ ಹೊರಟ ಮಾತು. ಇದನ್ನು ಮಾತು ಎನ್ನುವುದಕ್ಕಿಂತ ಧ್ವನಿಯೆಂದರೆ ಸರಿ ಹೋದೀತು. ಕಾರಣ ಆ ಮುದಿ ಬಾಯಿಂದ ಸರಿಯಾದ ಮಾತೇ ಹೊರಡುತ್ತಿರಲಿಲ್ಲ. ಆಗಾಗ ಹೊರಟ ಆ ಧ್ವನಿಗಳಿಗೆ ರೂಪ, ಅರ್ಥಗಳನ್ನು ನಾವು ಟೀಕಾಕಾರರಂತೆ ಕಲ್ಪಿಸಿ, ಹೇಳ ಬೇಕು. ಹಿಂದೆ ಈಶ್ವರನ ತಾಂಡವ ನೃತ್ಯ ಕಾಲದಲ್ಲಿ ಡಮರು ವಿಂದ ಹೊರಟ ಹದಿನಾಲ್ಕು ಧ್ವನಿಗಳಿಗೆ ಅರ್ಥ ಕಲ್ಪಿಸಿ, ಪಾಣಿ ನಿಯು ಅವುಗಳನ್ನು ವ್ಯಾಕರಣಶಾಸ್ತ್ರದ ಮೂಲ ಸೂತ್ರಗಳ ನ್ನಾಗಿ ಮಾಡಿದನಂತೆ. ಹಾಗೆ ನಮ್ಮಜ್ಜಿ ಮಟ್ಟಿಗೆ ನಾವೇ ಪಾಣಿನಿಗಳು. ಇರಲಿ.—

"ಅಜ್ಜಿ ಸಾಕಿದ ಮಗು ಬೊಜ್ಜ ತಿನ್ನಲು ಆಗದು" ಎಂದು ಒಂದು ಗಾದೆ ಇದೆ. ಆದರೆ ನಮ್ಮಜ್ಜ ಸಾಕಿದ ನಾವೆಲ್ಲರೂ, ಮಹಾ ಮಹಾ ಶೂರ-ವೀರ-ಧೀರ-ಕಾರರಾಗಿ, ಅಷ್ಟೇ ಅಲ್ಲ, ಅತಿರಥ, ಮಹಾರಥ, ಮುಕ್ಕಾಲು, ಅರ್ಧ, ಕಾಲು ರಥರಾಗಿ, ಎಲ್ಲೂ ನಡೆಯದಿದ್ದರೆ ಕೊನೆಗೆ ಹೆಂಡತಿ ಮುಂದೆಯಾದರೂ, ಮೆರೆಯುತ್ತೇವೆ. ಇದೆಲ್ಲ ಆ ನಮ್ಮಜ್ಜಿಯ ಉಪದೇಶಾಮೃತದ– ಈಗಿನ ಶೈಲಿಯಲ್ಲಿ ಹೇಳುವುದಾದರೆ– ಕಾಫಿಯ ಮಹಿಮೆ ಅಥವಾ "ಸ್ಪಿರಿಟ್." ಅವಳ ಬಾಯಿಂದ ಹೊರಟ ಒಂದೊಂದು ಮಾತೂ ಕೋಹಿನೂರುಗಳಂತಹ ರತ್ನಗಳೇ ಆಗಿದ್ದುವು. ಸದ್ಯ ನಮ್ಮ ವಂಶದ ಭಾಗ್ಯದಿಂದ ವಿದೇಶಿಯರಾರೂ ಅವುಗಳನ್ನು

ಯ್ಯಲಿಲ್ಲ. ನಾನು ಹೀಗನ್ನುವಾಗ ನಿಮಗೆ ನಂಬುಗೆ ಬರಲಾರ ದಲ್ಲವೆ? ಹಾಗಿದ್ದರೆ ನೋಡಿ. ಆ ಅಜ್ಜಿಯ ಮಾತನ್ನು ವಿವರಿಸಿ ಅದರ ಸತ್ಯಾಂಶವನ್ನು ಕತ್ತಲೆ ಕೋಣೆಯಿಂದ ಬೆಳಕಿನ ಚಾವ ಡಿಗೆ ಬಂದ ಕರಿ ಹುಡುಗಿಯಂತೆ ನಿಮ್ಮ ಮುಂದಿಡುತ್ತೇನೆ.

ಈಗ ನಾವು ವಾಸವಾಗಿರುವ ಭೂಮಿಯನ್ನು 'ಕರ್ಮ ಭೂಮಿ' ಎನ್ನುತ್ತಾರೆ. ಹಿಂದಿನ ಜನ್ಮದ ಕರ್ಮಶೇಷದಿಂದ ನಾವಿಲ್ಲಿ ಹುಟ್ಟುವುದು. ಇದಕ್ಕೆ 'ಕ್ಷೀಣೇ ಪುಣ್ಯೇ ಮರ್ತ್ಯ ಲೋಕಂ ವ್ರಜಂತಿ' ಎಂಬ ಗೀತಾ ವಾಕ್ಯವನ್ನು ಒಂದು ಆಧಾರವನ್ನಾಗಿ ಇಟ್ಟುಕೊಳ್ಳಬಹುದು. ಪುಣ್ಯ ಹೆಚ್ಚಾದರೆ ಕೆಳಗೆ ಬರುವುದು. ಇಲ್ಲಿ ಕರ್ಮಶೇಷವೆಂದರೆ ಪಾಪಶೇಷ. ಹಾಗೇನೇ ಇನ್ನೊಂದು ರೀತಿಯಲ್ಲಿ ನೋಡಿದರೆ ಪರೀಕ್ಷೆಯಲ್ಲಿ ನಾಪಾಸಾದ ಹುಡುಗನು ಮತ್ತೆ ಮತ್ತೆ ಅದೇ ತರಗತಿಯಲ್ಲಿರು ವಂತೆ ನಾವು ಇಲ್ಲಿ ಹುಟ್ಟುವುದು. ಸಾವು ಎಂದರೆ ಒಂದು ಪರೀಕ್ಷೆಯಂತೆ. ಒಳ್ಳೇ ರೀತಿಯಲ್ಲಿ ಬರೆದು ಹೆಚ್ಚು ಅಂಕ ಗಳನ್ನು ಪಡೆದರೆ ಮೇಲಿನ ತರಗತಿಗೆ ಹೋಗುತ್ತಾನೆ. ಹಾಗೆ ನಾವು ಸಾಯುವಾಗ ನಗಬೇಕು. ಒಳ್ಳೊಳ್ಳೆ ಭಾವನೆಗಳನ್ನು ಇಟ್ಟುಕೊಳ್ಳಬೇಕು. ಅಲ್ಲದೆ ಇದೇ ಚಂಡಿ ಹೆಂಡತಿ, ಪೋಲಿ ಮಗ, ಸೋರುವ ಬಾಡಿಗೆ ಮನೆ, ಲಂಚದುದ್ಯೋಗ ಮೊದಲಾ ದ್ದನ್ನೇ ಬಯಸಿದರೆ, ಪುನಃ ಅವನ್ನೇ ಅನುಭವಿಸಲು ಇಲ್ಲೇ ಹುಟ್ಟುತ್ತೇವೆ. ಪ್ರಾಣೋತ್ಕ್ರಮಣ ಕಾಲದಲ್ಲಿ ಅಜಾಮಿಳ ನೆಂಬ ಮಾದಿಗರವನು "ನಾರ್ಣಾ" ಎಂದು ಮಗನನ್ನು ಕರೆದ ಮಾತ್ರಕ್ಕೇನೇ ಮೋಕ್ಷ ಪಡೆಯಲಿಲ್ಲವೆ? ಹಾಗೆ ಅಪ್ಪಿತಪ್ಪಿ ಯಾದರೂ ನಮ್ಮ ತ್ರಿಕರಣಗಳಿಂದ ಒಳ್ಳೇ ವಿಷಯ ಹೊರಡ ಬೇಕು.

ಅದನ್ನೇ ನಮ್ಮಜ್ಜಿ ಹೇಳಿದ್ದು. ಸಾಯುವಾಗ ನಗಬೇಕು ಎಂಬ ಒಂದೇ ಮಾತಿನಿಂದ ಮತ್ತು ಈ ಹೋಟೇಲು ತಿಂಡಿಯಂತಿರುವ ಸಂಸಾರವನ್ನು ಅತಿಯಾಗಿ ಪ್ರೀತಿಸದೆ, ಕೊನೆಗೆ ಏನೂ ಪ್ರೀತಿಸದೆ ಮೋಕ್ಷ ಪಡೆಯಬೇಕು. ಈಗ ನೀವು ಕೇಳಬಹುದು– ವೇದನೆಗಳಲ್ಲಿ ಮರಣ ವೇದನೆ ದೊಡ್ಡದು. ಅಂತಹ ಸಮಯದಲ್ಲಿ ನಗುವುದು ಹೇಗೆ? ಎಂದು. ಅದಕ್ಕೆ ನಾನು ಹೇಳುವುದಿಷ್ಟೆ, ಅಭ್ಯಾಸಕ್ಕೆ ಮೀರಿದ ವಿಷಯವೇ ಇಲ್ಲ. ಇದಕ್ಕೂ ಅಭ್ಯಾಸ ಮಾಡಬೇಕು. ಮೊದಲಿಂದಲೂ ಕಷ್ಟ ನೋವುಗಳಲ್ಲಿ ನಗುತ್ತಾ ಬರಬೇಕು. ಎಂತಹ ಕಠಿಣ ಪ್ರಸಂಗದಲ್ಲಿಯೂ ನಗುತ್ತಿದ್ದರೆ, ಆದೇ ಅಭ್ಯಾಸಬಲದಿಂದ ಸಾಯುವಾಗಲೂ ನಗುಬಂದು ಆ ಆನಂದಮೂರ್ತಿಯ ಧ್ಯಾನಬರುತ್ತದೆ.

ಈಗ ನಿಮಗೆ ಇಲ್ಲಿಯೂ ಸಂಶಯ ಬರಬಹುದು– ಅಳುವ ಸಂದರ್ಭದಲ್ಲಿ ನಗುವುದು ಹೇಗೆ? ಎಂದು. ಅದಕ್ಕೆ ಒಂದೇ ದೃಷ್ಟಾಂತಕೊಡುತ್ತೇನೆ:– ನೀವು ಶೃಂಗಾರವಾಗಿ– ನಿಮ್ಮೂರಿನ ಕಾಮಣ್ಣರಾಗಿ ದಿಬ್ಬಣ, ಮೆರವಣಿಗೆ ಜೊತೆಗೆ, ಅದೂ ಸಹ ಹೆಂಗಸರ ಗುಂಪಿನ ಮುಂದಿನಿಂದ ಅವರಿಗೆ ಕಾಣುವ ಹಾಗೆ, ಮದಗಜ ಗಮನ, ಕಂಠೀರವ ಠೀವಿಗಳಿಂದ ಹೋಗುತ್ತಿರುವಾಗ ಆಕಸ್ಮಾತ್ ಗುಳಿಯೋ? ದಿಣ್ಣೆಯೊ? ಕಲ್ಲೋ? ಅಂತೂ ಕಾಲುಜಾರಿ, ಹೆಜ್ಜೆತಪ್ಪಿ, ಮೂರು ಕರ್ನಲಾಗ ಹೊಡೆದು, ಪಕ್ಕದ ಪುರಪಿತೃಗಳಿಂದ ದಾಟಲಾಗದ ವೈತರಣಿ ಅಂದರೆ ಚರಂಡಿಗೆ ಬಿದ್ದು, ಮೊಣ ಕೈಕಾಲುಗಳೆಲ್ಲಾ ಜಜ್ಜಿಹೋಗಿ ಸಿಪ್ಪೆ ಸುಲಿದು ರಕ್ತ ಸೋರುತ್ತಿದ್ದರೂ, ಕೊಚ್ಚೆನೀರು ಕಣ್ಣು, ಮೂಗು ಬಾಯಿಗಳನ್ನು ಏಕಕಾಲದಲ್ಲಿ ಪ್ರವೇಶಿಸಿದರೂ, ಆಗ ನೀವು

ಅಳುತ್ತೀರಾ? ಇಲ್ಲ! ಗೊತ್ತು! ನೀವು ಆ ಹಿಂದಿನಿಂದ ಕಿಲಕಿಲ ನಗುತ್ತಾ ಬರುವ ಎರಡನೇ ನಂಬರು ಅಪ್ಸರೆಯರ ಮುಂದೆ ನಿಜವಾಗಿಯೂ ಅಳುವುದಿಲ್ಲ. ಅದರ ಬದಲು ಯಾರು ಯಾರನ್ನೊ ಬೈದು ನಿಮ್ಮ ಶೂರ-ವೀರ-ಧೀರ ತ್ವ-ತ್ವ-ತ್ವಗಳನ್ನು ಪ್ರದರ್ಶಿಸುತ್ತೀರಿ?

ನಾಲ್ಕು ಜನರೆದುರು ಅತ್ತು ತನ್ನ ಪೌರುಷ-ಗಂಡಸು ತನ-ತ್ವಕ್ಕೆ ಧಕ್ಕೆ ತರಿಸಿಕೊಳ್ಳುವುದು ನಮಗೆ ಸಹಿಸದು. ಹೀಗೆ ನಾವು ಸುಖೆ-ದುಃಖೇ, ಲಾಭೆ-ಅಲಾಭೇ, ಜಯೆ–ಅಪಜಯೇ, ಒಳಗೆ-ಹೊರಗೆ, ಬಿದ್ದರೂ-ಎದ್ದರೂ, ಬೇಸ್ತು-ಸುಸ್ತು, ಮಾನೆ-ಅವಮಾನೆ, ಎಲ್ಲಾ ಕಡೆಯೂ ನಗುವುದಕ್ಕೆ ಅಭ್ಯಾಸಮಾಡ ಬೇಕು. ಜೀವನ ಅಂದರೆ ನೀರು ಎಂಬ ಅರ್ಥವೂ ಇದೆ. ಆದ್ದರಿಂದ ನಮ್ಮ ಜೀವನವೂ ನೀರು ಕುಡಿದಷ್ಟು ಸುಲಭ ವಾಗಿರಬೇಕು.

ಇಷ್ಟು ಹೇಳಿದ ಮೇಲೆ ನಿಮಗಿನ್ನೊಂದು ಸಂದೇಹ ಮೂಡಬಹುದು. "ನಗುವ ಗಂಡಸನ್ನೂ ಅಳುವ ಹೆಂಗಸನ್ನೂ ನಂಬಬಾರದು" ಎಂಬ ಗಾದೆಯ ಮಾತಿನಿಂದ. ಬೇಡ! ನಮ್ಮನ್ನಾರೂ ನಂಬುವುದುಬೇಡ. "ಬಂದದ್ದೆಲ್ಲ ಬರಲಿ ಗೋವಿಂದನ ದಯ ನಮಗಿರಲಿ" ಎಂದು ನಮ್ಮ ಜೀವನ ಸೂತ್ರ. ಆದ್ದರಿಂದ ಆ ಎಲ್ಲದಕ್ಕಿಂತಲೂ ಎತ್ತರದ ಮಹಡಿ ಮಾಳಿಗೆಯಲ್ಲಿರುವ–ಅಂದರೆ ಪರಮಾತ್ಮನು ಈ ವಿಶ್ವವನ್ನು ವ್ಯಾಪಿಸಿಯೂ ಹತ್ತು ಅಂಗುಲ ಮೇಲಕ್ಕಿದ್ದಾನೆಂದು ವೇದವಾಕ್ಯ. ಆದ್ದರಿಂದ ಅಂತಹ ಪರಮಾತ್ಮನೆಂಬ ಬಹದ್ದೂರ್ ರಾವ್‌ಸಾಹೇಬನ ಕೃಪಾಕಟಾಕ್ಷಕ್ಕೆ; ನಮ್ಮ ಮದುವೆ ಚಪ್ಪರಕ್ಕೆ ಕಾಲಿಟ್ಟಾಗ-ನುಗ್ಗಿದಾಗ, ನೂರಾರು... ಮುಖಿಯರು.. ವದನೆಯರು...

ಅಕ್ಷಿಯರು.:. ವೇಣಿಯರು ಕಿಕ್ಕಿರಿದು ಮುನ್ನುಗ್ಗುತ್ತಿದ್ದರೂ ಆ ನಾವು-ನಮಗೆ, ಕೈಕೊಡುವವಳ ವೊನೆನೋಟಕ್ಕೆ, ಹೇಗೊ ಹಾಗೆ ಪಾತ್ರರಾಗಲು ಹೊರಟ ನಮಗೆ ಈ ಹುಲು ಮಾನವರ ಹಂಗೇಕೆ? "ಆನೆ ಏರಿದವಂಗೆ ಶ್ವಾನದಾ ಭಯವುಂಟೆ- ಅಲ್ಪಜ್ಞ" ಇಲ್ಲ, ಹೀಗಿರುವಾಗ ನಮ್ಮನ್ನು ಯಾರೂ ನಂಬುವುದು ಬೇಡ. ಅಥವಾ ನಗುವುದರಿಂದ ನಮ್ಮ ಗಂಡಸುತನಕ್ಕೆ ಕೊಡಲಿ ಪೆಟ್ಟೆಂದೊ? ಹೋಗಲಿ. ಈ ಜೀವಕ್ಕೆ ಲಿಂಗಭೇದವಿಲ್ಲ. ದೇಹ ರಚನೆಯನ್ನು ಕಂಡು ಮಾತ್ರ ಭೇದ ಹೇಳುವುದು. ಜೀವಾತ್ಮನು ಸಕಲ ಪ್ರಾಣಿಗಳಲ್ಲಿಯೂ ಒಂದೇ ರೀತಿ. ಆದ್ದರಿಂದ ನಾವು ನಗುವುದರಿಂದ ಯಾವ ಅವಮಾನವೂ ಇಲ್ಲ.

ನಗುವುದು ನಮ್ಮ ಜೀವನದಲ್ಲಿ ಒಂದು ಲಾಭಕರವಾದ ವ್ಯಾಪಾರ. ನಮ್ಮಂತರಂಗದ ಎಷ್ಟೋ ಕೊಳೆಗಳನ್ನು ಮುಚ್ಚಿಡಲು ಅದೊಂದು ಮುಖವಾಡವಿದ್ದಂತೆ. ಅದರಿಂದಾಗಿ ಎಷ್ಟೋ ಕಾರ್ಯಗಳನ್ನು ಲೀಲಾಜಾಲವಾಗಿ ಸಾಧಿಸಿಬಿಡಬಹುದು.

ನೀವು ಪ್ರಯತ್ನಪಟ್ಟು ಹುಡುಕಿದರೆ ನಗುವ ಅಭ್ಯಾಸ ಮಾಡಿಕೊಂಡವರು ಸಿಗುತ್ತಾರೆ. ನೋಡಿ ಕೆಲವರಿಗೆ ತಮ್ಮ ಮಾತನ್ನು ಕೇಳಿ ಬೇರೆಯವರು ನಗಬೇಕೆಂಬ ಚಪಲ. ಅದಕ್ಕಾಗಿ ಅವರು ಯಾವಾಗಲೂ ನಗಿಸುವ ಮಾತುಗಳನ್ನೇ ಆಡುತ್ತಿರುತ್ತಾರೆ. ಒಂದೊಮ್ಮೆಗೆ ಕೇಳುವವರು ಬೇಸರಪಟ್ಟು ಸುಮ್ಮನಿದ್ದರೂ, ತಾವೇ ಹೇಳಿ, ಕ್ಕೊ! ಕ್ಕೊ!– ಖಿ! ಖಿ! ಹ್ಹಿ! ಹ್ಹಿ! ಎಂದು ನಕ್ಕುಬಿಡುತ್ತಾರೆ. ಹಾಗಾದರೂ ತಮ್ಮ ತೀಟೆಯನ್ನು ತೀರಿಸಿಕೊಳ್ಳುತ್ತಾರೆ. ಇನ್ನು ಕೆಲವರಿಗೆ ತಮ್ಮ ನಗುವಿನ ಸರಿಯಾದ ಪ್ರಯೋಗಶಾಲೆಯೆಂದರೆ ಹೆಂಡಂದಿರ ಮುಂದೆ ಆ ಕರ್ಮಪತ್ನಿಯು ಅಲ್ಲ! ಅಲ್ಲ! ಧರ್ಮಪತ್ನಿಯು ಎಷ್ಟು ಬೇಕಾ

ಪಡೂ ಬೈದು ಹೀಯಾಳಿಸಿ ತಿವಿದರೂ ಸುಮ್ಮನೆ ನಕ್ಕುಬಿಟ್ಟು ತಮ್ಮ ಅಸಹಾಯಕತೆಯನ್ನು ರಕ್ಷಿಸಿಕೊಳ್ಳುತ್ತಾರೆ.

ಇನ್ನು ಕೆಲವರ ನಗುವಿಗಂತೂ ಬೆಲೆಯೇ ಇಲ್ಲ. ಅಂದರೆ ಅಷ್ಟೊಂದು ಅಮೂಲ್ಯ. ಅಂಥವರಲ್ಲೊಂದು ಪಂಗಡ ನವ ತರುಣಿಯರದ್ದು. ಅವರ ನಗುವಿಗೋಸ್ಕರ ಆ-ಖಂಡ ಬ್ರಹ್ಮ ಚಾರಿಗಳಾದ ಅನೇಕ ಯುವಕರು ಎಂಥಹ ತ್ಯಾಗಮಾಡಲೂ ಸಿದ್ಧರಾಗುತ್ತಾರೆ. ಚಕ್ರವರ್ತಿಯೊಬ್ಬ ಇತ್ತೀಚಿಗೆ ತನ್ನ ಪದವಿ ಯನ್ನೇ ತ್ಯಜಿಸಿದನೆಂದಮೇಲೆ ಯುವತಿಯ ನಗುವಿನ ಬೆಲೆ ಕೇಳಬೇಕೆ? ಮುಗುದೆಯರ ಮುಗುಳುನಗೆಯ ಲಹರಿಯಲ್ಲಿ ಮೂರು ಲೋಕವೇ ತೇಲಿಬಿಡುತ್ತದೆ. ದ್ರೌಪದಿಯ ನಗುಮಾತ್ರ ಕುರುಕುಲವನ್ನು ಮುಳುಗಿಸುವುದರಲ್ಲಿ ತಾನೂ ಒಂದು ಕಾರಣ ವಾಯಿತು.

ಅಲಂಕಾರ ಶಾಸ್ತ್ರದಲ್ಲಿ ನಗುವನ್ನು ಅದರ ಸ್ವರೂಪಕ್ಕೆ ಸರಿಯಾಗಿ ವಿಂಗಡಿಸಿದ್ದಾರೆ- ಕಣ್ಣು, ಗಲ್ಲ, ಕಪೋಲಗಳು ಇವಿಷ್ಟೇ ಅರಳುವುದಕ್ಕೆ ಉತ್ತಮ ನಗುವೆಂದೂ, ಒಂದೆರಡು ಹಲ್ಲು ಕಾಣುವಂತೆ ತುಟಿ ತೆರೆದು ನಗುವುದು ಮಧ್ಯಮ ನಗು ವೆಂದೂ, ಶಬ್ದಪೂರ್ವಕ ಬಾಯೆಂಬ ಹಾಳು ಬಾವಿಯನ್ನು ಪ್ರದರ್ಶಿಸುವುದು ಅಧಮವೆಂದೂ ವಿವರಿಸಿ ಈ ಮೂರು ವಿಧ ಗಳನ್ನು ಮತ್ತೆ ಒಂಭತ್ತು ವಿಧವನ್ನಾಗಿ ವಿಂಗಡಿಸಿದ್ದಾರೆ. ಆದರೆ ಈ ಎಲ್ಲಾ ತರದ ನಗುವೂ ಆತ್ಮನಲ್ಲುಂಟಾಗುವ ಆನಂದ ಭಾವದ ಪ್ರತೀಕಗಳು. ಇನ್ನು ಕೆಲವು ಜುಗುಪ್ಸೆ, ತಿರಸ್ಕಾರ, ಹೊಟ್ಟೆಯುರಿ, ಸಿಟ್ಟು, ಬೆದರಿಕೆಗಳಿಂದುಂಟಾದ ನಗುವು ದೇ ವಾಂಶ ಸಂಭೂತರಾದ ರಾಕ್ಷಸರಿದ್ದಂತೆ. ಇವೆರಡು ಜಾತಿಯವು ಗಳೂ ಆತ್ಮನಿಂದಲೇ ಹುಟ್ಟಿದ್ದು. ಒಂದು ಗುಂಪಿಗೆ ಹಾಸ,

ಮಂದಹಾಸ, ಅಟ್ಟಹಾಸ, ನಸುನಗು, ಕಿರುನಗು, ಮುಗುಳು ನಗು, ಹೂನಗುಗಳೆಂದು ಹೆಸರಾದರೆ, ಹುಚ್ಚುನಗು, ವಿಕಟಾಟ್ಟಹಾಸ, ಪ್ರೇತನಗು, ಭೂತನಗು, ರಕ್ಕಸನಗು, ಪಿಶಾಚನಗು, ನಂಜುನಗು, ಉರಿನಗು, ಬಿರಿನಗು ಎಂದು ಬೇರೆಯವುಗಳಿಗೆ ನಾಮಕರಣ.

ನಗುವಿನ ಧ್ವನಿಭೇದವನ್ನು ಬರೆದು ತೋರಿಸುವುದು ಈ ಬಡ ಲೇಖನಿಗೆ ಅಸಾಧ್ಯವಾದರೂ ನೀವು, ಖ್ಯೊ! ಖ್ಯೊ! ಖ್ಯಿ-ಖ್ಯಿ! ಹ್ಹಹ್ಹ!- ಹ್ಹಿಹ್ಹಿ!- ಹ್ಹೆಹ್ಹೆ!- ಲ್ಹೆಲ್ಹೆ!- ಹೈಹೈ!- ಹ್ಕಹ್ಕಹ್ಕ! ಹ್ಹೊ!ಹ್ಹೊ!- ಹ್ಮುಹ್ಮು!- ಹೀಗೆಲ್ಲಾ ನಗುವುದನ್ನು ಕೇಳಿರಬಹುದು. ಇದರ ಪರಮಾವಧಿಯು ಗಾರ್ಧಪಹಾಸಕ್ಕೆ ತಗಲುವುದು. ಅಂಥವರೆ ನಗುವುದರಲ್ಲಿ ಅಚ್ಚಾ ನಂಬರು ೧. ಈ ಎಲ್ಲಾ ತರದ ನಗುವಿಗೂ ಲಿಂಗಭೇದವಿದೆ. ಸ್ತ್ರೀ ಲಿಂಗದಲ್ಲಿ ಕಿಲ! ಕಿಲ! ದಿಂದ ಮೊದಲಾಗುತ್ತೆ.

ಇನ್ನು ಈ ನಗುವಿಗೆ ಬಣ್ಣ ಬೇರೆ ಇದೆಯಂತೆ, ಕಾಳಿದಾಸನು ಬೆಳ್ಳಗಿನ ಹಿಮಾಲ್ಯಯವನ್ನು ವರ್ಣಿಸುವಾಗ, ಶಿಖರದಲ್ಲಿರುವ ಈಶ್ವರನ ದಿನನಿತ್ಯದ ಅಟ್ಟಹಾಸವೇ ರಾಶಿಬಿದ್ದಹಾಗಿದೆ ಎನ್ನುತ್ತಾನೆ. ಅಂದಮೇಲೆ ನಗು ಬಿಳಿ ಬಣ್ಣದ್ದಾಯಿತು. ಹಾಗಾದರೆ ಕೆಲವರು, ಕಾಳಸಂತೆ ವ್ಯಾಪಾರಮಾಡಿ, ಲಂಚತಿಂದು ಮೋಸಮಾಡಿ, ಸಿಕ್ಕದೆ ಗೆದ್ದೆವೆಂದು ನಗುತ್ತಾರಲ್ಲ ಅದಕ್ಕೆ ಬಣ್ಣವೇನಿರಬಹುದು?

ನಗೆಗಾರನಿಗೆ ಸಮಾಜದಲ್ಲಿ ಸಾಹಿತ್ಯದಲ್ಲಿ ಒಂದು ಸ್ಥಾನವಿದೆ. ಅವನು ಎಲ್ಲರನ್ನೂ ತನ್ನ ನಗೆಮಾತು; ಬರಹಗಳಿಂದ ನಗಿಸುತ್ತಾನೆ. ಜೊತೆಗೆ ತಾನೂ ನಗೆಗೀಡಾಗುತ್ತಾನೆ. ಅಂತೂ ಅವನು ಹಾಸ್ಯ-ಹಾಸ್ಯಾಸ್ಪದ ವ್ಯಕ್ತಿಯಾಗುತ್ತಾನೆ.

ಕೆಲವು ಪತ್ರಿಕೆಗಳಲ್ಲಿ "ನಗೆಹನಿ" ಎಂಬ ಹಣೆಬರಹವುಳ್ಳ ಮಾತುಗಳು ಬರುತ್ತವೆ. ಅವುಗಳನ್ನೋದುವಾಗ, ಆ ಅಚ್ಚು ಹಾಕುವ ಮಹಾಶಯ ಬೇಸರದ ನಗುವನ್ನು ಆ ಸಮಯ ಕಾರಿರಬೇಕಲ್ಲದೆ ಈಗ ಆ ಹನಿಯಾಗಿದ್ದ ನಗು ಎಲ್ಲೋ ಗಾಳಿಯಲ್ಲಿ ಸೇರಿ ಉಗಿಯಾಗಿರಬೇಕೆನ್ನಿಸುತ್ತದೆ.

ಒಂದು ಸನ್ನಿವೇಶ ಕಲಾಕೌಶಲದಿಂದ ರಸಭರಿತವಾಗಿದ್ದರೂ, ಯಾ, ವಿರಸಹೊಂದಿ ಆಭಾಸವಾಗಿದ್ದರೂ, ಎರಡೂ ಕಡೆಯೂ ನಗು ಬಂದೇಬರುತ್ತದೆ. ಅದಕ್ಕೆ ಲಂಗುಲಗಾಮೇ ಇಲ್ಲ. ನಾವು ಯಾರಿಗೆ, ಎಲ್ಲಿ, ಹೇಗೆ, ನಗಬಾರದಿತ್ತೆಂಬುದನ್ನು ಆಮೇಲೆ ಜ್ಞಾಪಿಸಿಕೊಳ್ಳುತ್ತೇವೆ. ನಮ್ಮ ಕೈಮೀರಿ ಬರುವ ಆ ನಗು ಮನುಷ್ಯ ಪ್ರಯತ್ನದಿಂದ ನಿಲ್ಲಿಸಲಸಾಧ್ಯವಾಗಿದೆ. ಕಾರಣ ಅದು ಅಂತರಾತ್ಮನ ಆನಂದ ಸ್ವರೂಪದ ಪ್ರತೀಕ. "ಆನಂದಂ ಬ್ರಹ್ಮೇತಿ" ಎಂದು ಉಪನಿಷತ್ತು ಸಾರುತ್ತದೆ. ಆದ್ದರಿಂದ ಬ್ರಹ್ಮವನ್ನು ತಡೆಯುವ ಶಕ್ತಿ ನಮಗೆಲ್ಲಿ? ಮರಣ ದಂಡನೆಗೆ ಗುರಿಯಾದವನೂ ನಗುವ ಸಂಭವವಿದೆ.

ಒಬ್ಬ ಅಪರಾಧಿಯನ್ನು ಮರಣಗಂಬದ ಹತ್ತಿರ ಬಲಿಗಾಗಿ ನಿಲ್ಲಿಸಿದ್ದರು. ಸಂಬಂಧಪಟ್ಟ ಆಳುಗಳು ಸಂಪ್ರದಾಯದಂತೆ ಅವನ ಕೊರಳಿಗೆಂದು ಹಾಕಲು ತಂದ ಕೆಂಪು ಹೂಮಾಲೆಯನ್ನು ಗಾಬರಿಯಿಂದ ಅಲ್ಲೇ ನಿಂತಿರುವ ಮುಖ್ಯಾಧಿಕಾರಿಯ ಕೊರಳಿಗೆ ಹಾಕಿಬಿಟ್ಟರು. ಈ ದೃಶ್ಯವನ್ನು ಕಂಡು, ಆ ಅಪರಾಧಿಗೆ ಗೊಳ್ಳನೆ ನಗು ಬಂದುಬಿಟ್ಟಿತು. ಹಾಗೆ ಮೃತ್ಯು ದವಡೆಯಲ್ಲಿದ್ದರೂ ನಿರ್ಭಯವಾಗಿ ನಕ್ಕ ಆ ಅಪರಾಧಿಯನ್ನು ಕಂಡು, ಅಧಿಕಾರಿಯು ಇಂಥವನಿಗೆ ಈ ಶಿಕ್ಷೆ ಅನಗತ್ಯವೆಂದು ನಿವೃತ್ತಿಪಡಿಸಿದನಂತೆ.

ಇಷ್ಟೆಲ್ಲ ಹೇಳಿ ಜೀವನದಲ್ಲಿ ನಗುವಿಗೊಂದು ಪ್ರಾಧಾನ್ಯತೆ ಯಿದೆಯೆಂದಾಗ ಎಲ್ಲರೂ ನಗಲು ಅಭ್ಯಾಸ ಮಾಡಬಹುದು. ಆದರೆ ನಗುವವರೆಲ್ಲಾ ದಯವಿಟ್ಟು ಈ ಕೆಳಗಿನ ಕೆಲವೇ ನಿಯಮಗಳನ್ನು ಅತ್ಯಾವಶ್ಯಕವಾಗಿ ಪಾಲಿಸಲೇಬೇಕು.—

೧. ಹುಲಿ ಪಂಜರದ ಬಾಗಿಲು ತೆರೆದ ಹಾಗೆ ಬಾಯಿ ನಾರುವ, ಮುಖಾರವಿಂದವುಳ್ಳವರು ತಾವು ನಗುವಾಗ ಕೊನೇ ಪಕ್ಷ ನೂರು ಮಾರಿನಷ್ಟು ದೂರದಲ್ಲಿಯಾವರೂ ಮೂಗು ಇದ್ದ ಮನುಷ್ಯರಿದ್ದಾರೆಯೇ? ಎಂದು ನೋಡಿಕೊಳ್ಳಬೇಕು.

೨. ಊದಿಕೊಂಡ ಬಾವು ಹುಣ್ಣಿನಿಂದ ಕೀವು ಸುರಿವಂತೆ ಯಾವಾಗಲೂ ಜೊಲ್ಲು ಸುರಿವ ಮುಖಪದ್ಮವುಳ್ಳವರು ಕನಿಷ್ಟ ಪಕ್ಷ ಹತ್ತು ಗಜ, ಮನುಷ್ಯರಿಂದ ದೂರ ಸರಿಯಬೇಕು.

೩. ಮಲ್ಲಿಗೆ ಮುಗುಳು, ದಾಡಿಮ ಬೀಜ, ಮುತ್ತಿನ ಸಾಲು ಇವುಗಳು ಹುಟ್ಟುವುದಕ್ಕಿಂತ ಮುಂಚೆಯೇ, ಸೃಷ್ಟಿ ಸಲ್ಪಟ್ಟ ದಂತವಕ್ರ ಪಾತ್ರಧಾರಿಗಳು, ಮುಖಕಂದರಾಂತರ್ಗತ ವಾದ ಶಿಲಾ ಕೂಟಗಳ ಸಂದಿನಲ್ಲಿ, ಶತಶತಮಾನದಿಂದಲೂ ಬೆಳೆ ಸಿಕೊಂಡುಬಂದ, ಪೌಷ್ಟಿಕ ಆಹಾರ ದ್ರವ್ಯಗಳ ಉಗ್ರಾಣದ ಅಮೂಲ್ಯ ಪದಾರ್ಥಗಳು ಇತರರ ಕಾಕದೃಷ್ಟಿಗಳಿಗೆ ಬಿದ್ದು ಆ ಮೂಲಕ ನರಿನಾಯಿಗಳಿಗೆ ಸುದ್ದಿಯಾಗಿ ನಷ್ಟವಾಗದಂತೆ ಎಚ್ಚರವಿರಬೇಕು.

೪. ನಗುವ ಆವೇಶದ ಭರಾಟೆಯಲ್ಲಿ ಮೈಮರೆವ ಸ್ವಭಾ ವದವರು ತಮ್ಮ ಮುಂದೆ ಯಾರಿದ್ದಾರೆ? ತಾವು ಎಲ್ಲಿದ್ದೇವೆ? ತನ್ನ ವಸನ ಭೂಷಣಗಳ ಗತಿಯೇನು? ಎಂಬಿತ್ಯಾದಿ ಎಚ್ಚರ ವನ್ನು ಮೊದಲೇ ತಮ್ಮ ಜೇಬಿನಲ್ಲಿ ಭದ್ರಪಡಿಸಿಕೊಳ್ಳಬೇಕು.

೫. ನಗುವಾಗ ತಮ್ಮದಾಗಲೀ ಎದುರಿಗಿದ್ದವರದ್ದಾಗಲೀ ಹೊಟ್ಟೆ ಹುಣ್ಣಾದರೆ ತಾವು ಜವಾಬ್ದಾರರಲ್ಲವೆಂಬ ಬರೆ ಹಲಗೆಯನ್ನು ತಮ್ಮ ಕುತ್ತಿಗೆಯಲ್ಲಿ ಕಟ್ಟಿಕೊಳ್ಳಬೇಕು.

ಇನ್ನು ಕೊನೆಯದಾಗಿ ಅಜ್ಜಿಯ ಮಾತಿನಲ್ಲಿರುವ "ಅಳಳುತ್ತಾ ಹುಟ್ಟು" ಎಂಬುದರ ವಿಚಾರ:– ಹೌದು ನಾವು ಕರ್ಮಭೂಮಿಯಲ್ಲಿ ಏನೇನು ಅನುಭವಿಸಲಿದೆಯೋ? ಎಂದು. ಹೇಗೂ ಇರಲಿ. ಹುಟ್ಟಿದ ಮಗು ಮೊದಲು ಎಲ್ಲದಕ್ಕೂ ಅಳುವುದೇ. "ಬಾಲಾನಾಂ ರೋದನಂ ಬಲಂ" ಎಂದು ಯಾವನೋ ಹೇಳಿದ್ದ. ಆದರೆ ಅದರ ಸತ್ಯಾಂಶ, ಹಿಂದೆ ಹೇಳಿದಂತೆ ಸಾವೆಂಬ ಪರೀಕ್ಷೆಯಲ್ಲಿ ನಾಪಾಸಾಗಿ ಅದೇ ತರಗತಿಗೆ ಬಂದ ವಿದ್ಯಾರ್ಥಿಯಂತೆ ಮತ್ತೆ ಹುಟ್ಟುವ ಮಗು ಅಳುವುದೆಂಬದು ಆಗಿದೆ. ಇನ್ನು ತಾಯಿಯಾಗುವವಳು ಜನನ ಕಾಲದ ಪೂರ್ವದಲ್ಲಿಯೇ ಅಳಲಾರಂಭಿಸುತ್ತಾಳೆ. ಎಷ್ಟೋ ಮಂದಿ ಸಂತಾನವಿಲ್ಲವೆಂದು ದೇವರಲ್ಲಿಯೋ ಇಷ್ಟರಲ್ಲಿಯೋ ಹೇಳಿ ಅಳುತ್ತಾರೆ. ಇನ್ನು ಆ ಜನನ ಕಾಲದ ಅಳುವೆಂದರೆ, ಜೀವನವೇ ಬೇಡ ಎನ್ನಿಸುವಷ್ಟು ಕಷ್ಟಜನಕವಾಗಿದೆ. ಆದ್ದರಿಂದಲೇ ಪ್ರಸವ ವೈರಾಗ್ಯವೆಂದು ಪ್ರಸಿದ್ಧಿ. ಹೀಗೆ ಅಳುವಿನ ಹಿನ್ನೆಲೆಯಿಂದಲೇ ಹುಟ್ಟು ಆರಂಭ. ಅಳಳುತ್ತಾ ಹುಟ್ಟು.

ಈ ಅಜ್ಜಿಯುಪದೇಶದಲ್ಲಿ ನಿಮಗೆಷ್ಟು ಸತ್ಯವೂ? ನಾನರಿಯೆ? ನಾನಂತೂ ಪೂರ್ತಿ ನಂಬಿದವ. ನೀವು ನಂಬಿಕೆಟ್ಟರೆ ಕೆಡಲಿ... ಎಂದಂತೆ ನಂಬಿದರೊಳ್ಳಿತು. ಬಿಟ್ಟರೆ ಕೇಡಿಲ್ಲ. ನಂಬಿದ ನಾನು... ಗಮಿಷ್ಯಾಮ್ಯುಪಹಾಸ್ಯತಾಂ ॥

—೦—

# ೧, 2, 3---- ಸಂನ್ಯಾಸಿಗಳು

ಸನ್ಯಾಸೀಂದ್ರೆ ಗೊತ್ತಾಯಿತಲ್ಲವೆ? ಮೊಳದುದ್ದ ಗಡ್ಡ ಬಿಟ್ಕೊಂಡು, ಕಾವಿ ಬಟ್ಟೆ ಉಟ್ಕೊಂಡು, ಯೋಗದಂಡ ಹಿಡ್ಕೊಂಡು, ಬೂದಿ ಬಳ್ಕೊಂಡು, ಬರ್ತಾನಲ್ಲ! ಅವನೆ! ಅವನೇ! ಆದರೆ ನೀವು ಅವನನ್ನು ಸನ್ಯಾಸೀಂತ ಮರ್ಯಾದೇ ಮಾಡೋಲ್ಲಾಂತ ಕಾಣುತ್ತೆ. ಅದರ ಬದಲು ಬಾಯಿಗೆ ಬಂದ ಹಾಗೆ ಬೊಗಳಿ ಕಳಿಸ್ತೀರಿ. ಅದು ನಿಮ್ಮ ತಪ್ಪಲ್ಲ. ಅವನು ದಿನಾ ನಿಮ್ಮನೆ ಬಾಗಿಲಿಗೆ ಬಂದು ಬೇಡೋದೇ ಕಾರಣ. ಹಾಗಂತ ನಿಮ್ಮಠದ ಸನ್ಯಾಸಿಗಳು ಬಂದರೂಂದ್ರೆ ಏನು ಸ್ವಾಗತ! ಎಂಥ ಮೆರವಣಿಗೆ!! ಎಷ್ಟು ಉಪಚಾರ!! ಹೊರಲಾರದಷ್ಟು ಕಾಣಿಕೆ, ಬಿಸಾಡುವಷ್ಟು ಬಿಕ್ಷೆ, ಪಾದಾದಿ ಕೇಶಪರಿಯಂತ ಸರ್ವಾಂಗ ಪೂಜೆ– ಎಲ್ಲ ಮಾಡ್ತೀರಿ. ಇಬ್ಬರೂ ಬೇಡೋರೇ. ಒಬ್ಬರನ್ನು ಮಾತ್ರ ಬಾಯಿಗೆ ಬಂದ ಹಾಗೆ ಬಯ್ಯುತ್ತೀರಿ. ಇನ್ನೊಬ್ಬರನ್ನು ಬಾಯಿ ತುಂಬಾ ಹೊಗಳುತ್ತೀರಲ್ವೆ? ಅದಕ್ಕೆ ಅಂತಾರೆ– ಬಡವ ತಿಂದರೆ, ಹೊಟ್ಟೆಗಿಲ್ಲದಕ್ಕೆ. ಶ್ರೀಮಂತ ತಿಂದರೆ ಮದ್ದಿಗೆ...

...ಹೋಗಲಿ ಯಾಕೆ ಬಂತೂಂದ್ರೆ ಸನ್ಯಾಸಿ ವಿಷಯ ಹೇಳಲಿಕ್ಕೆ ಹೊರಟಿದ್ದೆ. ಸನ್ಯಾಸಿ– ಸನ್ಯಾಸೀಂದ್ರೇನು ಗೊತ್ತಾ? ನ್ಯಾಸ ಅಂದ್ರೆ ಏನೊಂದೂ ವ್ಯತ್ಯಾಸವಾಗದೆ (ಅಂದ್ರೆ ಹಾಳು ಮಾಡದೆ ಒಳ್ಳೆದು ಮಾಡಿದ್ರೆ ತಪ್ಪಿಲ್ಲ.) ಕೇಳಿದಾಗ ಕೊಡಬೇಕೂಂತ ಹೇಳಿ ಒಬ್ಬನ ಕೈಯಲ್ಲಿ ಕೊಟ್ಟಿಡುವ ವಸ್ತುವಿಗೆ ನ್ಯಾಸ ಅಂತ ಹೆಸರು. ಆ ವಸ್ತುವನ್ನು ಬಲು ಜಾಗ್ರತೆಯಿಂದ ಕಾಪಾಡಬೇಕು. ಇಡುಗಂಟೂಂತಾರೆ ನಮ್ಮಲ್ಲಿ ಅಲ್ಲವೆ?

ಹಾಗೆಯೇ ಮನುಷ್ಯನು ದೈವದತ್ತವಾದ ಕರ್ಮೇಂದ್ರಿಯ ಜ್ಞಾನೇಂದ್ರಿಯಗಳನ್ನು ವಿಕಾರಗೊಳಿಸದೆ ಸರಿಯಾಗಿ ಕಾಪಿಡುವುದಕ್ಕೆ ಸಂನ್ಯಾಸ ಅನ್ನಬಹುದು. ಯಾರು ಹಾಗೆ ಕಾಪಿಡುವನೋ ಅವನೇ ಸಂನ್ಯಾಸಿ ತಿಳಿತೆ? ಸುಮ್ಮನೆ ಕಾವಿ ಬಟ್ಟೆ ಉಟ್ಟವರನ್ನೆಲ್ಲಾ ಸನ್ಯಾಸೀಂತ ಕಾಲು ಹಿಡಿಯಬೇಡಿ. ವೇಷದ ಸಂನ್ಯಾಸಿಗಳಿಂದ ಮೋಸಹೋದವರೆಷ್ಟೋ ಮಂದಿ ಇದ್ದಾರೆ. ಸುಖದ ಸುಪ್ಪತ್ತಿಗೆ ಹತ್ತುವುದಕ್ಕೆ ಸಂನ್ಯಾಸವೇ ಸೋಪಾನವೆಂದು ತಿಳಿದವರೂ ಇದ್ದಾರೆ. ಯಾರು ಗೊತ್ತಾ?

ರಾಮಾಯಣದಲ್ಲಿ 'ರಾವಣ ಸನ್ಯಾಸಿ' ಅಂತ ಕೇಳಿಲ್ಲವೆ? ಶೂರ್ಪನಖಿಯ ಮಾತು ಕೇಳಿ ರಾವಣನಿಗೆ ಸೀತೆಯ ಸುಖ ಪಡಿಯಬೇಕೂಂತ ಆಸೆಯಾಯಿತು. ಆದರೆ ಪರಸ್ತ್ರೀಯನ್ನು ಸೀದಾ ದಾರಿಯಿಂದ ಸಾಧಿಸಲು ಸಾಧ್ಯವೆ? ಇಲ್ಲ. ಮೋಸ ಮಾಡಬೇಕು. ಸರಿ! ಮೋಸವನ್ನು ಮುಚ್ಚಬೇಕಾದರೆ ಸಾಚಡ ಮುಚ್ಚಳ ಅಗತ್ಯ. ತಲೆ ತುರಿಸಿದ... ಸಿಕ್ಕಿತು ದಾರಿ. ಸಂನ್ಯಾಸಿಯನ್ನು ಎಲ್ಲರೂ ನಂಬುತ್ತಾರೆ. ಅನ್ಯಾಯ ಮಾಡಿಯೂ ಮಾಡದಂತಿರಬೇಕಾದರೆ ಅದೇ ಮಾರ್ಗ. ಹೊರಟೇಬಿಟ್ಟ ಸಂನ್ಯಾಸಿಯಾಗಿ. ತಂದೇಬಿಟ್ಟ ಸೀತೆಯನ್ನು. ಅಂದಿನಿಂದ ಸಂನ್ಯಾಸನಾಣ್ಯ ಸವಕಲಾರಂಭಿಸಿತು.

ಇನ್ನೊಂದು ಸಮಾಚಾರ ನೀವು ಕೇಳಿರಬಹುದು. ಅರ್ಜುನ ಸಂನ್ಯಾಸಿಯಾಗಿ ಏನು ಮಾಡಿದಾಂತ ಅಲ್ಲವೆ? ಅದರಿಂದ ಕೆಂಬೂದಿ ಮಾತ್ರ ಸನ್ಯಾಸಿಗಳಿಗೆ ಕಳ್ಳಸಿಗೆ ಕೃಷ್ಣಪಕ್ಷ ಸಿಕ್ಕಿದ ಹಾಗಾಯಿತು. ಅರ್ಜುನ ಸಂನ್ಯಾಸಿಯಾಗಿ ಒಬ್ಬಳು ಸುಭದ್ರೆಯನ್ನು ಮತ್ತಷ್ಟು ಸುಭದ್ರೆಯನ್ನಾಗಿ ಮಾಡಿದರೆ, ಮುಂದಿನವರು ಒಂಭೊಂಭತ್ತಿಲ್ಲ ಸು+ಭದ್ರೆಯರನ್ನು ಕುಭದ್ರೆ

ಯಾರನ್ನಾಗಿ ಮಾಡಿ ಬೀದಿಗೆಸೆಯುತ್ತಾ ಬಂದರು.

ಮತ್ತೊಂದು ಸಂನ್ಯಾಸಿಯ ಕತೆಯೂ ನಿಮಗೆ ಗೊತ್ತಿರ ಬೇಕು. ಅದು "ಬೆಕ್ಕು ಸಂನ್ಯಾಸಿ"ದ್ದು. ಇಲಿ ಹಿಡಿಯ ಲಾರದ ಮುದಿ ಮಾರ್ಜಾಲ ಹಾಲಿನ ಮಡಿಕೆಗೆ ಬಾಯಿ ಹಾಕಿ ದಾಗ ಅದರ ಬಾಯಿಬಳೆ ಕತ್ತಿಗೆ ಮಾಲೆಬಿದ್ದು ಗತಿಗಾಣದೆ ಇಲಿಗಳ ಮುಂದೆ ಸಂನ್ಯಾಸಿ ಅಂತ ತೋರಿಸಿ ಒಂದೊಂದೇ ಇಲಿಗಳನ್ನು ಗುಳುಂ ಮಾಡಿದ್ದು. ಹೀಗೆ ಒಂದು-ದೋ-ತ್ರೀ ಸಂನ್ಯಾಸಿಗಳ ಕತೆ ನೆನಪಾಯಿತಲ್ಲವೆ? ಇನ್ನು ಬಾಕಿ ಸಂನ್ಯಾಸಿ ಗಳಂತೆ ನೀವೇ ನೆನಸಿಕೊಳ್ಳಿ. ನಾನು ನೆನಪು ಮಾಡಿಕೊಟ್ಟರೆ ನನ್ನ ಗಂಟಲು ಒಣಗಿಹೋದೀತು. ತಲೆ ಸಿಡಿದು ಬಿಟ್ಟೀತು. ನೀವೇ ಕಣ್ಣಿದ್ದರೆ ಕಾಣಬಹುದು, ಕಿವಿಯಿದ್ದರೆ ಕೇಳಬಹುದು.

ಸಂಸಾರದ ಸಕಲ ಸುಖಭೋಗಗಳನ್ನು ತೊರೆದು ಸಂನ್ಯಾ ಸಿಯಾಗಲು ಹೊರಡಬೇಕು. ಕಣ್ಣೆದುರು ಕುಣಿವ ಆನಂದ ವನ್ನು ಬಿಟ್ಟು ಸಾಗರತಳದಲ್ಲಿ ಬಿದ್ದಿರುವ ಆನಂದವನ್ನು ಹುಡು ಕುವಂತಿಪೆ ಸಂನ್ಯಾಸ. ಕೈಗೆಟಕುವ ಜೇನನ್ನು ಬಿಟ್ಟು ಅಮೃತ ಕ್ಕಾಗಿ ಸಮುದ್ರಮಥನ ಮಾಡಿದ ಹಾಗೆ. ಆದ್ದರಿಂದಲೇ ಸಂನ್ಯಾಸವು ಸಾಮಾನ್ಯರಿಗೆ ಸೇರದು. ಮಾನವನ ಮನೋ ಕ್ಷೇತ್ರದ ಮೊದಲ ಮೊಳಕೆಯೇ ಶೃಂಗಾರ. ಅಂಕೆಗಳಲ್ಲಿ ಒಂಭತ್ತೇ ಕೊನೆಯದಾಗಿದ್ದಂತೆ ನವಮ ಭಾವನಾದ ಶಾಂತವೇ ಅದರ ಫಲ. ಆದರೆ ಚಿಗುರು ಚಿವುಟುವವರೇ ಬಹುಮಂದಿ. ಉಳಿದೆಂಟನ್ನು ದಾಂಟುವಾಗ ಕುಂಟುಕಾಲಾಗಿ ಬಿಡುತ್ತಾರೆ ಸಾಮಾನ್ಯರು. ಆದ್ದರಿಂದ ಎಲ್ಲರಿಗೂ ಸಂನ್ಯಾಸವೆಂದರೆ ಹಾವಿನ ಹೆಡೆಯ ರತ್ನವಾಗಿದೆ. ಆ ರತ್ನ ಬೇಡವೆಂದೇ ಶುದ್ಧೋ ದನ ಶತಪ್ರಯತ್ನಮಾಡಿ ಮಗನನ್ನು ತಡೆಯಲು ತೊಡಗಿದ.

ಧೀರನಾದ ಯುವರಾಜನು ಸಿದ್ಧಾರ್ಥನಲ್ಲವೆ? ಎಲ್ಲರ ಕಣ್ಣು ತಪ್ಪಿಯಾದರೂ ತನ್ನ ಅರ್ಥವನ್ನು ಸಾಧಿಸಿಯೇ ಬಿಟ್ಟ. ಸಿದ್ಧ ಹೋಗಿ ಬುದ್ಧನಾದ.

ಅಂತೆಯೇ ಸಂನ್ಯಾಸಿಯ ಸುದ್ದಿ ಕೇಳಿದರೂ ಹೆದರುವ ತಾಯಿ ಮಗ ಸಂನ್ಯಾಸಿಯಾಗುವುದನ್ನು ಸರ್ವಥಾ ಒಪ್ಪಲಿಲ್ಲ. ಕೊನೆಗೆ ಮೊಸಳೆ ಬಾಯಿಗೆ ಬಿದ್ದು ಸಾಯುವೆನೆಂದು ಬೆದರಿಸಿಯಾದರೂ ಶಂಕರನು ಜಗದ್ಗುರುವಾದರು. ಇದೆಲ್ಲ "ಗತಂ ನ ಚಿಂತಯೇತ್ಪ್ರಾಜ್ಞಃ" ನಾವು ಪ್ರಾಜ್ಞರಲ್ಲವೆ? ಹಿಂದಿನದನ್ನು ಬಿಟ್ಟುಬಿಡೋಣ. ಈಗ ತಮ್ಮ ಮಕ್ಕಳಿಗೆ— ಸಂಬಂಧಿಕರಿಗಾದರೂ ಸರಿ— ಸಂನ್ಯಾಸ ಸ್ವೀಕಾರ (ಆಶ್ರಮ) ಆಗುವುದೆಂದರೆ ಒಂದು ರಾಜ್ಯದ ಪಟ್ಟಕ್ಕೆ ಪೈಪೋಟಿ ಆಗುವುದಕ್ಕಿಂತಲೂ ಹೆಚ್ಚೆಂದು ಹೇಳಬಹುದು. ಯಾಕೆಂದರೆ ಹಿಂದಿನ ಸಂನ್ಯಾಸದಲ್ಲಿ ಯೋಗ ಸಂಪತ್ತು ಈಗಿನದರಲ್ಲಿ ಭೋಗ ಸಂಪತ್ತು...

"ಫಕೀರಕೋ ಫಿಕಿರ್ ನಹಿ" ಅಂತ ಸಂನ್ಯಾಸಿಯಾದವನಿಗೆ ಯಾವ ಹೆದರಿಕೆಯೂ ಇಲ್ಲ. ಎಲ್ಲ ಕಡೆಗೂ ರಹದಾರಿಯಿದೆ. ಹಿಂದೆ ಈ ವೇಷದಿಂದ ಎಷ್ಟೋ ಗುಪ್ತಚಾರಿಗಳು ಕಾರ್ಯಸಾಧಿಸುತ್ತಿದ್ದರು. ಸಂನ್ಯಾಸಿಗಳಲ್ಲಿ ಸರ್ವಾಲಂಕಾರ ಭೂಷಿತರಿಂದ ಹಿಡಿದು ನಿರ್ವಾಣದ ವರೆಗಿನವರೂ ಇದ್ದಾರೆ. ನಿರ್ವಾಣ ಅನ್ನುವಾಗ ಜ್ಞಾಪಕಬಂತು.

ಒಬ್ಬ ಬುದ್ಧ ಸಂನ್ಯಾಸಿ ಗಡ್ಡ ಬೆಳೆಸಿಕೊಂಡು ತಿರುಗುತ್ತಿದ್ದ. ಎಲ್ಲೋ ದಾರಿಯಲ್ಲಿ ನಿದ್ದೆ ಹೋಗಿದ್ದಾಗ ಒಂದು ಗೆಂಜಿಗವು ಬೆಳೆದ ಗಡ್ಡವೂ ಒಂದು ಸಣ್ಣ ಪೊದರೆಂದು ಭಾವಿಸಿ ಅದನ್ನಾಶ್ರಯಿಸಿತು. ಪಾಪ ಸಣ್ಣ ಜೀವ ಕೋಮಲತೆ

ಬೇರೆ. ಎಚ್ಚತ್ತ ಸಂನ್ಯಾಸಿಗೆ ತುಂಬಾ ಕರುಣೆ ಹುಟ್ಟಿ ಅದನ್ನು ಅದರ ಗುಂಪಿಗೆ ಬಿಡಬೇಕೆಂದು ತೋರಿತು. ಹಾಗೆಯೇ ಅರ ಸುತ್ತಾ ಹೋದಾಗ ಒಂದು ದೊಡ್ಡ ಪೊದೆಯಲ್ಲಿ ಗೆಂಜಿಗಗಳ ಗೂಡೊಂದು ಕಣ್ಣಿಗೆ ಬಿತ್ತು. ತನ್ನ ಒರಟು ಬೆರಳುಗಳಿಂದ ಈ ಪ್ರಾಣಿಯನ್ನು ಗೂಡಲ್ಲಿ ಬಿಟ್ಟರೆ ಅದಕ್ಕೆ ವೇದನೆಯಾದೀ ತೆಂದು ಅಹಿಂಸಾವ್ರತದ ಆ ಸಂನ್ಯಾಸಿಗೆ ಹೊಳೆದು ತನ್ನ ಗಡ್ಡ ವನ್ನೇ ಆ ಗೂಡಿಗೆ ತಾಗಿಸಿ, ಹೋಗು! ಪಾಪ! ನಿನ್ನವರೆಲ್ಲಾ ಅಲ್ಲಿದ್ದಾರೆ ಎನ್ನುತ್ತಿರುವಾಗಲೇ ಸಾವಿರಾರು ಗೆಂಜಿಗಗಳು ಒಂದೇಬಾರಿಗೆ ಗಡ್ಡವನ್ನು ಮುತ್ತಿದವು. ಮುಖವೆಲ್ಲಾ ಉರಿಯೋ ಉರಿ. ಕೂಡಲೇ ನೋವನ್ನು ತಡೆಯಲಾರದೆ ಎರಡೂ ಕೈಗಳಿಂದ ಗಡ್ಡವನ್ನು ತಿಕ್ಕಿಬಿಟ್ಟನು. ಏಕಕಾಲಕ್ಕೆ ಸಾವಿರಾರು ಗೆಂಜಿಗಗಳ ಚಟ್ನಿಯಾಯಿತು...

ಇದು ಯಾಕೆ ಹೇಳಿದೇಂದ್ರೆ ಸಂನ್ಯಾಸವನ್ನು ಸಾಮಾನ್ಯರು ಹೊಂದಿದರೆ ಅವರಿಂದ "ಸ್ವಯಂ ನಷ್ಟ ಪರಂನಾಶ" ಆಗುವುದೇ ಹೆಚ್ಚು ಎಂಬುದಕ್ಕೆ. "ಶಾಸ್ತ್ರಂಶಸ್ತ್ರಮೆ ಶಾಸ್ತ್ರಿ ಶಸ್ತ್ರ ಕನಲಾರತ್ನಾಕರಾಧೀಶ್ವರಾ"... ಸುಳ್ಳಾದರೆ ಒಂದು ಸಾರಿ ಸುತ್ತ ಕಣ್ಣಿಟ್ಟು ನೋಡಿ.

ಇತಿ ಸಂಸಾರಿ.

—:—

# ಅಳಿಯ ಅಲ್ಲ—?

"ಅಳಿಯ ಅಲ್ಲ ಮಗಳ ಗಂಡ'' ಎಂಬ ಗಾದೆ ನೀವು ಕೇಳಿರಬೇಕು. ಇದನ್ನು ಅದೂ ಒಂದೇ ಇದೂ ಒಂದೇ ಎನ್ನುವ ಸಂದರ್ಭದಲ್ಲಿ ಬಳಸುತ್ತಾರೆ. ಆದರೆ ಮಾವನಾಗಲು ಹೊರಟ ನನ್ನ ಮನಸ್ಸಿಗೆ ಇದರರ್ಥ ಬೇರೆಯಾಗಿಯೇ ಕಾಣುತ್ತದೆ. "ಅಳಿಯ ಎನ್ನುವ ಶಬ್ದವು ಶತ್ರುಸಮಾನವಾದುದು. ಅದನ್ನು ಅಲ್ಲಗಳೆದು ಆತ್ಮೀಯ ಭಾವನೆ ಬರುವುದಕ್ಕಾಗಿ ''ಮಗಳ ಗಂಡ'' ಎಂಬುದು ಸಂಭೋಧನಾದ್ಯೋತಕ'' ಎಂದು.

ಈ ವಿಮರ್ಶೆ ಹಿಡಿಯದಿದ್ದರೆ ನಿಮ್ಮ ''ಅಳಿಯ''ನನ್ನೇ ವಿಚಾರಿಸುತ್ತೇನೆ. ಇಲ್ಲಿ ಅಳಿಯನನ್ನು ತಿರುಗಿಸಿ ನೋಡುವಾಗ ಅವನ ಏಕೈಕ ಆಧಾರವಾದ ದೀಪಾವಳಿಯನ್ನು ಮರೆಯುವುದೆ? ಅಳಿಯ ದೀಪಾವಳಿಯ ಬಲಬಂಟನು. ಸಾಲದಾದರೆ ಕತ್ತು ಹಿಡಿದು ದಬ್ಬಿದರೂ ಕಾಲುಕೀಳದ ನಂಟ ಎನ್ನುತ್ತೇನೆ. ಇದು ನಮ್ಮಲ್ಲಿ ತಲತಲಾಂತರದಿಂದ ತೇಲುತ್ತಾ ಬಂದ ಸಂಸ್ಕೃತಿ. ಒಂದನ್ನು ಬಿಟ್ಟು ಇನ್ನೊಂದು ಕಳೆಯೇರುವುದಿಲ್ಲ. ಅಳಿಯನಿಲ್ಲದ ದೀಪಾವಳಿ ತರುಣಿಯಿಲ್ಲದ ದಿಬ್ಬಣದಂತೆ. ದೀಪಾವಳಿಯಿಲ್ಲದ ಅಳಿಯ ಹಲ್ಲಿಲ್ಲದ ಬಾಯಂತೆ.

ದೀಪಾವಳಿ ಬಂತೆಂದರೆ ಸರಿ! ಮಾವನೇ ಕೊಟ್ಟ ಒಡವೆ ತೊಡವೆಗಳನ್ನಾದರೂ ಬೆಳಗಿಸಿ ಧರಿಸಿಕೊಂಡು ಅವನ ಮುಂದೆ ತನ್ನ ಪೌರುಷವನ್ನು ಮೆರೆಸದಿದ್ದರೆ ಅಳಿಯನಿಗೆ ನಿದ್ದೆ ಬಾರದು. ಜೀವನದಲ್ಲಿ ''ವಿಜಯಯಾತ್ರೆ'' ಎಂದು ಹೇಳುವುದಾದರೆ ಅಂದಿನ ಪ್ರಯಾಣವನ್ನೇ. ಎಂದೂ ಕಾಣದೆ ಮೂಲೆಸೇರಿದ್ದ

ಶೀವಿ, ಬಿಗುವಮಾನ, ಗಾಂಭೀರ್ಯ ಶ್ರೀಮದ್ಗುಣಗಳು ಅಂದು ತಲೆ ಎತ್ತುವವು.

ಅಳಿಯನಾದವನಿಗೆ ಮಾವನ ಮನೆಯ ಸುಖಕ್ಕಿಂತ ಮಿಗಿಲಾದ್ದು ಬೇರಿಲ್ಲ. ಇದನ್ನು ನಮ್ಮ ಪವಿತ್ರ ದೇವರುಗಳ ದೃಷ್ಟಾಂತದಿಂದಲೂ ತಿಳಿಯಬಹುದು.

ಅಸಾರೇ ಖಲು ಸಂಸಾರೇ, ಸಾರಂಶ್ವಶುರ ಮಂದಿರಂ॥

ಹಿಮಾಲಯೇ ಹರ ಶ್ಶೇತೇ ಮಹೋದಧೌ॥ ನಿಸ್ಸಾರವಾದ ಸಂಸಾರದಲ್ಲಿ ಮಾವನಮನೆಯಲ್ಲಿ ಮಾತ್ರ ಸಾರವಿರುವುದು. ಆದ್ದರಿಂದಲೇ ಪಾರ್ವತಿಯ ಪತಿಯಾದ ಪರಮೇಶ್ವರನು ಗುಡ್ಡಕಾಡಾದರೂ ಚಿಂತಿಲ್ಲ ಪರ್ವತರಾಜನಾದರು ಹಿಮಾಲಯದಲ್ಲೇ ಬಿದ್ದುಕೊಂಡಿದ್ದಾನೆ. ವಿಷ್ಣುವು ಕ್ಷೀರಸಾಗರ ಕನ್ನೆಯಾದ ಲಕ್ಷ್ಮಿಯನ್ನು ಒಲಿದು ಆಲದೆಲೆಯೇ ಹಾಸಿಗೆಯಾದರೂ ಪರವಾಯಿಲ್ಲ ಅಲ್ಲೇ ಒದ್ದಾಡುತ್ತಿದ್ದಾನೆ. ಹೀಗಿರುವಾಗ ಹುಲುಮಾನವರಾದ ನಾವು, ನಮ್ಮ ಸಂಸ್ಕೃತಿಯನ್ನು ಕಾಪಾಡುತ್ತಿರುವ ಕೆಲವು ಅಳಿಯಂದಿರನ್ನು "ಮನೆಅಳಿಯ-ಮನೆತೊಳಿಯ" ಇತ್ಯಾದಿ ಹಂಗಿಸುವುದು ಅಕ್ಷಮ್ಯ ಅಪರಾಧ. ಅಲ್ಲದೆ ಕೆಲವು ೧೦೦× ಪೆದ್ದರಾದ ಅಳಿಯಂದಿರಿಗೂ ಸಹ ಮಾವನಮನೆಯ ಪ್ರಭಾವದಿಂದ ಪ್ರತಿಭೆಯುಂಟಾಗುವುದು. ಅಲ್ಲದೆ ಮಹಾಕವಿಗಳೂ ಆದವರಿದ್ದಾರೆ:-

ಯಾರದೋ ಮಧ್ಯಸ್ಥಿಕೆಯಿಂದ ಒಬ್ಬ ಹಗಲು ಕಣ್ಣಿನ, ಜೊತೆಗೆ ಬುದ್ಧಿಯೂ ಮಂಕಾಗಿರುವ ಮಹಾಶಯನಿಗೆ ಮದುವೆಯಾಯಿತು. ಬ್ರಹ್ಮಗಂಟೂನ್ನಿ. ದೀಪಾವಳಿ ಓಡಿಬಂತು. ರಾತ್ರೆ ಎಲ್ಲರೊಡನೆ ಊಟಮಾಡುತ್ತಿದ್ದಾಗ ಮನೆಬೆಕ್ಕು ಮಗಳ ಗಂಡನೆಂಬ ಮಮತೆಯಿಂದ ಅವನ ಎಲೆಯ ದೋಸೆಯೊಂದಕ್ಕೆ

ಬಾಯಿಹಾಕಿ ತಿನ್ನಲಾರಂಭಿಸಿತು. ಪಾಪ! ಅಳಿಯನೂ ಅದನ್ನೇ ತಿನ್ನಲಾರಂಭಿಸಿದ. ಪಕ್ಕದಲ್ಲಿದ್ದ ನಂಟ– "ಏನು ಭಾವ; ಅಕ್ಕನ ಪಾಲಿಗೆ ಬಾಯಿಹಾಕುವುದನ್ನು ನೋಡ್ತಿರಾ?" ಎಂದ. ಎಲ್ಲಿಂದ ಬಂತ್ಸೋ ಉತ್ತರ; ನೆಂಟರ ಮನೆಬೆಕ್ಕಿನ ಗುಣ ನೋಡೋಣ ಅಂತ ಸುಮ್ಮನಿದ್ದೆ. ಒಬ್ಬರ ತುತ್ತಿಗೆ ಬಾಯಿಹಾಕುವ ಬುದ್ಧಿ ಯನ್ನು ಬೆಕ್ಕಿಗೂ ಕಲಿಸಿದ್ದೀರಿನ್ನಿ; ಎಂದುಬಿಟ್ಟ.

ಅಲ್ಲದೆ ಭಾರವಿ ಎಂಬವನಿಗೆ "ಕಿರಾತಾರ್ಜುನೀಯ" ವೆಂಬ ಮಹಾಕಾವ್ಯವನ್ನು ಬರೆಯಲು ಕವಿತಾಶಕ್ತಿ ಹೊರಟದ್ದು ಮಾವನ ಮನೆಯಲ್ಲಿರುವಾಗಲೇ. ಅದೂ ಮನೆಅಳಿಯನಾಗಿ ಆರು ತಿಂಗಳು ತಳ್ಳುತ್ತಿದ್ದಾಗ. ಆದ್ದರಿಂದ ಕವಿಗಳಾಗಬಯ ಸುವವರು ಕಡಿಮೆಪಕ್ಷ ಆರುತಿಂಗಳಾದರೂ ಮನೆಅಳಿಯ ನಾಗಿ ಪರೀಕ್ಷಿಸಬೇಕು. ಇದೊಂದು ತರುಣೋನ್ಮುಖ ಕವಿ ಗಳಿಗೆ ನೂತನ ಸಂಶೋಧನಾಮಾರ್ಗ. ಮುಂದಿನ ಕವಿಪಿಂತ ಗಳಿಗೆ ವಿನೂತನ ಸಂಶೋಧಿತ ಗಂಡಸರ ಹೆರಿಗೆ ಆಸ್ಪತ್ರೆ, ಕವಿಗಳು ಹೆಚ್ಚಾಗಿ ಗಂಡಸರೇ ಆದಕಾರಣ ತಾಯಂದಿರು ಕ್ಷಮಿಸಬೇಕು.

ಕೆಲವು ಅಳಿಯಂದಿರಿಗೆ ಮಾವ ಅನ್ನಿಸಿಕೊಂಡ ಪ್ರಾಣಿ ಎಷ್ಟು ಸೇವೆ ಸಲ್ಲಿಸಿದರೂ ಸಾಲದು. ಮತ್ತು ಮತ್ತು ಅಳಿಯ ಗ್ರಹದ ಪೀಡೆ ಇದ್ದೇ ಇದೆ. ಆದ್ದರಿಂದಲೇ:–

ಸದಾವಕ್ರಃ ಸದಾಕ್ರೂರಃ ಉಚ್ಚಸ್ಥಾನ ಸದಾಪ್ರಿಯಃ॥
ಕನ್ಯಾರಾಶಿ ಸ್ಥಿತೋನಿತ್ಯಂ ಜಮಾತಾದಶಮೋಗ್ರಹಃ॥

ಎಂದು ನವಗ್ರಹಪೀಡೆಗಿಂತಲೂ ಹತ್ತನೇ ಗೃಹವಾದ ಅಳಿಯನ ಪೀಡೆ ಬಹಳ ಎಂದಿದ್ದಾರೆ. ಹಾಗೆಯೇ ಈ ಅಳಿಯಂದಿರ ಅದೃಷ್ಟ "ಖುಲಾಯಿಸು"ವ ಕಾಲವೂ ಬಂದಿದೆ.

ಪತ್ನೀ ಜ್ಯೈಷ್ಠಾ ಶಿಶು ಶ್ಯಾಲಃ ಪ್ರವಾಸೀಶ್ವಶುರಸ್ತಥಾ॥
ಪತ್ನೀ ಮಾತಾಸ್ವೇಷ್ಟ ಬಾರೀ, ಓಮಾತುರ್ಭಾಗ್ಯವರ್ಧಕಂ॥

ತನ್ನ ಹೆಂಡತಿಯೇ ಹಿರಿಯವಳು! ಇದ್ದೊಬ್ಬ ಭಾವ ಸಣ್ಣ ಮಗು!! ತಿರುಗಾಟದಲ್ಲಿರುವ ಮಾವ!!! ಅತ್ತೆಮ್ಮಾವರು ಹೇಳಿದ ಹಾಗೆ ಕೇಳುವವರು!!! ತಗೋ ಘೋಡಾ ಹೈ! ಮೈದಾನ್ ಹೈ...?

ಸೌದಿ ಅರೇಬಿಯಾ ದೇಶದಲ್ಲಿ ಈಗಲೂ ತರುಣ ತರುಣಿಯರ ಮಾರಾಟವಿದೆಯೆಂದು ಪ್ರತ್ಯಕ್ಷ ಕಂಡವರ ವರದಿಯನ್ನು ಪತ್ರಿಕೆಯಲ್ಲಿ ಓದಿದ್ದೇವೆ? ಮೂಗಿಗೆ ಬೆರಳಿಟ್ಟು ಬಿಟ್ಟಿ ಸಂತಾಪ ಸೂಚನೆಯನ್ನೂ ಮಾಡಿದ್ದೇವೆ. ಆದರೆ, ನಮ್ಮ ದೇಶದಲ್ಲಿ- ಊರಲ್ಲಿ- ಬೀದಿಯಲ್ಲಿ- ಯಾಕೆ ಮನೆಯಲ್ಲೇ ತರುಣ ತರುಣಿಯರ ಮಾರಾಟ ನಡೆಯುತ್ತದೆಂದರೆ ನೀವು ನಂಬುವಿರಾ? ನಂಬಿದರೆ ಎದುರಿಸುವ ಧೈರ್ಯವಿದೆಯೇ? ನನ್ನ ಮಗ, ''ಎಂ ಮೆ'' ಆಗಿದ್ದಾನೆ. ಅದಾಗಿದ್ದಾನೆ. ಇದಾಗಿದ್ದಾನೆ. ಅಂತ ಹತ್ತಿಪ್ಪತ್ತು ಸಾವಿರಗಳಿಗೆ ತಮ್ಮ ಜೊಚ್ಚಲು ಮಕ್ಕಳನ್ನಾದರೂ ಸರಿ. ಹೆಣ್ಣು ಹೆತ್ತವರಿಗೆ ನಾವು ಮಾರುವುದಿಲ್ಲವೆ? ತನ್ನನ್ನೇ ಮಾರಿಕೊಂಡವರು ನಾಳೆದಿನ "ಅಮ್ಮಾವರ ಗಂಡ"ರಾದರೆ ಆಶ್ಚರ್ಯಪಡಬೇಕೆ? ನಾವು ಹಣಕ್ಕಾಗಿ ''ಕಲಿಹರಿಶ್ಚಂದ್ರ"ರಾಗಲೂ ತಯಾರಾಗಿದ್ದೇವೆ. ಆದರೆ ಮನುಷ್ಯನ ಗುರಿಯು ಕೇವಲ ಹಣ ಸಂಪಾದನೆ ಮಾತ್ರವಲ್ಲ. ಒಂದನೆಯದು ಧರ್ಮ. ಅದರ ಮೂಲಕ ಅರ್ಥವನ್ನೂ ಸಾಧಿಸಬೇಕು. ಅಂದರೆ ದುಡಿದು ಗಳಿಸಬೇಕು. ಅದನ್ನೇ:-

ಉತ್ತಮಂ ಸ್ವಾರ್ಜಿತಂವಿತ್ತಂ, ಮಧ್ಯಮಂ ಪಿತ್ರಾರ್ಜಿತಂ॥
ಅಧಮಂ ಮಾತುಲಾದ್ದತ್ತಂ, ಸ್ತ್ರೀವಿತ್ತಮಧಮಾಧಮಂ॥

ಎಂದು ಸಾರಿದ್ದಾರೆ.

ನಮ್ಮ ಮದುವೆಯ ಕಾರ್ಯಕ್ರಮಗಳಲ್ಲಿ ಅಳಿಯನಾಗುವವನು, ನಮ್ಮ ಸಂಸ್ಕೃತಿಯನ್ನು ನಾವಿಷ್ಟರ ಮಟ್ಟಿಗೆ ಉಳಿಸಿಕೊಂಡಿದ್ದೇವೆ? ಎನ್ನುವಂತೆ ಒಂದು "ಕಾಶಿಯಾತ್ರೆ"ಯನ್ನು ಮಾಡಬೇಕು. ಅದು ತಾನು ನಟಿಸಿದ್ದನ್ನು ಮುಂದೆ ನಿಜವಾಗಿ ಮಾವನಿಗೆ ಮಾಡಿಸುವವರೂ ಇದ್ದಾರೆ. ಹಾಲಿಗೆ ಬಂದವನು ಎಮ್ಮೆಗೆ ಬೆಲೆಕಟ್ಟಿದ ಹಾಗಾಯಿತು. ಕ್ಷಮಿಸಿ.

ದೀಪಾವಳಿ ಹಬ್ಬವನ್ನು ದಿವಾಳಿ ಹಬ್ಬವೆಂದೂ ಕರೆಯುತ್ತಾರೆ. ದಿವಾಳಿ ಅಂದರೆ ಗೊತ್ತೇ ಇದೆ. ಪಾಪರ್. ಘರ್ ಖಾಲಿ. ಹಾಗೆ ನೋಡಿದಾಗ ಮಾವನಮನೆ ದಿವಾಳಿಗೂ ಅಳಿಯನಿಗೂ ನಿತ್ಯ ಸಂಬಂಧವಿದೆ. ದೀಪಾವಳಿ ಹಬ್ಬದಲ್ಲಿ ಅಳಿಯಂದಿರ ಹಾವಳಿಯಿಂದ ದಿವಾಳಿ ಆದ ಮಾವಂದಿರೇ ಆ ಹೆಸರು ಇಟ್ಟಿರಬೇಕು.

ಇನ್ನು ಕೆಲವರು ಮಾತಿಗೆ, "ಊಟವೆಲ್ಲಿ?" ''ಮಾವನ ಮನೆಯಲ್ಲಿ" ಅಂದರೆ ಹೋಟೆಲಲ್ಲಿ. "ಅವನನ್ನು ಮಾವನ ಮನೆಗೆ ಕಳಿಸಿದರು?" ಅಂದರೆ ಜೈಲಿಗೆ. ಹೀಗೆ ಹೇಳುವುದಿದೆ. ಇದು ವಾಸ್ತವಿಕ ವಾದವಲ್ಲ. ಮಾವನ ಮನೆಯಷ್ಟು ಊಟೋಪಚಾರಗಳು ಎಲ್ಲೂ ಸಿಗದು. ಆದರೆ ಕಬ್ಬು ಸಿಹಿಯೆಂದು ಅದರ ಬೇರನ್ನೂ ಜಗೆಯಬಹುದೆ?

ಶ್ವಶುರಗೃಹನಿವಾಸೋ ಸ್ವರ್ಗತುಲ್ಯೋನರಾಣಾಂ
ಯದಿಭವತಿವಿವೇಕೀ ಪಂಚವಾಷಡ್ದಿನಾ ನಿ॥
ದಧಿಮಧುಘೃವಲೋಭಾನ್ಮಾಸಮೇಕಂ ವ ಸೇಚ್ಚೇ–
ದ್ಭವತಿವಿಗತ ಲಜ್ಜೋಮಾನವೋ ಮಾನಹೀನಃ॥

ಎಂದು ಜಾಣ ಅಳಿಯನಿಗೊಂದು ಸೂಚನೆ.

ಸುಂದರಿಯಾದ ಹುಡುಗಿ ಸಿಗುವ ತನಕ ಮಾವನಿಗೆ ಸಾವಿರ ದಂಡ ಪ್ರಣಾಮ ಹಾಕಲೂ ಸಿದ್ಧ. ಆ ಮೇಲೆ ಅದೇ ಮಾವನನ್ನು ಬೀದಿಯಲ್ಲಿ ಬಯ್ಯಲೂ ಹಿಂಜರಿಯದ ಅಳಿಯಂದಿರಿದ್ದಾರೆ. ಅಂಥವರ ಸಾಲಿನಲ್ಲಿ ಈಶ್ವರನೂ ಒಬ್ಬನು. ಮನೆಗೆ ಬಂದ ಮಾವ ದಕ್ಷನನ್ನು ಮನ್ನಿಸದ ಮಹಾದೇವನವನು.

ಇನ್ನು ಸಾಹೇಬರ ಜೊತೆ ಜವಾನನಿದ್ದ ಹಾಗೆ ದೇವರ ಜೊತೆ ದೆವ್ವ ಇದ್ದ ಹಾಗೆ, ಅಳಿಯನ ಜೊತೆಗೊಬ್ಬ ಗಿಳಿಯನಿದ್ದಾನೆ. ಅಂದರೆ ಅಳಿಯನ ಗೆಳೆಯ. ಮೊದಲಿಗೆ ಮಾವನ ಚಕ್ರವ್ಯೂಹದಲ್ಲಿ ಬಳಸಿಬರುವುದಕ್ಕೆ ಇವನೊಡನೆ ಹೋಗುತ್ತಾರೆ ಅಳಿಯ ದೇವರು. ಆದರೆ ಈ ಗಿಳಿಯನಿಗೆ ಅಳಿಯನಿಗಿಂತಲೂ ಅಧಿಕ ಉಪಚಾರವಾಗಬೇಕು. ಇಲ್ಲವಾದರೆ ಆ ಮಾವನ ಷೋಡಶೋಪಚಾರವನ್ನು ಸಹ ಕುಶಲಚಿತ್ರಕ್ಕೆ ಮಸಿಗೆರೆಯೆಳೆದಂತೆ "ಎಲ್ಲ ಬಣ್ಣ ಮಸಿನುಂಗಿತು" ಆಗಿಬಿಡುವುದು. ಏಕಾದಶಿ ಉಪವಾಸ ಬೇಡವಾದರೂ ದ್ವಾದಶಿ ಪಾರಣೆಯಾಸೆಗಾಗಿ ಮಾಡಲೇಬೇಕು.

# 'ಕರ್ಮಣ್ಯೇವಾಧಿಕಾರಸ್ತೇ—'

ಗೀತೆ ಹುಟ್ಟಿದ್ದು ನಮ್ಮ ಭಾರತದಲ್ಲಿ. ಅದರಲ್ಲೂ ಕುರುಕ್ಷೇತ್ರದಲ್ಲಿ. ಆ ಕುರುಕ್ಷೇತ್ರದ ಚಿತ್ರವನ್ನು ನೆನೆಸಿಕೊಂಡರೆ ಗೀತೆ ಹುಟ್ಟಿದ್ದು ನಮ್ಮೂರಲ್ಲೇಯೆಂದು ಹೇಳಬೇಕು. ಯಾಕೆಂದರೆ ಪ್ರತಿಯೊಂದು ಕುಟುಂಬಗಳಲ್ಲೂ ಆ ಕಾಲದ ಲಾಗಾಯ್ತು ರೂಢಮೂಲವಾಗಿದೆಯೋ? ಎನ್ನುವಷ್ಟು ಬಲವಾಗಿ ದಾಯಾದಿ ಮತ್ಸರವು ಬೆಳೆಯುತ್ತಲೇ ಇದೆ. ಕುರುಕ್ಷೇತ್ರದವರ ಸಂಸ್ಕೃತಿಯುಳ್ಳದ್ದರಿಂದಲೋ ಏನೋ? ನಮ್ಮೂರವರಿಗೆ ಗೀತೆಯೆಂದರೆ ಪಂಚಪ್ರಾಣ. ಅದರ ಮಾತೆಂದರೆ ಮೂರನೇ ಹೆಂಡತಿಯ ಮಾತಿನಂತೆ.

ಯಾವ ಪುರಾಣ, ಶಾಸ್ತ್ರ, ಸ್ಮೃತಿಗಳದ್ದೇ ಆಗಲಿ, ಎಲ್ಲಾ ಮಾತುಗಳನ್ನು ಅನುಷ್ಠಾನದಲ್ಲಿರಿಸುವುದು ಸಾಮಾನ್ಯ ಮನುಷ್ಯರಿಗೆ ಅಸಾಧ್ಯ. ಯಾವುದಾದರೂ ಒಂದೆರಡು ಮಾತುಗಳನ್ನು ಆಚಾರದಲ್ಲಿಟ್ಟುಕೊಳ್ಳುವುದು ರೂಢಿ. ಇದನ್ನು ಎಲ್ಲ ಪಂಥದವರಲ್ಲಿಯೂ ಕಾಣಬಹುದು. ಹಾಗೆ ನಮ್ಮೂರವರೂ ಸಹ ಗೀತೆಯಲ್ಲಿ ಹೇಳಿದ "ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ" ಎಂಬ ಒಂದೇ ಮಾತನ್ನು ತಮ್ಮ ಸಕಲಕಾರ್ಯಗಳಲ್ಲೂ ತಪ್ಪದೇ ಅನುಸರಿಸುತ್ತಿದ್ದರು.

ನಮ್ಮೂರಲ್ಲಿ ಎಲ್ಲ ಬಗೆಯ ಸಂಘ, ಸಂಸ್ಥೆ, ಮಂಡಳಿ, ಕೂಟ, ಸಮಿತಿಗಳು ಹುಟ್ಟಿದ್ದವು. ಅಲ್ಲದೆ ಹೊರಗಿನವುಗಳ ಶಾಖೋಪಶಾಖೆಗಳೂ ಚಿಗುರಿದ್ದವು. ಈಗ ನೀವು ಬಂದು ನೋಡಿದರೆ ಒಂದೂ ಉಸಿರಾಡುತ್ತಿಲ್ಲ. ಯಾಕೆಂದರೆ ನನನು

ಪೋತ್ಸವದ 'ಬಾಲಸಸಿ'ಗಳಂತೆ ಮತ್ತೊಂದು ಮಳೆಗಾಲವನ್ನು ಕಂಡಿಲ್ಲ.

ಹೊರಗಿನಿಂದ ಬರುವ ಶಾಖಾಸಂಸ್ಥೆಗಳಿಗಾಗಲೀ ನಮ್ಮಲ್ಲೇ ಹುಟ್ಟಿದ ಬೀಜ ಸಂಘಗಳಿಗಾಗಲೀ ನಮ್ಮೂರ ವರು ನೀಡುವ ತ್ರಿಕರಣಪೂರ್ವಕ ಸಹಾಯವನ್ನು ನೋಡಿ ದರೆ, ಅವುಗಳ ಸತ್ಫಲವನ್ನು ಆಗಲೇ ಕಲ್ಪಿಸಿ ರಸಾಸ್ವಾದನೆ ಯನ್ನೂ ಮಾಡುವಿರಿ. ಅಲ್ಲದೆ ಕೂಡ್ಲೇ "ಆರಂಭ ಶೂರಾಃ ಖಲುನಿಮ್ಮ ಊರಾಃ" ಎಂದು ಬದಲಾಯಿಸಿಯೂ ಹೇಳುವಿರಿ. ಆದರೆ ಕರ್ಮಣ್ಯೇವಾಧಿಕಾರರಾದ ನಮ್ಮೂರವರು ನಿಮ್ಮ ಊಹೆಗೂ ಹೊಗಳಿಕೆಗೂ ಸತ್ಪಾತ್ರರಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ.

ಇಷ್ಟು ಹೇಳಿದ ಮೇಲೆ ನಮ್ಮವರ ಒಂದೆರಡು ವಿಷಯ ಗಳ ಸ್ಥೂಲ ಪರಿಚಯವನ್ನಾದರೂ ನಿಮ್ಮ ಮುಂದಿಡದಿದ್ದರೆ ನಾನು ಹೆಂಡತಿಗೆ ಕೊಟ್ಟ ಕೈಯಿಂದಲೇ ಬರೆಯುತ್ತಿದ್ದರೂ, "ಇವನ ಲೇಖನಿಯು ನಿರಾಧಾರ"ವೆಂದು ನಿಮಗನಿಸಬಹುದು. ಅದಕ್ಕಾಗಿ ದಿಗ್ದರ್ಶನಮಾಡುತ್ತೇನೆ. ನಮ್ಮೂರಲ್ಲಿ ಒಂದು ಸಾರ್ವಜನಿಕ ಕಟ್ಟಡವಾಗಬೇಕು. ಮಕ್ಕಳಿಂದ ಹಿಡಿದು ಮುದುಕರ ವರೆಗೆ ಎಲ್ಲ ಗಂಡು ಹೆಣ್ಣುಗಳು ಕೈಯೆತ್ತಿದವು. ಕೆಲವು ಗರ್ಭಿಣಿಯರು ಎರಡೂ ಕೈಗಳನ್ನೂ ಎತ್ತಿದರು, ಸರಿ! ಸುತ್ತಮುತ್ತಲ ಕುಬೇರ ಸುಧಾಮರೆನ್ನದೆ ತಲೆಯಿದ್ದವನಿಂದ ಚಂದವಲ್ಲದಿದ್ದರೂ ಚಂದಾವೆತ್ತಲಾಯಿತು. ಹಾಂ-ಹೂಂ ಎನ್ನು ವಷ್ಟರಲ್ಲಿ ಕಟ್ಟಡ ನಿಂತಿತು. ಕಟ್ಟಡಕ್ಕೆ ಕಲ್ಲು ಹಾಕಲು ಸಾಮಾನ್ಯ ಮಂತ್ರಿಗಳು ಬಂದಿದ್ದರಿಂದ ವಿಶೇಷ ಮಂತ್ರಿಗಳು ಕತ್ತರಿ ಹಿಡಿದುಕೊಂಡೇ ಬಂದರು. ಅಂತೂ ಕಟ್ಟಡದ ದ್ವಾರ

ಲಕ್ಷ್ಮಿಯು ಸೆರಗನ್ನು–ಬಾಗಿಲಲ್ಲಿ ಕಟ್ಟಿದ ರಿಬ್ಬನ್ನು, ಕತ್ತರಿಸಿದ ಸಮಾರಂಭವು ಸಂ-ಭ್ರಮದಿಂದಲೇ ಮುಗಿಯಿತು. ಇದು ನಡೆದದ್ದು ಶುಕ್ಲಪಕ್ಷದಲ್ಲಿ. ಮುಂದೆ ಒಂದೇ ವಾರದಲ್ಲಿ ಕೃಷ್ಣ ಪಕ್ಷ ಬಂತು. ಅಮವಾಸ್ಯೆಯ ದಿನ ರಾತ್ರಿ ನಮ್ಮ ಪೂಜಾರಿಗಳ ಕಳ್ಳಿಹಸುವೊಂದನ್ನು ಅದೇ ಕಟ್ಟಡದಲ್ಲಿ ಹುಲಿಹಿಡಿಯಿತಂತೆ. ಕಾರಣವೇನೆಂದರೆ ಬೀಗಮ್ಮ ಬಾಗಮ್ಮರನ್ನು ಯಾರೋ ...ಗಾರಿಕೋರನು ಭಂಗಪಡಿಸಿದ್ದನು. ನಿಜವಾದ ಕಾರಣ ನಾನು ಹೇಳಬೇಕಾಗಿಲ್ಲ ತಾನೆ?

ಒಂದು ದಿನ ನಮ್ಮೂರಿನ, ಅ, ಈ, ಉಪಾಧ್ಯಾಯರಿಗೂ ನನಗೂ ಕೆಳಕಂಡಂತೆ ಸಂಭಾಷಣೆ ನಡೆಯಿತು.

"ಏನ್ರೀ? ಮೇಷ್ಟ್ರೆ ನಿಮಗೆ ಸಂತಾನವೆಷ್ಟು ಸ್ವಾಮಿ?"

"ನಮ್ಮ ಕುಲದೇವರೇ ಸಂತಾನ ಗೋಪಾಲ ಸ್ವಾಮಿ?"

"ಅಂದರೆ?"

"ಅಂದರೆ ಈ ತನಕ ನನ್ನಾಕೆ ಹೊರಹಾಕಿದ್ದರ ಪೈಕಿ ಒಂಭತ್ತು ಗಂಡು ಏಳು ಹೆಣ್ಣು. ಇನ್ನೆಷ್ಟು ತುಂಬಿಕೊಂಡಿದ್ದಾಳೊ? ಆ ಸಂತಾನ ಗೋಪಾಲನೇ ಬಲ್ಲ."

"ಸರಿ! ಸರಿ! ಅಲ್ಲರೀ ನಿಮಗೆ ಬುದ್ಧಿಗಿದ್ದಿ ಉಂಟೆ ಇಲ್ವೆ."

"ಬುದ್ಧಿಯಿಂದ ಅದೆಲ್ಲಾ ಆಗೋ ಕೆಲಸವಲ್ಲ ಸ್ವಾಮಿ."

"ಮತ್ತೇನು ಸ್ವಾಮಿ! ಸರಕಾರ ಮಿತಸಂತಾನ ಕಾನೂನಿನ ಪ್ರಕಾರ ನಿಮ್ಮ ಮೇಲೆ ಕೇಸು ಹಾಕುತ್ತೆ. ಅಲ್ಲದೆ ನಿಮ್ಮ ಸಂಬಳದಲ್ಲಿ ಈ ಮರಿಗಳನ್ನು ಸಾಕುವುದಾದರೂ ಹೇಗೆ? ಹೋಗಲಿ ಮುಂದೆ ಅವುಗಳ ಗತಿಯಾದರೂ ಏನು? ಒಂದೂ ಯೋಚನೆ ಮಾಡಬೇಡವೆ?"

"ಯೋಚನೆಯೇನು ಬಂತು ಸ್ವಾಮಿ? ಎಲ್ಲಾ ಆವನಿ

ಪ್ಪಾನೆ ಹೇಳಲಿಲ್ವೆ? 'ಕರ್ಮಣ್ಯೇವಾಧಿಕಾರಸ್ತೇ' ಅಂತ."

ಊರಿನ ಸುದ್ದಿನೇ ಹೇಳ್ತಾನೆ ತನ್ನದು ಒಂದೂ ಬಿಚ್ಚೋಲ್ಲ ಅನ್ನಬೇಡಿ. ಒಂದೇ ಒಂದು ಕೇಳಿ. ನನ್ನಾಕೆಯ ಪಾಕಾಂದ್ರೆ ನಳಪಾಕ ಆಚೆ, ಅದು ಈಚೆ. ಹತ್ತಿರ ಸೇರಿಸಬಾರದು. ಅಂಥ ಪಾಕವನ್ನು ಹತ್ತು ವರ್ಷದಿಂದ ನುಂಗಿನುಂಗಿ ಸುಸ್ತು ಹೊಡೆದು, ಹನ್ನೊಂದನೇ ವರ್ಷದ ಮೊದಲದಿನ ಯುಗಾದಿ ಹಬ್ಬದ ದಿನ, ಆವರೆಗೂ ಒಟ್ಟುಮಾಡಿಕೊಂಡಿದ್ದ ಧೈರ್ಯವನ್ನೆಲ್ಲ ಸೇರಿಸಿ ಕೇಳಿಯೇ ಬಿಟ್ಟೆ:- ಲೇ! ಇದೇನೇ? ಈ ವರ್ಷದ ಯುಗಾದಿಯಲ್ಲೂ ಷಡ್ರಸಗಳಲ್ಲಿ ಕಟು, ಕಷಾಯ, ತಿಕ್ತಗಳನ್ನು ಮಾತ್ರ ಸೇರಿಸಿ ಪಾಕಮಾಡಿದ್ದಿಯಲ್ಲೇ ಎಂದು. ಆವರೆ ಎಂದೂ ಗಂಡ ಅನ್ನಿಸಿಕೊಂಡು ದಬ್ಬಾಳಿಕೆ ನಡೆಸದ ನನ್ನ ಅಂದಿನ ಬೈಗಳನ್ನು ಅವಳು ಲೆಕ್ಕಿಸುವಳೆ? ಅಂದೇ ಬಿಟ್ಟಳು:- ರ್‍ರೀ! ನಾನೇನು ತಿಂದುನೋಡಿ ಅಡುಗೆ ಮಾಡೋ ದಿಲ್ಲ. ಏನೋ ಹೆಂಗಸಾಗಿ ಹುಟ್ಟಿದ ತಪ್ಪಿಗೆ ಅಡುಗೆ ಮಾಡೋದು ನನ್ನ ಕರ್ಮ ಅಂತ ಮಾಡುತ್ತೇನೆ ಅಷ್ಟೆ. ರುಚಿ ಹೇಗಾದರೇನು? ಕೆಲಸ ಆದರೆ ಸರಿ. ಕರ್ಮಣ್ಯೇವಾಧಿಕಾರ...

ನೀರಿದ್ದಲ್ಲಿ ಕೆಸರು, ದೀಪದಡಿ ಕತ್ತಲೆ. ಈ ಮಾತುಗಳನ್ನು ಸಾರ್ಥಕಪಡಿಸಲೋಸುಗ ಕೆಲವರು ನಮ್ಮೂರಲ್ಲಿ ಶ್ರಮಿಸುತ್ತಿದ್ದರು. ಅವರ ಸಮಾಚಾರ ಸ್ವಲ್ಪ ಕೇಳಿ

ನಮ್ಮೂರು ಸರ್ವಾಂಗ ಸುಂದರವಾಗಿದೆ. ಹೋಟೆಲು, ಸೆಲೂನು, ಗಡಂಗು, ಆಸ್ಪತ್ರೆ, ಜೂಜಿನಕಟ್ಟೆ, ಜೀನಸಿನಂಗಡಿ, ಹಳೇ ದೇವಸ್ಥಾನ, ಕಣ್ಣುಸನ್ನೆಯವರ ಮನೆ ಇವೇ ಸರ್ವಾಂಗಗಳು. ಆದರೆ ಒಂದೇ ಒಂದು ಸಂಘದ ಕೊರತೆಯಿತ್ತು. ಈ ವಿಷಯ ಹೊಳೆದದ್ದು ಗುದ್ದಲಿ ಭೀಮರಾಯರಿಗೆ. ಈ

ಗುದ್ದಲಿಯೆಂಬುದು ಅವರ ಕುಲಬಿರುದು. ಹಿಂದಿನಿಂದಲಾಗಾಯಿತು ಆ ವೂರಲ್ಲಿ ಯಾವ ಕೆಲಸವಾರಂಭವಾಗುವುದಾದರೂ ಅವರ ಹಿರಿಯರು ಬಂದು ಗುದ್ದಲಿಪೂಜೆ ಮಾಡಬೇಕು. ಕಾಲಕ್ರಮದಿಂದ ಆ ಗೌರವ ಅಳಿದರೂ ಹೆಸರು ಉಳಿಯಿತು. ವಿಷಯ ಹೊಳೆದ ಕೂಡಲೇ ಗುದ್ದಲಿ ಭೀಮರಾಯರು, ಸಾಕ್ಷಿ ಶಾಮಣ್ಣನವರಲ್ಲಿಗೆ ಕಾಲು ದೂಡಿದರು. ಅವರಿಗೂ ಆ ಸಾಕ್ಷಿಯೆಂಬ ಅಡ್ಡ ಹೆಸರು ಪಿತ್ರಾರ್ಜಿತ. ಅವರ ತಂದೆ ಆ ವೂರಲ್ಲಿ ಯಾರು ಬೇಕಾದರೆ ಜಗಳವಾಡಲಿ. ಸುಳ್ಳಾದರೆ ಸುಳ್ಳು ಸತ್ಯವಾದರೆ ಸತ್ಯ ಸಾಕ್ಷಿ ಹೇಳಿ ತಾನು ಹಿಡಿದ ಪಕ್ಷವನ್ನು ಗೆಲ್ಲಿಸುತ್ತಿದ್ದರು. ತಂದೆ ಸತ್ತಮೇಲೆ ಪಿತ್ರಾರ್ಜಿತವಾಗಿ ಉಳಿದದ್ದು ಅದೊಂದೇ.

ಸಾಕ್ಷಿ ಶಾಮಣ್ಣನವರು ಗುದ್ದಲಿ ಭೀಮರಾಯರಿಗೆ ಯಾವಾಗಲೂ ಬಲಗೈಯಿದ್ದಹಾಗೆ. ಅವರಿಬ್ಬರೂ ಸೇರಿದರೆ ಆಕಾಶಕ್ಕಾದರೂ ಏಣಿ ಏರಿಸಬಲ್ಲರು ಆದರೆ ಅಷ್ಟೆತ್ತರದ ಬಿದಿರು ಮಾತ್ರ ಈ ವರೆಗೆ ಸಿಕ್ಕಿಲ್ಲ. ಭೀಮರಾಯರ ಸೂಚನೆ ಶಾಮಣ್ಣನವರಿಗೆ ಸೂಕ್ತವೆನಿಸಿತು. ಆದರೆ ಊರಿಗೆ ಬೇಕಾದ ಕೆಲಸವಾದ್ದರಿಂದ ತಾವುಗಳು ಮಾತ್ರ ಲೆಕ್ಕಹಾಕಿದರೆ ಸಾಲದೆಂದು ಯೋಚಿಸಿ ಬಡ್ಡಿ ಬಾಲಯ್ಯನವರನ್ನು ಕರೆಕಳುಹಿಸಿದರು. ಅವರು ಇವರಂತೆ ಪಿತ್ರಾರ್ಜಿತದಿಂದ ಮೆರೆಯುವವರಲ್ಲ. ತಮ್ಮ ಹೆಸರನ್ನು ತಾವೇ ಗಳಿಸಿದ್ದರು ಬಡ್ಡಿಬಾಲಯ್ಯ ಎಂದು. ಅವರಲ್ಲಿ ಕೊಂಡ ಹಣಕ್ಕೆ ಬಡ್ಡಿ ೧ ವರ್ಷದ್ದಾದರೂ ಸರಿ, ಮೊದಲೇ ಕೊಡಬೇಕು. ಇಲ್ಲವಾದರೆ ಅಸಲಿನಲ್ಲಿಯೇ ಮುರಿದು ಕೊಡುತ್ತಾರೆ. ವರ್ಷವರ್ಷವೂ ಬಡ್ಡಿ ಕೊಡುತ್ತಾ ಬಂದರೆ ಅಸಲನ್ನು ಕೇಳುವುದೇಯಿಲ್ಲ. ಅಸಲು ಹೋದರೂ

ಸರಿ ಬಡ್ಡಿಯು ಕಾಸನ್ನೂ ಬಿಡುವವರಲ್ಲ. ಅವರ ಅಭಿಪ್ರಾಯದಲ್ಲಿ ಬಡ್ಡಿಯೆಂದರೆ ಲಕ್ಷ್ಮಿಯ ಚೊಚ್ಚಲು ಮಗು, ಅದನ್ನು ಸಾಕಿದರೆ ತಾಯಿ ಸ್ವಾಭಾವಿಕವಾಗಿ ಸಂತಸಗೊಳ್ಳುತ್ತಾಳೆಂದು. ಇದರಿಂದ ಸ್ವತಃ ಜನರಿಂದ ಬಡ್ಡಿ ಬಾಲಯ್ಯನೆಂದು ಕರೆಸಿಕೊಳ್ಳುತ್ತಿದ್ದರು.

ಗುದ್ದಲಿ ಭೀಮರಾಯರು, ಸಾಕ್ಷಿ ಶಾಮಣ್ಣನವರು, ಬಡ್ಡಿ ಬಾಲಯ್ಯನವರುಗಳಲ್ಲಿ ವಿಚಾರಮಥನವಾಯಿತು:— ನಮ್ಮೂರಲ್ಲಿ ಎಲ್ಲಯಿದ್ದರೂ ಒಂದು ಸಂಘವಿಲ್ಲ. ಅದನ್ನು ಸ್ಥಾಪಿಸಲೇಬೇಕು, ಎಂದು ತ್ರಿಮೂರ್ತಿಗಳು ತೀರ್ಮಾನಿಸಿದರು. ಆದರೆ ಸಂಘದ ಧ್ಯೇಯದ ವಿಷಯದಲ್ಲಿ ಒಬ್ಬೊಬ್ಬರದು ಒಂದೊಂದು ಅಭಿಪ್ರಾಯ. ಸಾಕ್ಷಿ ಶಾಮಣ್ಣ ಬಹಳ ಬಡವರು. ಏಳು ಮಂದಿ ಕನ್ಯಾಪಿತೃಗಳು ಬೇರೆ. ಅವುಗಳಲ್ಲಿ ನಾಲ್ಕು ತಾನು ಮುಂದೆ ತಾನು ಮುಂದೆಂದು ಲಗ್ನಕ್ಕೆ ತಯಾರಾಗಿದ್ದವು. ಇದನ್ನು ಲೆಕ್ಕ ಹಾಕಿ ತನ್ನ ಅಮೂಲ್ಯ ಅಭಿಪ್ರಾಯವನ್ನಿತ್ತರು:- ನಮ್ಮ ಸಂಘದ ಮೂಲಕ ಊರಿನ ಬಡಬಗ್ಗರ ಹೆಣ್ಣು ಮಕ್ಕಳಿಗೆ ವರ ಗೊತ್ತುಮಾಡಿ ಮದುವೆ ಮಾಡಿಸುವಂತಾಗಬೇಕು ಎಂದು. ಈ ಅಭಿಪ್ರಾಯವನ್ನು ಇನ್ನಿಬ್ಬರು ಒಪ್ಪಿಕೊಂಡರೂ ತಮ್ಮ ಅಭಿಪ್ರಾಯವನ್ನು ಹೇಳಿಯೇಬಿಟ್ಟರು. `ಊರಿನ ವಿಧವೆಯವರಿಗೆ ಉದ್ಯೋಗ ಕಲ್ಪಿಸಿ ಅವರ ಜೀವನಕ್ಕೆ ವೇತನವು ಈ ಸಂಘದಿಂದ ಸಿಗಬೇಕು. ಇದು ಗುದ್ದಲಿ ಭೀಮರಾಯರ ಸೂಚನೆ. ಇದನ್ನಿತ್ತಾಗ ತಮ್ಮಲ್ಲಿ ಹಾಲಿಯಿರುವ ವಿಧವೆ ಸೋದರತ್ತೆ ಒಂದು ತೀರಿದ ಅಣ್ಣನ ಹೆಂಡತಿ ಎರಡು, ತಂಗಿಯ ಮಗಳು ಬಾಲವಿಧವೆ ಮೂರು. ಇವರೆಲ್ಲರನ್ನು ಧ್ಯಾನಿಸಿದ್ದರು. ಈ ಸೂಚನೆಯೂ ತ್ರಿಕೂಟದಲ್ಲಿ ನೆಲೆಯಾಯಿತು. ಅಲ್ಲದೆ

ಮೂವರು ಹೆಂಡಂದಿರನ್ನು ಕಳಕೊಂಡ ಬಡ್ಡಿ ಬಾಲಯ್ಯ ನವರ ವಿಧುರೋದ್ಧಾರದ ಉದ್ದಿಶ್ಯವೂ ಸಮ್ಮತವಾಯಿತು.

ಇನ್ನು ಸಂಘದ ನಾಮಕರಣ. ಈ ವಿಷಯದಲ್ಲಿ ಮೂವರು ಮೂರು ಹೆಸರುಗಳನ್ನು ಸೂಚಿಸಿದರು. ಬಾಲಯ್ಯನವರು ತಮ್ಮ ಕುಲದೇವತೆಯಾದ ಕಾಲಭೈರವನ ಹೆಸರು ಸಂಘದ ಹೆಸರಿನ ಒಂದು ಅಕ್ಷರದಲ್ಲಿಯಾದರೂ ಇರಬೇಕೆಂದರು. ಶಾಮಣ್ಣನವರು, ಈ ಸಂಘದ ಉದ್ದಿಶ್ಯದಿಂದ ಸಮ್ಮೂರು ಖಂಡಿತವಾಗಿಯೂ ಮೇಲೆ ಬೀಳುತ್ತದೆ. ಆದ್ದರಿಂದ ಊರು ಮೇಲೆ ಬೀಳುವ ಸಂಘವೆಂದು ನಾಮಕರಣವಾಗಲಿ ಎಂದರು. ಆದರೆ ಭೀಮಣ್ಣನವರು ಮಾತ್ರ, ಇದ್ದುದನ್ನು ಇದ್ದ ಹಾಗೆ ತಿಳಿಸಬೇಕು. ನಾವು ಈ ಸಂಘದ ಮೂಲಕ ಹುಡುಗಿಯರಿಗೆ ವರ ಗೊತ್ತು ಮಾಡುವವು. ವಿಧವೆಯರಿಗೆ ಆಧಾರ, ವಿಧುರರ ಉದ್ಧಾರ ಈ ಕೆಲಸಗಳನ್ನು ಸಾಧಿಸಬೇಕೆಂದಿದ್ದೇವೆ. ಇನ್ನು ಈಗಿನವರನ್ನು ಮೆಚ್ಚಿಸಬೇಕಾದರೆ ಸ್ವಲ್ಪ ಶಾಹಿತ್ಯ ಶೇವೆಯೂ ಆಗಬೇಕು. ಇದನ್ನೆಲ್ಲ ಸೇರಿಸಿ, "ಕನ್ಯಾ ವಿಧವೆ ವಿಧುರ ಶಹಿತಶೇವೆ" ಎಂದು ಸಂಘಕ್ಕೆ ಹೆಸರಿಡಬಹುದು ಎಂದರು. ಎಲ್ಲರೂ ಒಪ್ಪಿ ಹಾಗೆಯೇ ನಾಮಕರಣವನ್ನೂ ಮಾಡಿದರು.

ಮೇಲಿನ ಕಾಲ್ಪನಿಕ ಸಂಗತಿಯನ್ನು ಯಾಕೆ ತಿಳಿಸಿದೆನೆಂದರೆ ಈಗ ನಾವು ಪ್ರತಿಯೊಂದು ಧಾರ್ಮಿಕ, ಲೌಕಿಕ, ಸಾಮಾಜಿಕ ಕಾರ್ಯಗಳಲ್ಲಿಯೂ ಸ್ವಾರ್ಥವಿಟ್ಟುಕೊಂಡೇ ಮುಂದುವರಿಯುತ್ತೇವೆ. ದಂಪತಿ ಪೂಜೆಮಾಡುವುದು ಅಳಿಯ ಮಗಳಿಗೆ. ಗೋದಾನ ಕೊಡುವುದು ಮೊಮ್ಮಗನಿಗೆ. ಔತಣಕ್ಕೆ ಕರೆಯುವುದು ಮೊದಲು ಮೇಲಾಧಿಕಾರಿಗಳನ್ನು, ಸೇವೆ ಸಲ್ಲಿ

ಸುವುದು ಶ್ರೀಮಂತರಿಗೆ. ಸಹಾಯ ಮಾಡುವುದು ಸೆಂಟರಿಷ್ಟ ರಿಗೆ. ನೀವು ಸುತ್ತಲೂ ಒಮ್ಮೆ ಕಣ್ಣಿಟ್ಟು ನೋಡಿದರೆ ನಾನು ಹೆಚ್ಚು ಹೇಳಬೇಕಾಗಿಲ್ಲ. ನಮ್ಮ ನಾಯಕರಾಗಲೀ ನಾವಾ ಗಲೀ ಸ್ವಾರ್ಥವನ್ನು ಬಿಟ್ಟಾಗ, ಕರ್ಮವನ್ನು ಕುಶಲತೆಯಿಂದ ಮಾಡಿದಾಗ, ನಮ್ಮ ಸ್ವಾತಂತ್ರ್ಯ ಸ್ಥಿರವಾಗುವುದು. ಆದರೆ ನಾವೆಲ್ಲರೂ "ಓದೋದು ಶಾಸ್ತ್ರ ಹಾಕೋದು ಗಾಳ" ಆದ್ದ ರಿಂದ ಗಾಳಕ್ಕೆ ಸಿಕ್ಕಿದ ಮೀನಿನ ಗತಿ ಬಂದಿದೆ.

## ಯುಗಪುರುಷ ಪ್ರಕಟನಾಲಯದ ಕೃತಿಗಳು

**ಪ್ರಕಟಣೆಗಳು**

ಮೊದಲ ವರ್ಷದ ಕೃತಿಗಳು:

| | | | |
|---|---|---|---|
| ೧. | ಕ್ಷಾತ್ರದರ್ಶನ | [ಅ. ಗೌ. ಕಿ.] | ೧-೦-೦ |
| ೨. | ಯೋಗಲಹರಿ | [ಅ. ಗೌ. ಕಿ.] | ೧-೦-೦ |
| ೩. | ಸಮರ್ಪಣೆ | [ಕಮಲನಾಭ] | ೧-೦-೦ |

೨ನೆ ವರ್ಷದ ಕೃತಿಗಳು:

| | | | |
|---|---|---|---|
| ೧. | ಸುಮ ಸಂಚಯ | [ಕಮಲನಾಭ] | ೧-೦-೦ |
| ೨. | ಶಿವ ಲೇಶ್ಯೆ | [ಅ. ಗೌ. ಕಿ.] | ೧-೮-೦ |
| ೩. | ಬೇವು ಬೆಲ್ಲ | [ಪ. ಸೀ. ಭ.] | ೦-೮-೦ |

ಮೂರನೆ ವರ್ಷದ ಕೃತಿಗಳು:

| | | | |
|---|---|---|---|
| ೧. | ವಂದನಾರ್ಪಣೆ | [ಪು. ಹ. ಆ.] | ೧-೦-೦ |
| ೨. | ಅವಳ ನೆನಪು | [“ರಸಿಕ”] | ೦-೮-೦ |
| ೩. | ಚಾರು-ಚಯನ | [ಕಮಲನಾಭ] | ೧-೮-೦ |

ವರ್ಷಂಪ್ರತಿ ರೂ. ೫ನ್ನು ತೆತ್ತು ಚಂದಾದಾರರಾಗುವ ಸದಸ್ಯಗಾರರಿಗೆ ಯುಗಪುರುಷದ ೧೨ ಸಂಚಿಕೆಗಳನ್ನೂ, ರೂ. ೧ ಬೆಲೆಯ ವಿಶಿಷ್ಟ ರೀತಿಯ ವಿಶೇಷಾಂಕವನ್ನೂ, ರೂ. ೩ ಬೆಲೆಯ ಪ್ರಕಟನೆಗಳನ್ನೂ ಪ್ರತಿ ವರ್ಷ ಪಡೆಯುವ ಸೌಲಭ್ಯ.

**ಯುಗಪುರುಷ ಪ್ರಕಟನಾಲಯ,**

ಕಿನ್ನಿಗೋಳಿ, ದ. ಕ.